
# ದೆಹಲಿ ಕರ್ನಾಟಕ ಸಂಘದ

# ಅಭಿಮತ

ಡಿಸೆಂಬರ್ 2021
ಬೆಲೆ ರೂ. 1

## ರಾಷ್ಟ್ರಪತಿಗಳಿಂದ ಪದ್ಮಪ್ರಶಸ್ತಿ ಪುರಸ್ಕೃತರಾದ ಹೆಮ್ಮೆಯ ಕನ್ನಡ ಕಣ್ಮಣಿಗಳು




ಶ್ರೀ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳು
ಪೇಜಾವರ ಮಠ, ಉಡುಪಿ,
(ಮರಣೋತ್ತರ) ಪದ್ಮವಿಭೂಷಣ




ಗಾಯಕ ಎಸ್. ಪಿ. ಬಾಲಸುಬ್ರಹ್ಮಣ್ಯಂ
(ಮರಣೋತ್ತರ) ಪದ್ಮವಿಭೂಷಣ



ಶ್ರೀ ಜಾರ್ಜ್ ಫರ್ನಾಂಡೀಸ್
(ಮರಣೋತ್ತರ) ಪದ್ಮವಿಭೂಷಣ



ಡಾ. ಬಿ.ಎಂ. ಹೆಗ್ಡೆ
ಪದ್ಮವಿಭೂಷಣ



ಡಾ. ಚಂದ್ರಶೇಖರ ಕಂಬಾರ
ಪದ್ಮಭೂಷಣ



ಡಾ. ವಿಜಯ ಸಂಕೇಶ್ವರ
ಪದ್ಮಶ್ರೀ



ಡಾ. ಬಿ.ಎನ್. ಗಂಗಾಧರ
ಪದ್ಮಶ್ರೀ



ಶ್ರೀ ಗಣೇಶ್ ಎಂ.ಪಿ
ಪದ್ಮಶ್ರೀ




ಶ್ರೀ ವೆಂಕಟೇಶ್ ಕೆ.ವೈ
ಪದ್ಮಶ್ರೀ



ಶ್ರೀ ಭರತ್ ಗೋಯಂಕ
ಪದ್ಮಶ್ರೀ



ಶ್ರೀ ಹರೇಕಳ ಹಾಜಬ್ಬ
ಪದ್ಮಶ್ರೀ



ಶ್ರೀ ರಂಗಸಾಮಿ ಲಕ್ಷ್ಮೀ ನಾರಾಯಣ ಕಶ್ಯಪ್
ಪದ್ಮಶ್ರೀ



ಶ್ರೀಮತಿ ಕೆ.ಎಸ್. ಜಯಲಕ್ಷ್ಮೀ
ಪದ್ಮಶ್ರೀ



ಶ್ರೀಮತಿ ತುಳಸೀ ಗೌಡ
ಪದ್ಮಶ್ರೀ



ಮಾತಾ ಬಿ. ಮಂಜಮ್ಮ ಜೋಗತಿ
ಪದ್ಮಶ್ರೀ



**ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು**
ಡಾ. ಎಸ್.ಎಂ. ಕಂಟೀಕರ್




**ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪುರಸ್ಕೃತರು**
ಡಾ. ಗುರುರಾಜ ಸಂಗೊಂದಿಮಠ ಮತ್ತು ಡಾ. ಅಕ್ಷಯ್ ಗೌಡ ಎಂ.ಕೆ.

# ದೆಹಲಿ ಕರ್ನಾಟಕ ಸಂಘದ ನೂತನ ಕಾರ್ಯಕಾರಿ ಸಮಿತಿ ಪದಾಧಿಕಾರಿಗಳು ಮತ್ತು ಅಧ್ಯಕ್ಷರಿಂದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ

ದೆಹಲಿ ಕರ್ನಾಟಕ ಸಂಘದ ನೂತನ ಕಾರ್ಯಕಾರಿ ಸಮಿತಿಯ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ ಶ್ರೀ ಆರ್. ರೇಣುಕುಮಾರ್ ಹಾಗು ಪದಾಧಿಕಾರಿಗಳು ಮತ್ತು ಸಂಘದ ಸದಸ್ಯರು ದಿನಾಂಕ 10.11.2021 ರಂದು ದೆಹಲಿಯ ಕರ್ನಾಟಕ ಭವನದಲ್ಲಿ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಬಸವರಾಜ ಎಸ್. ಬೊಮ್ಮಾಯಿಯವರನ್ನು ಭೇಟಿ ಮಾಡಿದರು.



ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ, 1948ರಲ್ಲಿ ಸ್ಥಾಪನಾ ನಂತರ ಈವರೆಗೆ ದೆಹಲಿ ಕರ್ನಾಟಕ ಸಂಘ ನಡೆದು ಬಂದ ಬಗ್ಗೆ ಮಾಹಿತಿಯನ್ನೀಯುತ್ತಾ, ದೆಹಲಿ ಕರ್ನಾಟಕ ಸಂಘದ ಮಾಸಿಕ ಪತ್ರಿಕೆ 'ಅಭಿಮತ'ದ ಪ್ರತಿಗಳನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ನೀಡಿ ದೆಹಲಿ ಕರ್ನಾಟಕ ಸಂಘದ ಕಾರ್ಯ ಚಟುವಟಿಕೆಗಳ ಸಂಕ್ಷಿಪ್ತ ಮಾಹಿತಿ ನೀಡಲಾಯಿತು. ಮುಖ್ಯಮಂತ್ರಿಗಳು ಅಭಿಮತ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ದೆಹಲಿ ಕರ್ನಾಟಕ ಸಂಘ 2022–23ರಲ್ಲಿ 75 ವರ್ಷಗಳಿಗೆ ಕಾಲಿಡುತ್ತಿರುವ ಸಂದರ್ಭದಲ್ಲಿ, 'ಅಮೃತಮಹೋತ್ಸವ' ಸಂಭ್ರಮಾಚರಣೆ ಮಾಡಲು ಹಾಗು ಆ ನಿಟ್ಟಿನಲ್ಲಿ ಸಿದ್ಧತೆ ಮಾಡಿಕೊಳ್ಳಲು ನಮ್ಮ ಕಾರ್ಯಕಾರಿ ಸಮಿತಿ ಸಕ್ರಿಯವಾಗಿ ಕಾರ್ಯೋನ್ಮುಖವಾಗುತ್ತಿರುವ ಕುರಿತು ಸಂಕ್ಷಿಪ್ತವಾಗಿ ಮುಖ್ಯಮಂತ್ರಿಗಳಿಗೆ ವಿವರಿಸಲಾಯಿತು. ಈ ಕಾರ್ಯಕ್ಕಾಗಿ ಕರ್ನಾಟಕ ಸರ್ಕಾರದಿಂದ ಹೆಚ್ಚಿನ ಅನುದಾನಕ್ಕಾಗಿ ಮನವಿ ಪತ್ರವನ್ನು ಸಲ್ಲಿಸಲಾಯಿತು.

ಸಂಘವನ್ನು ಕಟ್ಟಲು ದುಡಿದ ಮಹನೀಯರುಗಳಲ್ಲಿ ರಾಜ್ಯದ ಮೊಟ್ಟ ಮೊದಲ ಮುಖ್ಯಮಂತ್ರಿಗಳಾದ ಶ್ರೀ ಕೆ.ಸಿ. ರೆಡ್ಡಿಯವರು, ಶ್ರೀ ಕೃಷ್ಣಮೂರ್ತಿ ರಾವ್, ಡಾ. ಸರೋಜಿನಿ ಮಹಿಷಿಯವರು ಪ್ರಮುಖರು. ಇವರೂ ಸೇರಿದಂತೆ ಇನ್ನೂ ಅನೇಕ ದಿಗ್ಗಜರುಗಳ ಪರಿಶ್ರಮದಿಂದ ಇಂದು ದೆಹಲಿ ಕರ್ನಾಟಕ ಸಂಘ ವಿಶ್ವದ ಸಾಂಸ್ಕೃತಿಕ ರಾಯಭಾರಿಯಾಗಿ ಬೆಳೆದು ನಿಂತಿದೆ.

ದೆಹಲಿ ಕರ್ನಾಟಕ ಸಂಘದ 75ನೇ ವರ್ಷದ ಅಮೃತಮಹೋತ್ಸವ ಸಂಭ್ರಮಾಚರಣೆಯ ಐತಿಹಾಸಿಕ ಕ್ಷಣಕ್ಕೆ ಭಾರತದ ಪ್ರಧಾನ ಮಂತ್ರಿ ಸನ್ಮಾನ್ಯ ಶ್ರೀ ನರೇಂದ್ರ ಮೋದಿಯವರು ಸಾಕ್ಷಿಯಾಗಬೇಕೆಂಬುದು ನಮ್ಮೆಲ್ಲರ ಹಂಬಲ ವಾಗಿದ್ದು ಈ ಘನ ಕಾರ್ಯ ಮಾನ್ಯ ಕರ್ನಾಟಕದ ಮುಖ್ಯಮಂತ್ರಿಗಳಾದ ತಮ್ಮ ಉಪಸ್ಥಿತಿಯಲ್ಲಿ ನಡೆಯಬೇಕೆಂಬ ನಮ್ಮೆಲ್ಲರ ಅಭಿಲಾಷೆಗಳನ್ನು ಮುಖ್ಯಮಂತ್ರಿಯವರಿಗೆ ತಿಳಿಸಲಾಯಿತು.

ಹಾಗೆಯೇ, ಉದ್ದೇಶಿತ ಅಮೃತ ಮಹೋತ್ಸವಾಚರಣೆಯ ಸಂದರ್ಭದಲ್ಲಿ ರಾಜ್ಯದ ಮಂತ್ರಿಗಳು, ಶಾಸಕರು, ಸಂಸದರೊಂದಿಗೆ, ರಾಜ್ಯದ ಕಲಾವಿದರು, ಸಾಹಿತಿಗಳು, ವಿದ್ವಾಂಸರು ಭಾಗವಹಿಸಲಿದ್ದು, ಕರ್ನಾಟಕದ ಕಲೆ, ಸಾಹಿತ್ಯ, ಸಂಸ್ಕೃತಿಯನ್ನು ಬಿಂಬಿಸುವಂತಹ ವೈವಿಧ್ಯಮಯ ಕಾರ್ಯಕ್ರಮಗಳಿಗೆ ವೇದಿಕೆಯಾಗಲಿದೆ. ಇದರಲ್ಲಿ ಹತ್ತು ಸಾವಿರಕ್ಕೂ ಹೆಚ್ಚಿನ ಜನರು ಕನ್ನಡ ಸಾಂಸ್ಕೃತಿಕ ರಾಯಭಾರಿಗಳಾಗಿ ಭಾಗವಹಿಸುವುದಾಗಿ ತಿಳಿಸಿದರು.

ಈ ಅಮೃತ ಮಹೋತ್ಸವ ಸಮಾರಂಭವನ್ನು ದೆಹಲಿಯ ತಾಲ್ಕತೋರಾ ಒಳಾಂಗಣ ಕ್ರೀಡಾಂಗಣದಲ್ಲಿ, ಎರಡು ದಿನಗಳ ಕಾಲ ಆಯೋಜಿಸಬೇಕೆಂಬ ಸಂಘದ ಯೋಜನೆಯನ್ನು ಅವರಿಗೆ ಮನವರಿಕೆ ಮಾಡಿ, ಇದಕ್ಕೆ ತಗಲುವ ಅಂದಾಜು ಖರ್ಚು 2 ಕೋಟಿ ರೂಪಾಯಿಗಳಲ್ಲಿ ಕರ್ನಾಟಕ ಸರ್ಕಾರದಿಂದ 1.5 ಕೋಟಿ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಸಮಿತಿಯ ಪರವಾಗಿ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಕೋರಿಕೆ ಸಲ್ಲಿಸಿದರು.

ಮಾನ್ಯ ಮುಖ್ಯಮಂತ್ರಿಗಳು ಸಂಘದ ಪದಾಧಿಕಾರಿಗಳು ಹಾಗು ಸದಸ್ಯರನ್ನು ಆತ್ಮೀಯವಾಗಿ ಬರಮಾಡಿಕೊಂಡು ಸೌಹಾರ್ದವಾಗಿ ಭೇಟಿಯಾಗಿ ಎಲ್ಲರ ಬಗ್ಗೆ ಕುಶಲೋಪರಿ ವಿಚಾರಿಸಿದರು.

ಸಂಘದ ಅಧ್ಯಕ್ಷರು ನೀಡಿದ ಮನವಿ ಪತ್ರವನ್ನು ಸ್ವೀಕರಿಸಿದ ಮಾನ್ಯ ಮುಖ್ಯಮಂತ್ರಿಗಳು ಅಮೃತ ಮಹೋತ್ಸವ ಕಾರ್ಯಕ್ರಮಕ್ಕೆ ಕರ್ನಾಟಕ ಸರ್ಕಾರದಿಂದ ಸೂಕ್ತ ಸಹಾಯ ಹಾಗು ಅನುದಾನ ಕೊಡುವ ಬಗ್ಗೆ ಭರವಸೆ ನೀಡುವುದರೊಂದಿಗೆ ಸದರಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವುದಾಗಿ ತಿಳಿಸಿದರು. ▫

## ಕನ್ನಡ ಸೇವೆಗೆ ದೆಹಲಿ ಕನ್ನಡಿಗರಿಗೆ ಗೌರವ ಅಭಿನಂದನೆ



ದೆಹಲಿ ಹಾಗೂ ದೆಹಲಿ ಎನ್.ಸಿ.ಆರ್.ನಲ್ಲಿ ಕನ್ನಡಿಗರನ್ನು ಸಂಘಟಿಸಿಕೊಂಡು ಕನ್ನಡ ಸಂಸ್ಕೃತಿ, ಸಾಹಿತ್ಯ ಮತ್ತು ಕಲೆಯನ್ನು ಬಿಂಬಿಸುವ ಸೇವೆಯನ್ನು ಗುರುತಿಸಿ ಬೆಂಗಳೂರಿನ ರಂಗವಿಜಯ ಸಂಸ್ಥೆಯವರು ನೀಡುವ 'ಅಮೃತ ಕನ್ನಡಿಗ' ರಾಷ್ಟ್ರೀಯ ಪ್ರಶಸ್ತಿ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರು ಶ್ರೀ ಸಿ.ಎಂ. ನಾಗರಾಜ ಮತ್ತು ಗುರುಗಾಂವ್ ಕನ್ನಡ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಂತೋಷ ಜೆ ಅವರಿಗೆ ದೊರೆತಿದೆ. ಇತ್ತೀಚೆಗೆ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ ಸಮಾರಂಭದಲ್ಲಿ ಸಂತೋಷ ಜೆ ಅವರ ಅನುಪಸ್ಥಿತಿಯಲ್ಲಿ ಅವರ ಮಾತೃಶ್ರೀ ಶ್ರೀಮತಿ ನಾಗಮ್ಮ ಅವರನ್ನು ಅಭಿನಂದಿಸಿ ಗೌರವಿಸಲಾಯಿತು. ▫

# ಅಭಿಮತ

ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 32 । ಸಂಚಿಕೆ 3

ಡಿಸೆಂಬರ್ 2021



**ಪ್ರಧಾನ ಸಂಪಾದಕ**

ಚಂದ್ರಶೇಖರ ಎನ್.ಪಿ.

**ಸಂಪಾದಕ ಮಂಡಳಿ ಸದಸ್ಯರು**

ಅಮರೇಶ ದೊಡ್ಡಮನಿ

ಯಲ್ಲಾಲಿಂಗ ಕೊಪ್ಪದ

ಕೆ.ಎಸ್. ಮೂರ್ತಿ

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷರು**

ಸಿ.ಎಂ. ನಾಗರಾಜ

**ಉಪಾಧ್ಯಕ್ಷರು**

ಡಾ. ಎಂ.ಎಸ್. ಶಶಿ ಕುಮಾರ್

ಪೂಜಾ ಪಿ. ರಾವ್

**ಪ್ರಧಾನ ಕಾರ್ಯದರ್ಶಿ**

ಆರ್. ರೇಣುಕುಮಾರ್

**ಕೋಶಾಧಿಕಾರಿ**

ರಾಧಾಕೃಷ್ಣ

**ಜಂಟಿ ಕಾರ್ಯದರ್ಶಿಗಳು**

ಬಿ. ನಾರಾಯಣ

ಸುಮಿತಾ ಮುರಗೋಡ

**ಸಮಿತಿ ಸದಸ್ಯರು**

ಪ್ರಭಾಕರ ಮಡ್ಡಿತೋಟ್

ಶಿವಪ್ಪ ಎಂ

ಎ.ಟಿ. ಶ್ರೀನಿವಾಸ

ಮಾಲಿನಿ ಪ್ರಹ್ಲಾದ್

ಕೆ.ಎಸ್. ಮೂರ್ತಿ

ನವೀನ್ ಕುಮಾರ್ ವಿ.

ಸವಿತಾ ನೆಲ್ಲಿ

ಅಶ್ವಿನಿ ಬಿ.ಎಸ್.

ಸಂತೋಷ ಜೆ

ಚಂದ್ರಶೇಖರ ಎನ್.ಪಿ.

**ಕಾವಲು ಸಮಿತಿ**

ಅನಂತರಾಮು ಅರಳಿ

ಡಿ.ವಿ.ಎಸ್. ಮೂರ್ತಿ

ಈಶ್ವರ ಮಡಿವಾಳ




# ಸಂಪಾದಕೀಯ

## ಪ್ರಶಸ್ತಿ ಪುರಸ್ಕಾರಗಳು ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಗಟ್ಟಿ ಗೊಳಿಸಲಿ

ಓದುಗ ಬಂಧುಗಳೇ,

ನಮ್ಮ ಭವ್ಯ ಭಾರತದ ಸಂವಿಧಾನದ ಪ್ರಸ್ತಾವನೆಯಲ್ಲಿ ಉಲ್ಲೇಖಿಸಿರುವಂತೆ – 'ಭಾರತ ವಾಸಿಗಳಾದ ನಾವು, ಭಾರತವನ್ನು ಸಾರ್ವಭೌಮ ಸಮಾಜವಾದಿ ಜಾತ್ಯಾತೀತ ಲೋಕತಂತ್ರಿಕ ಗಣತಂತ್ರವನ್ನಾಗಿ ವಿಧಿಯುಕ್ತವಾಗಿ ಸ್ಥಾಪಿಸಿ, ಅದರ ಎಲ್ಲಾ ಪ್ರಜೆಗಳಿಗೆ ಈ ಕೆಳಗಿನ ಹಕ್ಕುಗಳಾದ: ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ; ವಿಚಾರ, ಅಭಿವ್ಯಕ್ತಿ, ನಂಬಿಕೆ, ಭಕ್ತಿ ಮತ್ತು ಆರಾಧನೆಗಳಲ್ಲಿ ಸ್ವಾತಂತ್ರ್ಯ; ಸ್ಥಾನಮಾನ ಮತ್ತು ಅವಕಾಶಗಳ ಸಮಾನತೆಗಳನ್ನು ದೊರಕಿಸಿ, ವೈಯುಕ್ತಿಕ ಘನತೆ ಮತ್ತು ದೇಶದ ಒಗ್ಗಟ್ಟು ಮತ್ತು ಐಕ್ಯತೆಗೆ ಎಲ್ಲರಲ್ಲೂ ಭ್ರಾತೃತ್ವತೆಯನ್ನು ಪ್ರೋತ್ಸಾಹಿಸಲು ನಿರ್ಧರಿಸಿ; ನಮ್ಮ ಸಂವಿಧಾನ ರಚನಾ ಸಭೆಯಲ್ಲಿ ಈ 1949ರ ನವೆಂಬರ್ ಮಾಹೆಯ 26ನೇ ದಿನದಂದು, ನಾವಾಗಿ ನಾವೇ ಈ ಸಂವಿಧಾನವನ್ನು ಸ್ವೀಕರಿಸಿ, ಶಾಸನವನ್ನಾಗಿ ವಿಧಿಸಿಕೊಳ್ಳುತ್ತೇವೆ' ಎಂಬ ಪ್ರತಿಜ್ಞೆಯನ್ನು ಸ್ವೀಕರಿಸಿ ಸಂವಿಧಾನ ಶಿಲ್ಪಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರಿಂದ ರಚನೆಯಾದ ಸಂವಿಧಾನವನ್ನು  ಒಪ್ಪಿಕೊಂಡ ಐತಿಹಾಸಿಕ ಸಂದರ್ಭವನ್ನು ಸ್ಮರಿಸಲು ಸಂವಿಧಾನ ದಿನವನ್ನು ಆಚರಿಸಲಾಗುತ್ತಿದೆ.

ಪೀಠಿಕಾ ನುಡಿಗಳಲ್ಲಿ ಉಲ್ಲೇಖಿಸಿದಂತೆ ಭಾರತದ ಎಲ್ಲಾ ಪ್ರಜೆಗಳಿಗೆ ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ಅವರಲ್ಲಿ ಅಂತರ್ಗತವಾಗಿರುವ ಪ್ರತಿಭೆಯನ್ನು ಅಭಿವ್ಯಕ್ತಪಡಿಸಲು ಅವಕಾಶ ಕಲ್ಪಿಸಿ ಮತ್ತು ಅವರ ಸಾಧನೆ ಹಾಗೂ ವೈಯುಕ್ತಿಕ ಘನತೆಯನ್ನು ಗುರುತಿಸಿ ಪ್ರೋತ್ಸಾಹಿಸಿದಲ್ಲಿ ಅದು ನಿಜವಾಗಿಯೂ ನಾವು ನಮ್ಮ ಸಂವಿಧಾನ ನಿರ್ಮಾತೃಗಳಿಗೆ ತೋರುವ ದೊಡ್ಡ ಗೌರವ. ಆಗ ಮಾತ್ರ ಸಂವಿಧಾನ ದಿನದ ಆಚರಣೆ ಅರ್ಥಪೂರ್ಣವಾಗುತ್ತದೆ.

ಈ ಹಿನ್ನೆಲೆಯಲ್ಲಿ ಸ್ವತಂತ್ರ ಭಾರತದ ಇತಿಹಾಸವನ್ನು ನೋಡಿದರೆ ದೇಶದ ಸ್ವಾತಂತ್ರ್ಯ ಚಳುವಳಿ ಮತ್ತು ಭಾರತದ ಸಂವಿಧಾನ ರೂಪಿಸುವ ಸಂದರ್ಭದಿಂದ ಇಂದಿನವರೆಗೂ ನೂರಾರು ಕನ್ನಡಿಗರು ನಮ್ಮ ಭಾರತೀಯ ಹಾಗೂ ಕನ್ನಡ ಸಮಾಜದ ಎಲ್ಲ ಕ್ಷೇತ್ರಗಳಲ್ಲೂ ಅನುಪಮವಾದ, ಅನುಕರಣೀಯವಾದ ಸಾಧನೆಯನ್ನು ಮಾಡಿ ಕನ್ನಡಿಗರಾದ ನಾವು ಹೆಮ್ಮೆ ಪಡುವಂತೆ ಮಾಡಿದ್ದಾರೆ. ಇಂತಹ ಅನೇಕ ಸಂಗತಿಗಳಿದ್ದು ಕೆಲವನ್ನು ಮಾತ್ರ ಸಂವಿಧಾನ ದಿನ ಮತ್ತು ರಾಜ್ಯೋತ್ಸವ ಆಚರಣೆಯ ಹಿನ್ನೆಲೆಯಲ್ಲಿ ಗಮನಿಸಬಹುದು.

ಮೊದಲನೆಯದಾಗಿ ಸಂವಿಧಾನದ ಪಿತಾಮಹ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಅಧ್ಯಕ್ಷತೆಯಲ್ಲಿ ಏಳು ಸದಸ್ಯರನ್ನೊಳಗೊಂಡ ಸಂವಿಧಾನ ಕರಡು ಸಮಿತಿಯನ್ನು ರಚಿಸಿದ ಜೊತೆ ಜೊತೆಯಲ್ಲಿಯೇ ಸಂವಿಧಾನ ಸಭೆಗೆ ಮತ್ತು ಅದರ ಸದಸ್ಯರುಗಳಿಗೆ ನೆರವಾಗಲು ಅಸಿತ್ವಕ್ಕೆ ತಂದ್ದಿದ್ದ ಸಂವಿಧಾನ ಸಭೆಯ ಕಾರ್ಯಾಲಯದಲ್ಲಿ ಉಡುಪಿ ಜಿಲ್ಲೆಯ ಕಾರ್ಕಳದ ಸಮೀಪದ ಬೆನಗಲ್ ಎಂಬ ಒಂದು ಪುಟ್ಟ ಹಳ್ಳಿಯವರಾದ, ಅಪ್ರತಿಮ ದೂರ ದೃಷ್ಟಿಯುಳ್ಳ ಶ್ರೀ ಬೆನಗಲ್ ನರಸಿಂಗ್ ರಾವ್ ಅವರು ಸಂವಿಧಾನ ಸಭೆಯ ಸಲಹೆಗಾರರಾಗಿದ್ದುದ್ದು. ಹಾಗೆಯೇ ಮಂಡ್ಯ ಜಿಲ್ಲೆಯ ಪಾಂಡವಪುರ ಸಮೀಪದ ಹರವು ಗ್ರಾಮದ ಹರವು ವೆಂಕಟನರಸಿಂಹ ವರದರಾಜ ಅಯ್ಯಂಗಾರ್ ಅವರು ಸಂವಿಧಾನ ಸಭೆಯ ಕಾರ್ಯದರ್ಶಿಗಳಾಗಿದ್ದುದು. ಸಂವಿಧಾನ ರಚನಾ ಸಭೆಯಲ್ಲಿ ಮಹತ್ವದ ಸ್ಥಾನದಲ್ಲಿದ್ದ ಈ ಇಬ್ಬರೂ ಕನ್ನಡದ ಮಹನೀಯರನ್ನು ಕರ್ನಾಟಕ ರಾಜ್ಯೋತ್ಸವ ಹಾಗೂ ಸಂವಿಧಾನ ದಿನ ಆಚರಣೆಯ ಈ ಐತಿಹಾಸಿಕ ಸಂದರ್ಭದಲ್ಲಿ ಸ್ಮರಿಸಿಕೊಳ್ಳುವುದು ಕನ್ನಡಿಗರ ಆದ್ಯ ಕರ್ತವ್ಯ.

ಇದೇ ರೀತಿ ನಾವು ಈ ಸಂದರ್ಭದಲ್ಲಿ ಹೆಮ್ಮೆ ಪಡಬೇಕಾದ ಸಂಗತಿ ಎಂದರೆ ಭಾರತದ ಮೂಲೆಮೂಲೆಗಳಲ್ಲಿ ಎಲೆಮರೆ ಕಾಯಿಗಳಂತಿರುವ ವ್ಯಕಿಗಳಿಗೂ ದೇಶದ ಮೊದಲ ಪ್ರಜೆ ಘನತೆವೆತ್ತ ರಾಷ್ಟ್ರಪತಿಯವರಿಂದ ಪದ್ಮ ಪುರಸ್ಕಾರಗಳು ದೊರಕುತ್ತಿರುವುದು. ಈ ಬೆಳವಣಿಗೆ ಸಂವಿಧಾನದ ಆಶಯಗಳನ್ನು ಗಟ್ಟಿಗೊಳಿಸುವ ನಿಟ್ಟಿನಲ್ಲಿ ಹೊಸ ಭರವಸೆ ಮೂಡಿಸುತ್ತಿದೆ. ಭಾರತದಂತಹ ದೊಡ್ಡ ಪ್ರಜಾಪ್ರಭುತ್ವಕ್ಕೆ ನಿಜಕ್ಕೂ ಇದೊಂದು ಆಪ್ಯಾಯಮಾನವೇ ಸರಿ.

ದೇಶದ ಯಾವುದೋ ಮೂಲೆಯಲ್ಲಿ ಪ್ರಚಾರದ ಬೆಳಕಿಲ್ಲದೆ ಅರ್ಥಪೂರ್ಣ ಕೆಲಸ ಮಾಡುತ್ತಾ ರಾಷ್ಟ್ರ ನಿರ್ಮಾಣಕ್ಕೆ ಸದ್ದಿಲ್ಲದೆ ಕೊಡುಗೆ ಸಲ್ಲಿಸುತ್ತಿರುವ ಸಾವಿರಾರು ಜನ ತಾವು ನಂಬಿ ನಡೆದ ದಾರಿಯಲ್ಲಿಯೇ ಸಾಧನೆಯ ಸಿದ್ಧಿಗೇರಿದ್ದಾರೆ. ವಿಶೇಷವೆಂದರೆ ಅವರು ಸೇವೆ ಮಾಡುವುದರ ಬಗ್ಗೆ ಉತ್ಕಟ ಕಳಕಳಿ ಹೊಂದಿರುವವರೇ ಹೊರತು, ತಮ್ಮ ಸಾಧನೆಗೆ ಪುರಸ್ಕಾರವಾಗಲೀ, ಮಾನ್ಯತೆಯಾಗಲೀ ದೊರೆಯಬೇಕೆಂಬ ನಿರೀಕ್ಷೆ ಇಟ್ಟುಕೊಂಡವರಲ್ಲ. ಇಂತಹ ಸಾಧಕರನ್ನು ಅಧಿಕೃತವಾಗಿ ಶಿಫಾರಸ್ಸು ಮಾಡುವವರೂ ವಿರಳ. ಹೀಗಿದ್ದೂ ಕೂಡ ಪತ್ರಿಕಾ ಮಾಧ್ಯಮ, ಸಾಮಾಜಿಕ ಜಾಲತಾಣ ಇತ್ಯಾದಿಗಳ ನೆರವಿನಿಂದ ಪಡೆದ ಮಾಹಿತಿಗಳನ್ನು ನಿಖರವಾಗಿ ಸಂಶೋಧನೆ ಮಾಡಿದ ಆಯ್ಕೆ ಸಮಿತಿ ರಾಷ್ಟ್ರಮಟ್ಟದ  ಪದ್ಮ ಪ್ರಶಸ್ತಿಗೆ ಈ ಸಾಧಕರುಗಳನ್ನು ಹೆಸರಿಸಿರುವುದು ಸ್ತುತ್ಯಾರ್ಹ. ಇಂತಹ ಒಳ್ಳೆಯ ನಿರ್ಧಾರ ಕೈಗೊಂಡ ಪದ್ಮ ಪ್ರಶಸ್ತಿಗಳ  ಆಯ್ಕೆ ಮಂಡಳಿಗೆ ಹೃತ್ಪೂರ್ವಕ ಧನ್ಯವಾದಗಳು.

ಕನ್ನಡಿಗರು ಮತ್ತು ಕರ್ನಾಟಕದ ಪ್ರಗತಿಗೆ ಕೊಡುಗೆ ನೀಡಿದ ಒಟ್ಟು 15 ಕನ್ನಡಿಗರು 2020ರ ಹಾಗೂ 2021ರಲ್ಲಿ ಪದ್ಮ ಪುರಸ್ಕಾರಗಳಿಗೆ ಭಾಜನರಾಗಿದ್ದು ಅವರಲ್ಲಿ ಕೆಲವರ ಸಾಧನೆಗಳು ಸದ್ದರಿಯದೆ ಸಾಧನೆಗೈದು ಸಿದ್ಧಿಯ ಶಿಖರಕ್ಕೇರಿ ನಿಂತವರು ಎಂಬ ಕಾರಣಕ್ಕಾಗಿಯೇ ಎಲ್ಲರೂ  ಕುತೂಹಲದಿಂದ ಕಣ್ಣರಳಿಸಿ ನೋಡುವಂತೆ, ಕಿವಿಗೊಟ್ಟು ಕೇಳುವಂತೆಯೂ ಮಾಡಿವೆ. ಮುಖ್ಯವಾಗಿ ಪ್ರಾಥಮಿಕ ಶಾಲೆ ಕಟ್ಟಿಸುವುದಕ್ಕಾಗಿ ಕಿತ್ತಳೆ ಹಣ್ಣುಮಾರಿ ಸಂಪಾದಿಸಿದ ಗಳಿಕೆಯನ್ನು ಮೀಸಲಿಟ್ಟ ವ್ಯಕ್ತಿ ಹರೇಕಳ ಹಾಜಬ್ಬನವರು, ಬರಿಗಾಲಲ್ಲಿ ನಡೆದುಬಂದು ಕಾಡಿನ ವಿಶ್ವಕೋಶ ಬೆಳೆಸಿದ ತುಳಸಿ ಗೌಡರು ಪದ್ಮಶ್ರೀ ಪ್ರಶಸ್ತಿ ಸ್ವೀಕರಿಸಿದ ಕ್ಷಣಗಳು ಪ್ರತಿಯೊಬ್ಬರ ಮನಸ್ಸಿನ ಭಿತ್ತಿಯಲ್ಲಿ ಎಲ್ಲ ಕಾಲಕ್ಕೂ ಉಳಿಯುವ ಚಿತ್ರಗಳು.

ಇವರಲ್ಲದೆ ಪದ್ಮ ವಿಭೂಷಣ ಪುರಸ್ಕೃತರಾದ ಧೀಮಂತ ಪ್ರತಿಭೆಯ ಅಸಾಧಾರಣ ಸಂಸದೀಯ ಪಟು ಶ್ರೀ ಜಾರ್ಜ್ ಫರ್ನಾಂಡೀಸ್, ಆಧ್ಯಾತ್ಮಿಕ ಚೇತನ ಶ್ರೀಶ್ರೀಶ್ರೀ ವಿಶ್ವೇಶತೀರ್ಥ ಶ್ರೀ ಸ್ವಾಮೀಜಿ, ಸುಪ್ರಸಿದ್ಧ ಗಾಯಕ ಎಸ್.ಪಿ. ಬಾಲಸುಬ್ರಮಣ್ಯಂ, ಖ್ಯಾತ ವೈದ್ಯ ಡಾ. ಬೆಳ್ಳೆ ಮೋನಪ್ಪ ಹೆಗ್ಡೆ ಅವರಿಗೂ, ಸಾಹಿತಿ ಚಂದ್ರಶೇಖರ ಕಂಬಾರ ಅವರಿಗೆ ಪದ್ಮಭೂಷಣ ಪುರಸ್ಕಾರವನ್ನೂ ಹಾಗೂ ಪದ್ಮ ಪುರಸ್ಕೃತರಲ್ಲಿಯೇ ಏಕೈಕ ತೃತೀಯ ಲಿಂಗಿ ಜನಪದ ಕಲಾವಿದೆ ಮಂಜಮ್ಮ ಜೋಗತಿ. ಹಾಗೇನೇ ರಂಗಸಾಮಿ ಲಕ್ಷ್ಮಿನಾರಾಯಣ ಕಶ್ಯಪ್, ಕೆ.ವೈ. ವೆಂಕಟೇಶ್, ವಿಜಯ ಸಂಕೇಶ್ವರ್, ಎಂ.ಪಿ. ಗಣೇಶ್, ಡಾ. ಬಿ.ಎನ್. ಗಂಗಾಧರ್, ವಿದುಷಿ ಕೆ.ವೈ. ವಿಜಯಲಕ್ಷ್ಮಿ ಸಂಪತ್ ಕುಮಾರ್ ದಂಪತಿಗಳಿಗೆ, ಭರತ್ ಗೋಯೆಂಕ ಅವರಿಗೂ ಪದ್ಮಶ್ರೀ ಪುರಸ್ಕಾರವನ್ನೂ ನೀಡಲಾಗಿದೆ.  ಇವರೆಲ್ಲರಿಗೂ ದೆಹಲಿ ಕರ್ನಾಟಕ ಸಂಘ ಹಾಗೂ ಎಲ್ಲ ಹೊರನಾಡ ಕನ್ನಡಿಗರ ಪರವಾಗಿ ಅಭಿನಂದನೆಗಳು.

ಕನ್ನಡ ನಾಡಿನ ಹೊರಗೆ ನೆಲೆಸಿದ ಹೊರನಾಡ ಕನ್ನಡಿಗರಿಗೆ ರಾಜ್ಯ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿ, ಕರ್ನಾಟಕದ ಹೊರಗೂ ಕನ್ನಡದ ಪ್ರಾತಿನಿಧ್ಯವನ್ನು ಗಟ್ಟಿಗೊಳಿಸಲು ಪ್ರೇರೇಪಿಸುತ್ತಿದೆ. ಈ ವರ್ಷ ಕರ್ನಾಟಕದ ಪ್ರತಿಷ್ಠಿತ ರಾಜ್ಯೋತ್ಸವ ಪುರಸ್ಕಾರವನ್ನು ದೆಹಲಿ ಕನ್ನಡಿಗರಾದ ಡಾ. ಸಿದ್ಧರಾಮೇಶ್ವರ ಎಂ. ಕಂಟೀಕರ್ ಅವರಿಗೆ ನೀಡಿರುವುದು ರಾಷ್ಟ್ರ ರಾಜಧಾನಿ ಕನ್ನಡಿಗರಿಗೆ ಅತ್ಯಂತ ಸಂತೋಷದ ಸಂಗತಿ. ಅದೇ ರೀತಿ ದೆಹಲಿ ಕರ್ನಾಟಕ ಸಂಘ ಪ್ರತಿ ವರ್ಷ ದೆಹಲಿ ಕನ್ನಡಿಗರಲ್ಲಿ ಅತ್ಯುತ್ತಮ ಸಾಧನೆ ಮಾಡಿದ ಸಾಧಕರನ್ನು ಗುರುತಿಸಿ ನೀಡುವ 'ವಿಶಿಷ್ಟ ಕನ್ನಡಿಗ' ಪ್ರಶಸ್ತಿಯನ್ನು ಈ ಬಾರಿ ಕರೋನಾ ಮಹಾಮಾರಿಯಿಂದಾಗಿ ಸಂಕಷ್ಟದಲ್ಲಿದ್ದ  ಹೊರನಾಡ ಕನ್ನಡಿಗರಿಗೆ ಸಲ್ಲಿಸಿದ ಸೇವೆಗಳನ್ನು ಸ್ಮರಿಸಿ ಡಾ. ಗುರುರಾಜ ಸಂಗೊಂದಿ ಮಠ ಹಾಗೂ ಡಾ. ಅಕ್ಷಯ್ ಗೌಡ ಎಂ.ಕೆ. ಈ ಇಬ್ಬರು ವೈದ್ಯರಿಗೆ ಈ ವರ್ಷದ ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪುರಸ್ಕಾರ ನೀಡಿ ಗೌರವಿಸಿದೆ.

ಇನ್ನು ಹೊರದೇಶಗಳಲ್ಲಿ ನೆಲೆಸಿರುವ ಕನ್ನಡಿಗರು ಅತ್ಯಂತ ಅರ್ಥಪೂರ್ಣವಾಗಿ ಅದ್ದೂರಿಯಾಗಿ ಆಚರಿಸಿರುವುದರ ಜೊತೆಗೆ ಅಮೇರಿಕದ ಒಹಾಯೋ ರಾಜ್ಯದ ಕ್ಲೀವ್ ಲ್ಯಾಂಡ್ ನಗರದ ಸ್ಥಳೀಯ ಆಡಳಿತ ಕನ್ನಡ ಭಾಷೆ ಮತ್ತು ಸಂಸ್ಕೃತಿಗಳ ಹಿರಿಮೆ ಗರಿಮೆಗಳನ್ನು ಪರಿಗಣಿಸಿ ನವೆಂಬರ್ ತಿಂಗಳನ್ನು ಕನ್ನಡ ಭಾಷೆ ಮತ್ತು ಪರಂಪರೆಯ ತಿಂಗಳು ಎಂದು ಆದೇಶಿಸಿ ಘೋಷಣ ಪತ್ರವನ್ನು ಹೊರಡಿಸಿರುವುದು ಅಭಿನಂದನೀಯ. ಇದಕ್ಕೆ ಕಾರಣಕರ್ತರಾದ ಅಲ್ಲಿನ ಕಸ್ತೂರಿ ಕನ್ನಡ ಸಂಘದ ನಡೆ ನಿಜಕ್ಕೂ ಶ್ಲಾಘನೀಯ. ಅರವತ್ತಾರನೇ ಕರ್ನಾಟಕ ರಾಜ್ಯೋತ್ಸವವನ್ನು ದೆಹಲಿ ಕರ್ನಾಟಕ ಸಂಘ ಹಾಗೂ ದೆಹಲಿ ಮತ್ತು ಎನ್.ಸಿ.ಆರ್.ನ ಎಲ್ಲ ಕನ್ನಡ ಸಂಘ ಸಂಸ್ಥೆಗಳು ಅರ್ಥವತ್ತಾಗಿ ಮತ್ತು ಅತ್ಯಂತ ಸಂಭ್ರಮದಿಂದ ಆಚರಿಸಿದ ವರದಿಗಳೂ ಸೇರಿದಂತೆ ಇನ್ನಿತರ ಅನೇಕ ಮಾಹಿತಿಗಳನ್ನು ಒಳಗೊಂಡ ಅಭಿಮತವನ್ನು ನಿಮ್ಮ ಕೈಗಿಡುತ್ತಿದ್ದೇವೆ. ಧನ್ಯವಾದಗಳು.

**ಕನ್ನಡ ಹಾಗೂ ಕರ್ನಾಟಕವನ್ನು ಕಟ್ಟಿ ಬೆಳೆಸಿದ ಎಲ್ಲಾ ಚೇತನಗಳನ್ನು ನೆನೆಯೋಣ**

*ಚಂದ್ರಶೇಖರ ಎನ್.ಪಿ.*
*ಪ್ರಧಾನ ಸಂಪಾದಕರು*

## ಅಧ್ಯಕ್ಷರ ನುಡಿ

ಆತ್ಮೀಯ ಕನ್ನಡ ಬಂಧುಗಳೇ,

ಹೊಸ ಕಾರ್ಯಕಾರಿ ಸಮಿತಿ ಬಂದ ನಂತರ ನವೆಂಬರ್ ತಿಂಗಳಲ್ಲಿ ಗುರುಗ್ರಾಮ ಕನ್ನಡ ಸಂಘದಲ್ಲಿ ಯಶಸ್ವಿಯಾಗಿ ನಡೆದ ರಾಜ್ಯೋತ್ಸವ ಆಚರಣೆಯೂ ಸೇರಿದಂತೆ ಒಟ್ಟು 14 ಕಾರ್ಯಕ್ರಮಗಳು ತಮ್ಮೆಲ್ಲರ ಸಹಕಾರದೊಂದಿಗೆ ಅತ್ಯುತ್ತಮವಾಗಿ ಜರುಗಿವೆ. ದೆಹಲಿಯ ಸ್ಥಳೀಯ ಕನ್ನಡಿಗರು ಮನೆಗಳಿಂದ ಮಾಡಿಕೊಂಡು ಬಂದಂತಹ ತಿಂಡಿ ತಿನಿಸುಗಳ ಕೈರುಚಿ ಆಹಾರ ಮೇಳದಲ್ಲಿ ಎರಡು ಸಾವಿರಕ್ಕೂ ಹೆಚ್ಚು ಜನರು ಭಾಗಿಯಾಗಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ಮಾಡಿದ್ದಾರೆ. ತಮ್ಮ ಸ್ಟಾಲ್‌ಗಳನ್ನು ಹಾಕಿ ಅತೀ ಕಡಿಮೆ ಬೆಲೆಯಲ್ಲಿ ಕನ್ನಡಿಗರಿಗೆ ತಿಂಡಿತಿನಿಸುಗಳನ್ನು ನೀಡುವ ಮೂಲಕ ಆಹಾರಮೇಳವನ್ನು ಯಶಸ್ವಿಗೊಳಿಸಿದ ಗೃಹಿಣಿಯರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಆ ದಿನ ಭಾಗವಹಿಸಿ ಕೈರುಚಿ ಕಾರ್ಯಕ್ರಮವನ್ನು ಸವಿದ ಎಲ್ಲ ಕನ್ನಡಿಗರ ಕೂಗು ಇಂತಹ ಆಹಾರ ಮೇಳ ವರ್ಷಕ್ಕೆ ಕೇವಲ ಒಮ್ಮೆ ಮಾತ್ರ ಆಗದೆ ಆರು ತಿಂಗಳಿಗೊಮ್ಮೆ, ಮೂರು ತಿಂಗಳಿಗೊಮ್ಮೆ ಮಾಡಬೇಕೆಂಬುದಾಗಿತ್ತು. ಅನೇಕರು ಈ ಬಗ್ಗೆ ಕೋರಿಕೆಯನ್ನು ಮಾಡಿಕೊಂಡಿದ್ದಾರೆ. ಸಾಧ್ಯವಾದಷ್ಟು ಹೆಚ್ಚು ಹೆಚ್ಚು ಕನ್ನಡಿಗರಿಗೆ ಅನುಕೂಲ ಆಗುವಂತಹ ಕಾರ್ಯಕ್ರಮಗಳನ್ನು ಮಾಡುತ್ತೇವೆ. ಮುಖ್ಯವಾಗಿ ರಾಜ್ಯೋತ್ಸವ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ವಿಶಿಷ್ಟ ಕನ್ನಡಿಗ' ಪ್ರಶಸ್ತಿಯನ್ನು ಕೊರೊನಾ ಸಂಕಟ ಪರಿಸ್ಥಿತಿಯಲ್ಲಿ ದೆಹಲಿಯಲ್ಲಿ ಉತ್ತಮವಾಗಿ ಕಾರ್ಯ ನಿರ್ವಹಿಸಿದ ಇಬ್ಬರು ಕನ್ನಡಿಗ ವೈದ್ಯರಿಗೆ ನೀಡುವ ಮೂಲಕ ವಿಶಿಷ್ಟ ಕನ್ನಡಿಗ ಪ್ರಶಸ್ತಿಗೆ ಮೆರುಗು ತರಲಾಗಿದೆ. ಈ ಇಬ್ಬರು ವೈದ್ಯರಲ್ಲದೆ ಇನ್ನೂ ಅನೇಕ ವೈದ್ಯರುಗಳು ಮತ್ತು ಐಎಎಸ್ ಅಧಿಕಾರಿಗಳು ನಮಗೆ ಸಹಕಾರ ನೀಡಿದ್ದಾರೆ. ಅವರೆಲ್ಲರ ಪರವಾಗಿ ಈ ವಿಶಿಷ್ಟ ಕನ್ನಡಿಗ ಪ್ರಶಸ್ತಿಯನ್ನು ಇಬ್ಬರು ವೈದ್ಯರಿಗೆ ನೀಡಿ ಇಡೀ ವೈದ್ಯ ಸಮುದಾಯವನ್ನು ಗೌರವಿಸಿದ್ದೇವೆ. ಇಪ್ಪತ್ತೆಂಟರಂದು ನಡೆದ ಕಾರ್ಯಕ್ರಮ ನವೆಂಬರ್ ತಿಂಗಳಲ್ಲಿ ನಡೆದಂಥ ಎಲ್ಲಾ ಕಾರ್ಯಕ್ರಮಗಳ ಸಮಾರೋಪ ಕಾರ್ಯಕ್ರಮ ಆಗಿದ್ದು ಈ ಸಂದರ್ಭದಲ್ಲಿ ಮುಖ್ಯ ಅತಿಥಿಗಳಾದ ರಾಜ್ಯಸಭೆ ಸಂಸದ ಮಾನ್ಯ ಎಲ್. ಹನುಮಂತಯ್ಯನವರು ಮತ್ತು ದೆಹಲಿ ಕರ್ನಾಟಕ ಸಂಘಕ್ಕೆ ಯವಾಗಲೂ ಸಹಕಾರವಾಗಿ ನೀಡುತ್ತ ಬಂದಿರುವ ಹಿರಿಯ ರಾಜಕೀಯ ಮುತ್ಸದ್ದಿ ಕರ್ನಾಟಕದ ಮಾಜಿ ಮಂತ್ರಿಗಳಾದ ಶ್ರೀ ಪಿ.ಜಿ.ಆರ್. ಸಿಂಧ್ಯಾರವರ ಸಮ್ಮುಖದಲ್ಲಿ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿ ನೆರವೇರಿದೆ.

ಪ್ರತಿ ಶನಿವಾರ ಸಂಘದಲ್ಲಿ ಪ್ರದರ್ಶಿಸಿದ ಹೊಸ ಕನ್ನಡ ಚಲನಚಿತ್ರಗಳನ್ನು ನೋಡಿ ನಮ್ಮ ಯುವ ಪೀಳಿಗೆ ಮತ್ತು ಕನ್ನಡ ಸಿನಿಮಾಪ್ರಿಯರು ಆನಂದಪಟ್ಟಿದ್ದಾರೆ. ಇದಕ್ಕೆ ಸಹಕರಿಸಿದ ಕನ್ನಡ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷರಾದ ಶ್ರೀ ಕೃಷ್ಣೇಗೌಡರಿಗೆ ಮತ್ತು ನಿರ್ಮಾಪಕರುಗಳಿಗೆ ಧನ್ಯವಾದಗಳನ್ನ ತಿಳಿಸುತ್ತಿದ್ದೇನೆ. ಮುಂಬರುವ ದಿನಗಳಲ್ಲಿ ಹೊಚ್ಚ ಹೊಸ ಕನ್ನಡ ಚಲನ ಚಿತ್ರಗಳನ್ನು ನೀಡುವ ಭರವಸೆಯನ್ನು ಅವರು ಕೊಟ್ಟಿದ್ದಾರೆ. ನಮ್ಮ ಸಭಾಂಗಣದಲ್ಲಿ ಉತ್ತಮವಾದ ಪ್ರೊಜೆಕ್ಟರ್ ಮುಖಾಂತರ ಸ್ಯಾಟಲೈಟ್ ಸಿಸ್ಟಮ್‌ನಲ್ಲಿ ಚಲನಚಿತ್ರಗಳನ್ನು ವೀಕ್ಷಿಸಬಹುದಾದ ಕೆಲಸವನ್ನು ಮಾಡಬೇಕಾಗಿದೆ. ಅದನ್ನು ಅತಿ ಶೀಘ್ರದಲ್ಲೇ ಮಾಡುತ್ತೇವೆ ಎಂಬ ಭರವಸೆ ನೀಡುತ್ತೇನೆ.

ಮಾರಕ ರೋಗ ಕೊರೊನಾ ಮುಕ್ತಾಯ ಹಂತದಲ್ಲಿ ಇನ್ನೊಂದು ಹೊಸ ಮಾದರಿಯ ಸೋಂಕು ಬಂದಿರೋದು ಆತಂಕದ ವಿಷಯವಾಗಿದೆ. ಈ ಅಂಶಗಳನ್ನು ಗಮನಿಸಿ ಕಾರ್ಯಕ್ರಮಗಳನ್ನು ತುಂಬಾ ಜಾಗ್ರತೆಯಿಂದ ಆಯೋಜನೆ ಮಾಡಬೇಕಾಗಿದೆ. ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಜಾರಿಗೆ ತರುವ ಕಾನೂನುಗಳನ್ನು ಗಮನದಲ್ಲಿಟ್ಟುಕೊಂಡು ಮುಂದಿನ ಕಾರ್ಯಕ್ರಮಗಳನ್ನು ಯಾವ ರೀತಿ ಮಾಡಬಹುದು ಎಂಬುದನ್ನು ನಾವು ತೀರ್ಮಾನಿಸುತ್ತೇವೆ. ಮಾರಕ ರೋಗ ಕೊರೊನಾ ಮೂರನೇ ಅಲೆ ಬರದೇ ಇರಲಿ ಎಂದು ನಮ್ಮೆಲ್ಲರ ಪ್ರಾರ್ಥನೆ. ಕಳೆದ ಎರಡು ವರ್ಷಗಳಲ್ಲಿ ಕೊರೊನಾಕ್ಕೆ ತುತ್ತಾದ ಎಷ್ಟೋ ಕುಟುಂಬಗಳು ಈಗ ತಾನೆ ಬದುಕನ್ನು ಪುನಃ ಕಟ್ಟಿಕೊಳ್ಳುತ್ತಿರುವ ಸಂದರ್ಭದಲ್ಲಿ ತಜ್ಞರು ನೀಡಿರುವ ಎಚ್ಚರಿಕೆ ಸಂದೇಶಗಳು ಮತ್ತು ಮಾಧ್ಯಮಗಳ ಈ ಮೂರನೇ ಅಲೆಯ ಸಂದೇಹಗಳು ನಿಜವಾಗದಿರಲಿ ಎಂದು ಆಶಿಸುತ್ತೇನೆ.

ರಾಜ್ಯೋತ್ಸವ ಸಂದರ್ಭದಲ್ಲಿ ಸಿರಿಗೇರಿ ಅನ್ನಪೂರ್ಣ ಪ್ರಕಾಶನದಿಂದ ಒಂದು ಸಾಹಿತ್ಯದ ಕಾರ್ಯಕ್ರಮ ಮತ್ತು ಕವಿಗೋಷ್ಠಿ ದೆಹಲಿ ಕರ್ನಾಟಕ ಸಂಘದ ಸಹಯೋಗದೊಂದಿಗೆ ಉತ್ತಮ ರೀತಿಯಲ್ಲಿ ಕಾರ್ಯರೂಪಕ್ಕೆ ಬಂದಿತು. ಆ ಕಾರ್ಯಕ್ರಮದ ಉದ್ಘಾಟನೆ ಮಾಡಿದಂತಹ ಕರ್ನಾಟಕ ವಿಧಾನ ಪರಿಷತ್ ಮಾನ್ಯ ಸಭಾಪತಿಗಳಾದ ಶ್ರೀ ಬಸವರಾಜ್ ಎಸ್. ಹೊರಟ್ಟಿ ಹಾಗೂ ಮುಖ್ಯ ಅತಿಥಿಗಳಾಗಿದ್ದ ಮಾಜಿ ವಿಧಾನ ಪರಿಷತ್ ಸದಸ್ಯ ಶ್ರೀ ಡಿ.ಎಸ್. ವೀರಯ್ಯರವರ ಸಮ್ಮುಖದಲ್ಲಿ ನಡೆದ ಕವಿಗೋಷ್ಠಿ ಹಾಗೂ ಸಂಕೀರ್ಣ ಗೋಷ್ಠಿಯಲ್ಲಿ ದೆಹಲಿ ಕನ್ನಡಿಗರ ಕೆಲವು ಸಮಸ್ಯೆಗಳನ್ನು ನಾನೂ ಸಹ ದೆಹಲಿ ಕನ್ನಡಿಗರಿಗೆ ಬೇಕಾಗುವಂತಹ ಕೆಲವೊಂದು ಬೇಡಿಕೆಗಳನ್ನು ಅವರ ಮುಂದಿಟ್ಟಿದ್ದೇನೆ. ಅದರಲ್ಲಿ ಮುಖ್ಯವಾಗಿ ಕರ್ನಾಟಕದಿಂದ ಬಂದ ವಿದ್ಯಾರ್ಥಿಗಳಿಗೆ ವಸತಿ ನಿಲಯಕ್ಕೆ ನಮ್ಮ ಬೇಡಿಕೆಯನ್ನು ಕೇಳಿಕೊಂಡಿದ್ದಕ್ಕೆ ಉತ್ತಮವಾಗಿ ಸ್ಪಂದಿಸಿದ ಮಾನ್ಯ ಸಭಾಪತಿಗಳು ಮುಖ್ಯಮಂತ್ರಿಗಳ ಜತೆ ಮಾತನಾಡಿ ದೆಹಲಿ ಕರ್ನಾಟಕ ಸಂಘಕ್ಕೆ ಅಗತ್ಯ ಇರುವ ಸುಮಾರು ಹದಿನೈದು ಕೋಟಿ ಧನ ಸಹಾಯವನ್ನು ಕೊಡಿಸಲು ಪ್ರಯತ್ನ ಮಾಡುವ ಭರವಸೆಯನ್ನು ನೀಡಿದ್ದಾರೆ. ಈ ಭರವಸೆ ಈಡೇರಿದರೆ ನಿಜವಾಗಲೂ ಕನ್ನಡ ವಿದ್ಯಾರ್ಥಿಗಳಿಗೆ ಸಹಕಾರವಾಗುವಂತಹ ಒಂದು ವಸತಿ ನಿಲಯ ದೆಹಲಿಯಲ್ಲಿ ಬರಲಿದೆ. ಕೆಲ ಕನ್ನಡಿಗರು ಕರ್ನಾಟಕ ಭವನಗಳಲ್ಲಿ ಸಾಮಾನ್ಯ ಜನರಿಗೆ ಫಲಾಹಾರಗಳು, ಊಟ ಕಡಿಮೆ ಬೆಲೆಯಲ್ಲಿ ಸಿಗಬೇಕು. ಇದರಿಂದ ವಿದ್ಯಾರ್ಥಿಗಳಿಗೆ ಸಹಾಯವಾಗುತ್ತದೆ ಎಂದು ತಿಳಿಸಿದ್ದಾರೆ. ಮಾನ್ಯ ಸಭಾಪತಿಗಳು ಈ ಎಲ್ಲ ಬೇಡಿಕೆಗಳನ್ನು ಲಿಖಿತ ರೂಪದಲ್ಲಿ ವಿವರವಾಗಿ ನೀಡಲು ತಿಳಿಸಿದ್ದಾರೆ, ಮಾನ್ಯ ಮುಖ್ಯಮಂತ್ರಿಗಳ ಜೊತೆ ಮಾತನಾಡಿ ಯಾವ್ಯಾವ ಕಾರ್ಯಗಳು ದೆಹಲಿಯಲ್ಲಿ ನಡೆಯಬೇಕಿದೆ ಅದಕ್ಕೆ ಸೂಕ್ತ ಸಹಕಾರ ನೀಡಲು ಒಪ್ಪಿಗೆಯನ್ನು ಸೂಚಿಸಿದ್ದಾರೆ. ಉತ್ತಮವಾಗಿ ಮೂಡಿ ಬಂದ ಈ ಕಾರ್ಯಕ್ರಮದ ಉದ್ಘಾಟನೆ ಮಾಡಿದಂಥ ನಮ್ಮ ಅಚ್ಚುಮೆಚ್ಚಿನ ಸಭಾಪತಿಗಳಾದ ಶ್ರೀ ಬಸವರಾಜ ಹೊರಟ್ಟಿರವರಿಗೆ ಮತ್ತು ವಿಧಾನ ಪರಿಷತ್ತಿನ ಮಾಜಿ ಸದಸ್ಯರಾದ ಡಾ. ಡಿ.ಎಸ್. ವೀರಯ್ಯನವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ನಾನು ಧನ್ಯವಾದಗಳನ್ನು ತಿಳಿಸುತ್ತೇನೆ.

ಮಾನ್ಯರೇ, ಈ ರೀತಿಯ ಕಾರ್ಯಕ್ರಮಗಳು ಇನ್ನೂ ಹೆಚ್ಚು ನಡೆಯಬೇಕಿದೆ. ಉತ್ತಮವಾದ ದೆಹಲಿ ಕರ್ನಾಟಕ ಸಂಘದ ಕಾರ್ಯಕ್ರಮಗಳ ಆಯೋಜನೆಗಾಗಿ ಈ ರೀತಿಯ ಸಹಾಯ ಹಸ್ತ ನೀಡಲು ಬರುವಂತಹ ವ್ಯಕ್ತಿಗಳಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಅಭಿನಂದನೆಗಳನ್ನು ತಿಳಿಸುತ್ತೇನೆ. ಜೊತೆಗೆ ನಮ್ಮ ದೆಹಲಿ ಕರ್ನಾಟಕ ಸಂಘದ ಇನ್ನೊಂದು ಭಾಗವಾದ ದೆಹಲಿ ಕನ್ನಡ ಶಾಲೆಯಲ್ಲಿ ಈ ಬಾರಿ ಐದು ಖಾಲಿ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ಆರಂಭವಾಗಿದ್ದು, ಈಗಾಗಲೇ ಮೂರು ಜನರನ್ನು ನೇಮಿಸುವ ಪ್ರಕ್ರಿಯೆ ಚಾಲ್ತಿಯಲ್ಲಿದೆ. ಉಳಿದ ಹುದ್ದೆಗಳ ನೇಮಕ ಪ್ರಕ್ರಿಯೆ ಸಧ್ಯದಲ್ಲೇ ಜರುಗಿ ಇನ್ನಷ್ಟು ಜನ ಕನ್ನಡದವರಿಗೆ ಅವಕಾಶ ಸಿಗಲೆಂದು ಆಶಿಸುತ್ತೇನೆ. ಶಾಲೆಯ ಅಭಿವೃದ್ಧಿಗೆ ಮೂಲ ಕಾರಣಕರ್ತರಾದ ಮ್ಯಾನೇಜರ್ ಮತ್ತು ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿಗಳಾದ ಡಾ. ಎಂ.ಎಸ್. ಶಶಿಕುಮಾರ್‌ರವರಿಗೆ, ಅಧ್ಯಕ್ಷರಿಗೆ ಮತ್ತು ಕಾರ್ಯಕಾರಿ ಸಮಿತಿಯ ಎಲ್ಲಾ ಪದಾಧಿಕಾರಿಗಳಿಗೆ ಮತ್ತು ಇದಕ್ಕೆ ಎಲೆ ಮರೆಕಾಯಿಯಂತೆ ನಿಂತು ಕೆಲಸ ಮಾಡಿದಂಥ ಐ.ಎ.ಎಸ್. ಅಧಿಕಾರಿಗಳಿಗೂ ಸಹ ಅಭಿನಂದನೆಗಳನ್ನು ತಿಳಿಸುತ್ತೇನೆ. ಮಾರಕ ರೋಗ ಕೊರೊನಾ ಹೊಸ ಅಲೆಯನ್ನು ಪರಿಗಣಿಸಿ ದೆಹಲಿಯ ಚಳಿಯನ್ನು ಸಹ ಗಮನಿಸಿಕೊಂಡು ಮುಂದಿನ ದಿನಗಳಲ್ಲಿ ಉತ್ತಮ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡುವ ಭರವಸೆ ನೀಡುತ್ತಿದ್ದೇನೆ. ಬರುವ ಹೊಸ ವರ್ಷ ತಮಗೆಲ್ಲ ಹರ್ಷವನ್ನು ತರಲಿ, ತಮಗೆ ತಮ್ಮ ಕುಟುಂಬಕ್ಕೆ ಹೊಸ ವರ್ಷದ ಶುಭಾಶಯಗಳನ್ನ ಕೋರುತ್ತೇನೆ.

ಬಂಧುಗಳೇ, ಹೆಚ್ಚಿನ ಕಾರ್ಯಕ್ರಮಗಳು, ಆಟೋಟ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳು, ವಿಶಿಷ್ಟ ಕನ್ನಡಿಗ ಪ್ರಶಸ್ತಿ, ಆಹಾರ ಮೇಳದ ಬಹುಮಾನಗಳ ವಿತರಣೆ ಆಗಿರುವ ಕಾರಣ ವಿದ್ಯಾರ್ಥಿ ವೇತನವನ್ನು ಈ ತಿಂಗಳಲ್ಲಿ ನೀಡಲಾಗಲಿಲ್ಲ ಬರುವ ದಿನಗಳಲ್ಲಿ ನೀಡುತ್ತೇವೆ.

*ಸಿ.ಎಂ. ನಾಗರಾಜ*
*ಅಧ್ಯಕ್ಷರು*

## ಮುನ್ನೋಟ

ಆತ್ಮೀಯ ಕನ್ನಡಿಗರೇ,

ಸಮಸ್ತ ಕನ್ನಡ ಕುಲಕೋಟಿಗೆ 66ನೇ ಕರ್ನಾಟಕ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು.

ನವೆಂಬರ್ ಬರುತ್ತಿದ್ದಂತೆ, ಕನ್ನಡ ಪರ ಚುಟವಟಿಕೆಗಳೆಲ್ಲಾ ಇಡೀ ರಾಜ್ಯದಾದ್ಯಂತ ಗರಿಕೆದರುವಂತೆ, ದೆಹಲಿಯ ನಮ್ಮ ಸಂಘದ ಚಟುವಟಿಕೆಗಳೂ ಸಹ ಜಾಗೃತವಾದವು. ಇಡೀ ಸಮಿತಿಯು ನವೆಂಬರ್ ತಿಂಗಳನುದ್ದಕ್ಕೂ ಕಾರ್ಯಕ್ರಮಗಳ ಆಯೋಜನೆಯ ಬಗ್ಗೆ ಚರ್ಚಿಸಿ, ಪ್ರತಿ ವಾರಾಂತ್ಯಕ್ಕೆ ಚಟುವಟಿಕೆಗಳ ಪಟ್ಟಿಯನ್ನು ತಯಾರಿಸಿತ್ತು. ವಾರ್ಷಿಕ ಆಟೋಟ ಸ್ಪರ್ಧೆಗಳು, ಆಹಾರ ಮೇಳ, ಸಾಂಸ್ಕೃತಿಕ ಕಾರ್ಯಕ್ರಮಗಳ ಸ್ಪರ್ಧೆಗಳು, ಸ್ಥಳೀಯ ಕಲಾವಿದರಿಂದ ವೈವಿಧ್ಯಮಯ ಕಾರ್ಯಕ್ರಮಗಳು, ಸಿನಿಮಾ ಪ್ರದರ್ಶನಗಳು, ಪ್ರಶಸ್ತಿ ಪ್ರದಾನ ಕಾರ್ಯಕ್ರಮಗಳೊಂದಿಗೆ ಸರ್ಕಾರದಿಂದ ಪ್ರಾಯೋಜಿತ ನುರಿತ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಹೀಗೆ ಹತ್ತು ಹಲವು ಕಾರ್ಯಕ್ರಮಗಳ ಬಗ್ಗೆ ರೂಪುರೇಷೆ ನಿರ್ಮಾಣವಾಗಿತ್ತು.

ಕೊರೊನಾ ಹಿನ್ನೆಲೆಯಲ್ಲಿ ಕಳೆದ ಒಂದೂವರೆ ವರ್ಷಗಳಿಂದ ಯಾವುದೇ ಕಾರ್ಯಕ್ರಮಗಳಿಲ್ಲದೇ, ನಿಂತ ನೀರಾಗಿದ್ದ ಚಟುವಟಿಕೆಗಳಿಗೆ ಉತ್ಸಾಹದಿಂದ ನೀರೆಯಲೊರಟಿದ್ದ ನಮಗೆ, ಆಘಾತ ನೀಡಿದ ವಿಷಯವೆಂದರೆ ಪುನೀತ್ ರಾಜ್‌ಕುಮಾರ್‌ರವರ ಅಕಾಲಿಕ ಮರಣ. ಇಡೀ ರಾಜ್ಯ ದಿಗ್ಭ್ರಮೆಗೊಳಗಾಗಿ, ತೀವ್ರ ದುಃಖತಪ್ತರಾಗಿದ್ದ ಸಂದರ್ಭದಲ್ಲಿ ನಾವು ದಿನಾಂಕ 31.10.2021ರಂದು ನಿಗದಿಯಾದ ಕಾರ್ಯಕ್ರಮವನ್ನು ಪುನೀತ್ ಸ್ಮರಣಾರ್ಥ "ಪುನೀತ ರಾಜ್‌ಕುಮಾರ್ ಶ್ರದ್ಧಾಂಜಲಿ" ಕಾರ್ಯಕ್ರಮವನ್ನಾಗಿ ಬಹಳ ಶ್ರದ್ಧಾಪೂರ್ವಕವಾಗಿ, ಆಚರಿಸಿದೆವು. ಅಂದು ನಡೆದ ಕಾರ್ಯಕ್ರಮ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಪುನೀತರನ್ನು ನೆನೆದರೆ, ಇಂದಿಗೂ ಮನಸ್ಸು ಭಾರವಾಗುತ್ತೆ, ತನಗರಿವಿಲ್ಲದೇ ಕಣ್ಣು ತೇವವಾಗುತ್ತೆ. ಇದು ಅವರು ಜಗತ್ತಿಗೆ ನೀಡಿದ ಪ್ರೀತಿಗೆ ನಮ್ಮ ಕಾಣಿಕೆಯೋ, ಏನೋ, ಅವರ ನೆನಪು ಸದಾ ಹಸಿರಾಗಿರಲಿ, ಅವರ ಸಾಧನೆ ನಮಗೆ ಪ್ರೇರಕ ಶಕ್ತಿಯಾಗಿರಲಿ.

ಇನ್ನು ನಂತರದ ಕಾರ್ಯಕ್ರಮಗಳ ಬಗ್ಗೆ ಹೇಳುವುದಾದರೆ, ಜನಪ್ರಿಯ ಕಾರ್ಯಕ್ರಮಗಳಾದ-ಆಹಾರ ಮೇಳ ಹಾಗೂ ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪ್ರದಾನ ಹಾಗೂ ಅಂದಿನ ಸಮಾರೋಪ ಸಮಾರಂಭದ ಹೊರತಾಗಿ, ನಮ್ಮ ಇತರೇ ಕಾರ್ಯಕ್ರಮಗಳಲ್ಲಿ ಸದಸ್ಯರ ಭಾಗವಹಿಸುವಿಕೆ ಅಷ್ಟೊಂದು ಉತ್ಸಾಹಕಾರಿಯಾಗಿರಲಿಲ್ಲ. ಮುಂದುವರಿದ ಕೊರೊನಾ ಛಾಯೆ ಇದಕ್ಕೆ ಕಾರಣವಿರಬಹುದೋ, ಏನೋ?

ಮುಂದಿನ ದಿನಗಳಲ್ಲಿಯಾದರೂ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿಕೆ ವೃದ್ಧಿಯಾಗುವುದೆಂದು ಭಾವಿಸೋಣ. ಪದ್ಮಪ್ರಶಸ್ತಿ ವಿಜೇತರೊಂದಿಗೆ ನಮ್ಮ ಕಾರ್ಯಕ್ರಮ, ಪುನೀತ ರಾಜಕುಮಾರ್‌ರ ಶ್ರದ್ಧಾಂಜಲಿ ಕಾರ್ಯಕ್ರಮ ಹಾಗೂ ಕೋವಿಡ್ ವಾರಿಯರ್‌ಗಳಿಗೆ ಸಂಘದ "ವಿಶಿಷ್ಟ ಕನ್ನಡಿಗ" ಪ್ರಶಸ್ತಿ ಪ್ರದಾನ ಇವೆಲ್ಲವೂ ನನಗೆ ಬಹಳ ಸಂತಸ ತಂದ ಕ್ಷಣಗಳಾಗಿವೆ.

ಬನ್ನಿ ಇಂತಹ ಮತ್ತಷ್ಟು ಕ್ಷಣಗಳಿಗೆ ಸಾಕ್ಷೀಭೂತರಾಗೋಣ.

**ಆರ್. ರೇಣುಕುಮಾರ್**
*ಪ್ರಧಾನ ಕಾರ್ಯದರ್ಶಿ*

## ಬ್ಯಾಡ್ಮಿಂಟನ್‌ನಲ್ಲಿ ದೆಹಲಿ ಚಾಂಪಿಯನ್ ಶಿಪ್ ಗೆದ್ದ ದೆಹಲಿ ಕನ್ನಡ ಕುವರಿ ಅನ್ವೇಷಗೌಡ



ಇತ್ತೀಚೆಗೆ ದೆಹಲಿಯ ಕೆಡಿ ಜಾಧವ್ ಕ್ರೀಡಾಂಗಣದಲ್ಲಿ ನಡೆದ ಹದಿನೈದು ವರ್ಷದವರೊಳಗಿನ ವಿಭಾಗದಲ್ಲಿ 2021ನೇ ದೆಹಲಿ ರಾಜ್ಯ ಬ್ಯಾಡ್ಮಿಂಟನ್ ಚಾಂಪಿಯನ್ ಶಿಪ್‌ನಲ್ಲಿ ದೆಹಲಿ ಕನ್ನಡ ಕುವರಿ ಅನ್ವೇಷಗೌಡ ಇವರು ವಿಜೇತರಾಗಿದ್ದಾರೆ.

ಕುಮಾರಿ ಅನ್ವೇಷಗೌಡ ಇವರು ನವದೆಹಲಿಯ ಸಂಸ್ಕೃತಿ ಶಾಲೆಯಲ್ಲಿ ಎಂಟನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಇವರು, ದೆಹಲಿ ಪೊಲೀಸ್‌ನಲ್ಲಿ ಡಿಸಿಪಿಯಾಗಿ ಸೇವೆ ಸಲ್ಲಿಸುತ್ತಿರುವ ಶ್ರೀ ಬಿ.ಎಲ್. ಸುರೇಶ್ ಮತ್ತು ಬ್ಯಾಂಕ್ ಆಫ್ ಇಂಡಿಯಾದಲ್ಲಿ ಎ.ಜಿ.ಎಂ. ಆಗಿ ಕಾರ್ಯ ನಿರ್ವಹಿಸುತ್ತಿರುವ ಶ್ರೀಮತಿ ಅನಿತಾ ಮೊಹಾಂತಿ ಅವರ ಸುಪುತ್ರಿ.

ಅವರು ಈ ಮೊದಲು ಹದಿನೇಳು ವರ್ಷದೊಳಗಿನ ಮಹಿಳೆಯರ ವಿಭಾಗದ ಕ್ವಾರ್ಟರ್ ಫೈನಲ್‌ನಲ್ಲಿ ಅಂತಿಮವಾಗಿ ಚಾಂಪಿಯನ್ ಆದ ಸ್ಪರ್ಧಿಯೊಂದಿಗೆ ಮತ್ತು ಸೆಮಿಫೈನಲ್‌ನಲ್ಲಿ ಹತ್ತೊಂಭತ್ತು ವರ್ಷದೊಳಗಿನವರ ವಿಭಾಗದಲ್ಲಿ ಅಂತಿಮವಾಗಿ ಚಾಂಪಿಯನ್‌ಗೆ ಕೂಡ ತೀವ್ರ ಸ್ಪರ್ಧೆ ನೀಡಿ ಪರಾಜಿತರಾಗಿದ್ದರು.

ದೆಹಲಿ ರಾಜ್ಯ ಮಟ್ಟದಲ್ಲಿ ಅನ್ವೇಷ ಗೌಡ ಅವರು ಹದಿನೈದು ವರ್ಷದೊಳಗಿನವರ ಬ್ಯಾಡ್ಮಿಂಟನ್ ಆಟದಲ್ಲಿ, 1 ನೇ ರ್‍ಯಾಂಕ್ ಹದಿನೇಳು ವರ್ಷದೊಳಗಿನವರಲ್ಲಿ ನಡೆದ ಸ್ಪರ್ಧೆಯಲ್ಲಿ, 5ನೇ ರ್‍ಯಾಂಕ್ ಹತ್ತೊಂಭತ್ತು ವರ್ಷದೊಳಗಿನವರಲ್ಲಿ 3ನೇ ರ್‍ಯಾಂಕ್, ಮಹಿಳಾ ಕಿರಿಯರ ವಿಭಾಗದಲ್ಲಿ 13ನೇ ರ್‍ಯಾಂಕ್‌ನಲ್ಲಿದ್ದಾರೆ.

ಕುಮಾರಿ ಅನ್ವೇಷಗೌಡ ಅವರು ಕಳೆದ ಹತ್ತು ತಿಂಗಳಿನಿಂದ ಶ್ರೀ ನಿಖಿಲ್ ಜೋಷಿ ಇವರಲ್ಲಿ ತರಬೇತಿ ಪಡೆಯುತ್ತಿದ್ದಾರೆ.

ಕುಮಾರಿ ಅನ್ವೇಷಗೌಡ ತಮ್ಮ ಸಾಧನೆಯ ಪಥದಲ್ಲಿ ಇನ್ನಷ್ಟು ಎತ್ತರಕ್ಕೆ ಏರಲೆಂದು ಹಾರೈಸೋಣ. ಇವರಿಗೆ, ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳು.

## ಸಂಘದಲ್ಲಿ ಇತರ ಸಂಘ ಸಂಸ್ಥೆಗಳ ಕಾರ್ಯಕ್ರಮಗಳು

ನಾಡಪ್ರಭು ಕೆಂಪೇಗೌಡ ಫೌಂಡೇಶನ್, ನವದೆಹಲಿಯು ದಿನಾಂಕ 19.12.2021ರಂದು ಸಂಜೆ 5.00 ಗಂಟೆಗೆ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನೆ, ಪ್ರತಿಭಾ ಪುರಸ್ಕಾರ ಮತ್ತು ವಿದ್ಯಾರ್ಥಿ ವೇತನ ವಿತರಣಾ ಕಾರ್ಯಕ್ರಮವನ್ನು ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿಗಳ ದಿವ್ಯ ಸಾನಿಧ್ಯದಲ್ಲಿ, ಶ್ರೀ ಶ್ರೀ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಅವರ ವಿಶೇಷ ಉಪಸ್ಥಿತಿಯಲ್ಲಿ ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಹಮ್ಮಿಕೊಂಡಿದೆ.

ಶ್ರೀ ಬಿ.ಎಲ್. ಸಂತೋಷ್, ಕೇಂದ್ರ ರಾಜ್ಯ ಸಚಿವರುಗಳಾದ ಸನ್ಮಾನ್ಯ ಶೋಭಾ ಕರಂದ್ಲಾಜೆ, ಸನ್ಮಾನ್ಯ ಶ್ರೀ ರಾಜೀವ್ ಚಂದ್ರಶೇಖರ್ ಮತ್ತು ಸನ್ಮಾನ್ಯ ಡಾ. ಕೆ. ಸುಧಾಕರ, ಆರೋಗ್ಯ ಸಚಿವರು, ಕರ್ನಾಟಕ ಸರ್ಕಾರ ಇವರು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ.

# ಪದ್ಮಶ್ರೀ ಪುರಸ್ಕೃತ ವೃಕ್ಷ ಮಾತೆ ತುಳಸಿ ಗೌಡ ಹಾಗೂ ಜಾನಪದ ಕಲಾವಿದೆ ಮಂಜಮ್ಮ ಜೋಗತಿಯವರಿಗೆ ದೆಹಲಿ ಕರ್ನಾಟಕ ಸಂಘದ ಅಭಿನಂದನೆ




ಪದ್ಮಶ್ರೀ ಪ್ರಶಸ್ತಿ ಪಡೆದ ಕರ್ನಾಟಕದ ಎಲ್ಲ ಗಣ್ಯರನ್ನು ಪ್ರತೀ ವರ್ಷ ದೆಹಲಿ ಕರ್ನಾಟಕ ಸಂಘ ಅಭಿನಂದಿಸುತ್ತಾ ಬಂದಿದ್ದು, ಈ ಬಾರಿಯೂ ಕೂಡ ಪದ್ಮ ವಿಭೂಷಣ, ಪದ್ಮಭೂಷಣ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಡಾ. ಬಿ.ಎಂ. ಹೆಗ್ಡೆ, ಡಾ. ಚಂದ್ರಶೇಖರ ಕಂಬಾರ ಅವರೂ ಸೇರಿದಂತೆ ಎಲ್ಲರನ್ನೂ ಆಹ್ವಾನಿಸಿದ್ದೆವು. ಸಮಯದ ಅಭಾವ, ಮತ್ತಿತರ ಕಾರಣಾಂತರಗಳಿಂದ ಅನೇಕರು ಇಲ್ಲಿ ಉಪಸ್ಥಿತರಿರಲು ಸಾಧ್ಯವಾಗಲಿಲ್ಲ. ಅಲ್ಲದೆ ಅಕ್ಷರ ಯೋಗಿ ಹರೇಕಾಳ ಹಾಜಬ್ಬ ಅವರನ್ನು ಈಗಾಗಲೇ ದೆಹಲಿ ಕನ್ನಡ ಶಾಲೆಯ ಆವರಣದಲ್ಲಿ ನಮ್ಮ ಸಂಘದ ವತಿಯಿಂದ ಸನ್ಮಾನಿಸಿ ಗೌರವಿಸಿದ್ದೇವೆ. ಪದ್ಮ ಪುರಸ್ಕೃತರಾದ ಎಲ್ಲ ಕನ್ನಡಿಗರಿಗೂ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳು. ಇವತ್ತು ನಮ್ಮೊಂದಿಗಿರುವ ಕಾಡಿನ ದೇವತೆ ತುಳಸಿ ಗೌಡ ಮತ್ತು ಜನಪದ ನೃತ್ಯ ಕಲಾವಿದೆ ಮಂಜಮ್ಮ ಜೋಗತಿಯವರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಅಪಾರ ಸಾಧನೆ ಮಾಡಿದ್ದು, ಅವರಿಗೆ ರಾಷ್ಟ್ರಪತಿಯವರಿಂದ ಪದ್ಮಶ್ರೀ ಪ್ರಶಸ್ತಿ ನೀಡಿ ಪುರಸ್ಕರಿಸಿರುವುದು ಎಲ್ಲಾ ಕನ್ನಡಿಗರಿಗೆ ಹೆಮ್ಮೆಯ ವಿಷಯ ಎಂದು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಅವರು ಹೇಳಿದರು.

ಸನ್ಮಾನ ಸ್ವೀಕರಿಸಿ, ಅಭಿನಂದಿತರಾದ ಪದ್ಮಶ್ರೀ ಪುರಸ್ಕೃತೆ ಮಂಜಮ್ಮ ಜೋಗತಿಯವರು ಮಾತನಾಡಿ, ಪದ್ಮಶ್ರೀ ಪ್ರಶಸ್ತಿ ಸ್ವೀಕರಿಸಿದ ನಂತರ ತಮಗೆ ಸಿಗುತ್ತಿರುವ ಮೊದಲ ಅಭಿನಂದನಾ ಕಾರ್ಯಕ್ರಮ ಇದಾಗಿದ್ದು, ದೆಹಲಿ ಕರ್ನಾಟಕ ಸಂಘದ ಪದಾಧಿಕಾರಿಗಳು ಹಾಗೂ ಇಷ್ಟೊಂದು ಹೆಚ್ಚಿನ ಸಂಖ್ಯೆಯಲ್ಲಿ ದೆಹಲಿ ಕನ್ನಡಿಗರು ಈ ಸಂದರ್ಭದಲ್ಲಿ ಇಲ್ಲಿ ಭಾಗಿಯಾಗಿರುವುದು ತಮಗೆ ಅತ್ಯಂತ ಸಂತೋಷವಾಗಿದೆ ಎಂದು ಹೆಮ್ಮೆ ಪಟ್ಟರು. ಇಲ್ಲಿನ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಕನ್ನಡ ಕಾರ್ಯಕ್ರಮಗಳಲ್ಲಿ ಭಾಗಹಿಸಬೇಕೆಂದು ಹುರಿದುಂಬಿಸಿದರು. ತಾವು ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷರಾಗಿದ್ದೂ, ಪದ್ಮಶ್ರೀ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಹಲವಾರು ಪ್ರಶಸ್ತಿಗಳನ್ನು ಪಡೆದರೂ ಅದರಿಂದ ಯಾವ ಗರ್ವವನ್ನೂ ನನಗಿಲ್ಲ. ಜನ ಸಾಮಾನ್ಯಳಾಗಿಯೇ ಬದುಕುತ್ತಿದ್ದೇನೆ ಎಂದರು.

ತಾವು ಹಿಂದೆ ಅಭಿನಯಿಸಿದ ಜಾನಪದ ನಾಟಕದಿಂದ ಪರುಶುರಾಮ್ ಮತ್ತು ತಾಯಿ ಹಾಗೂ ಜಮದಗ್ನಿಯ ಪಾತ್ರಗಳ ಕೆಲವು ತುಣುಕುಗಳನ್ನು ಅಭಿನಯಿಸಿ ನೆರೆದಿದ್ದ ಎಲ್ಲಾ ಕನ್ನಡಿಗರ ಮನಸೂರೆಗೊಂಡರು. ತಮ್ಮನ್ನು ಕರೆದು ಅಭಿನಂದಿಸಿದ್ದಕ್ಕಾಗಿ ದೆಹಲಿ ಕರ್ನಾಟಕ ಸಂಘಕ್ಕೆ ಧನ್ಯವಾದಗಳನ್ನು ಅರ್ಪಿಸಿದರು.

ದಿನಾಂಕ 10.11.2021ರಂದು ಈ ಬಾರಿಯ ಪದ್ಮಶ್ರೀ ಪುರಸ್ಕೃತರಾದ ತುಳಸಿ ಗೌಡ ಹಾಗೂ ಮಂಜಮ್ಮ ಜೋಗತಿ ಅವರುಗಳಿಗೆ ಸಂಘದ ವಿಚಾರ ಸಂಕಿರಣ ಭವನದಲ್ಲಿ ಅಭಿನಂದನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು..

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಮತ್ತೊಬ್ಬ ಪದ್ಮಶ್ರೀ ಪುರಸ್ಕೃತೆ 77 ವರ್ಷದ ತುಳಸಿ ಗೌಡ ಅವರು ಮಾತನಾಡಿ ತಾವು ಚಿಕ್ಕ ವಯಸ್ಸಿನಿಂದಲೇ ಗಿಡಮರಗಳನ್ನು ನೆಡುತ್ತಾ ಬಂದಿದ್ದು, ಈಗಾಗಲೇ ಲಕ್ಷಾಂತರ ಮರಗಳನ್ನು ನೆಟ್ಟು ಪೋಷಿಸಿದ್ದೇನೆ. ಮುಂದಿನ ದಿನಗಳಲ್ಲಿ ಇನ್ನು ಹೆಚ್ಚು ಹೆಚ್ಚು ಗಿಡಮರಗಳನ್ನು ನೆಡುವುದನ್ನು ಮುಂದುವರಿಸಿಕೊಂಡು ಹೋಗುತ್ತೇನೆ ಎಂದು ತಮ್ಮ ನಿರಂತರ ಪರಿಸರ ಪ್ರೇಮವನ್ನು ವ್ಯಕ್ತಪಡಿಸಿದರು. ತಮಗೆ ಗೌರವ ಸಮರ್ಪಿಸಿದ ಎಲ್ಲರಿಗೂ ಕೃತಜ್ಞತೆಯನ್ನು ಅರ್ಪಿಸಿದರು.

ಪದ್ಮಶ್ರೀ ತುಳಸಿ ಗೌಡ ಹಾಗೂ ಪದ್ಮಶ್ರೀ ಮಂಜಮ್ಮ ಜೋಗತಿಯವರನ್ನು ಶಾಲು ಹೊದಿಸಿ, ಸಂಘದ ಸ್ಮರಣಿಕೆ, ಫಲ ಪುಷ್ಪ ನೀಡಿ ಅತ್ಯಂತ ಆದರ ಪೂರ್ವಕವಾಗಿ ಗೌರವಿಸಲಾಯಿತು. ಈ ಅಭಿನಂದನಾ ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ ಶ್ರೀ ಆರ್. ರೇಣುಕುಮಾರ್ ಹಾಗೂ ಸಂಘದ ಕಾರ್ಯಕಾರಿ ಸಮಿತಿಯ ಪದಾಧಿಕಾರಿಗಳು ಮತ್ತು ಸದಸ್ಯರುಗಳು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಕಾವಲು ಸಮಿತಿ ಸದಸ್ಯರಾದ ಶ್ರೀ ಡಿ.ವಿ.ಎಸ್. ಮೂರ್ತಿ, ಸಂಘದ ಮಾಜಿ ಅಧ್ಯಕ್ಷ ಶ್ರೀ ಸಿ.ವಿ. ಗೋಪಿನಾಥ್, ತುಮಕೂರು ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ವಿದ್ವಾನ್ ಸಿದ್ದರಾಮಯ್ಯನವರು ಹಾಗು ಮಾಜಿ ಉಪಾಧ್ಯಕ್ಷ ಡಾ. ಅವನೀಂದ್ರನಾಥ್ ರಾವ್ ಉಪಸ್ಥಿತರಿದ್ದರು. ಅವರುಗಳು ಮಾತನಾಡಿ ಅಭಿನಂದನೆಗಳನ್ನು ತಿಳಿಸಿದರು. ಸನ್ಮಾನ ಸಮಾರಂಭಕ್ಕೆ ಅಪಾರ ಸಂಖ್ಯೆಯಲ್ಲಿ ದೆಹಲಿ ಕನ್ನಡಿಗರು ಸಾಕ್ಷಿಯಾದರು.

ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಚಂದ್ರಶೇಖರ ಎನ್.ಪಿ. ಅವರು ಕಾರ್ಯಕ್ರಮವನ್ನು ನಿರೂಪಿಸಿ, ಪದ್ಮಶ್ರೀ ಪುರಸ್ಕೃತರಾದ ತುಳಸಿ ಗೌಡ ಮತ್ತು ಮಂಜಮ್ಮ ಜೋಗತಿ ಅವರನ್ನು ಪರಿಚಯಿಸಿದರು. ಮತ್ತೊಬ್ಬ ಸದಸ್ಯ ಶ್ರೀ ಕೆ.ಎಸ್. ಮೂರ್ತಿ ಸ್ವಾಗತಿಸಿದರು. ಪ್ರಾಸ್ತಾವಿಕ ನುಡಿಗಳನ್ನಾಡಿದ ಪ್ರಧಾನ ಕಾರ್ಯದರ್ಶಿ ಶ್ರೀ ಆರ್. ರೇಣುಕುಮಾರ್ ಅವರು ಕೊನೆಯಲ್ಲಿ ಈ ಕಾರ್ಯಕ್ರಮಕ್ಕೆ ಆಗಮಿಸಿದ್ದ ಅತಿಥಿ ಗಣ್ಯರು ಹಾಗೂ ಎಲ್ಲರಿಗೂ ಸಂಘದ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತಾ ನೆರೆದಿದ್ದ ಎಲ್ಲರನ್ನು ವಂದಿಸಿದರು.

# "ಪದ್ಮಶ್ರೀ ಪುರಸ್ಕೃತ" ಅಕ್ಷರ ಸಂತ ಹರೇಕಳ ಹಾಜಬ್ಬರಿಗೆ ದೆಹಲಿ ಕನ್ನಡಿಗರಿಂದ ಗೌರವ ಸನ್ಮಾನ

"ಊರಿಗೊಂದು ಶಾಲೆ" ಎನ್ನುವ ಯೋಜನೆ ಜಾರಿಯಲ್ಲಿದ್ದರೂ ಕೂಡ ಶಾಲೆ ಶಿಕ್ಷಣದಿಂದ ದೂರವಾಗಿದ್ದ ನ್ಯೂಪಡ್ಪು ದಕ್ಷಿಣ ಕನ್ನಡ ಜಿಲ್ಲೆಯ ಸರಹದ್ದಿನಲ್ಲಿರುವ ಪುಟ್ಟ ಹಳ್ಳಿ. ಕರ್ನಾಟಕದ ಸಾಕ್ಷರರ ಜಿಲ್ಲೆಯೆಂದೇ ಪ್ರಸಿದ್ಧಿ ಪಡೆದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿದ್ದೂ ಶಿಕ್ಷಣ ವ್ಯವಸ್ಥೆಯಿಂದ ದೂರವೇ ಉಳಿದು ಬಿಟ್ಟಿತ್ತು. ಅದೊಂದು ದಿನ ಇಲ್ಲಿ ದೊಡ್ಡ ವಿದ್ಯಾಕ್ರಾಂತಿಯೇ ನಡೆಯಿತು. 21ನೇ ಶತಮಾನದ ಮೊದಲ ವರ್ಷದಲ್ಲಿ ಭವಿಷ್ಯದ ಬೆಳ್ಳಿ ರೇಖೆಯಾಗಿ ಅಲ್ಲಿ ಹೊಸ ಶಾಲೆಯೊಂದು ಪ್ರಾರಂಭವಾಯಿತು. ಹೀಗೆ ಆರಂಭವಾದ ಶಾಲೆಯೇ 'ಸರ್ಕಾರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆ ನ್ಯೂಪಡ್ಪು'. ಇಲ್ಲಿ ಜ್ಞಾನದ ಸೂರ್ಯ ಉದಯಿಸಿದ್ದಾನೆಂದರೆ ಅದರ ಹಿಂದೆ ಒಬ್ಬ ವ್ಯಕ್ತಿಯ ಜೀವಮಾನ ಸಾಧನೆ ಇದೆ. ಶಾಲೆಗಾಗಿ ಹಳ್ಳಿಯ ಮಕ್ಕಳ ಭವಿಷ್ಯಕ್ಕಾಗಿ ಇಡೀ ಬದುಕನ್ನೇ ಮುಡಿಪಾಗಿಟ್ಟ ಆ ಶ್ರೇಷ್ಠ ವ್ಯಕ್ತಿಯೇ ಶ್ರೀ ಹರೇಕಳ ಹಾಜಬ್ಬ.

ಹರೇಕಳ ಹಾಜಬ್ಬ ಸಾಮಾನ್ಯರಲ್ಲಿ ಸಾಮಾನ್ಯ ವ್ಯಕ್ತಿ, ಎನಗಿಂತ ಕಿರಿಯರಿಲ್ಲ ಎನ್ನುವ ಅವರದ್ದು ಸಂತನ ಜೀವನ. ಹರೇಕಳದ ಕಡು ಬಡತನದ ಕುಟುಂಬದಲ್ಲಿ ಜನಿಸಿದ ಅವರು ಒಂದು ಹೊತ್ತಿನ ಊಟಕ್ಕೂ ಹೋರಾಟ ನಡೆಸಿದವರು. ಮೊದಲು ಬೀಡಿ ಕಟ್ಟಿಕೊಂಡಿದ್ದ ಹಾಜಬ್ಬ ಮುಂದೆ ಕುಟುಂಬ ನಿರ್ವಹಣೆಗಾಗಿ ಕಿತ್ತಳೆ ಹಣ್ಣಿನ ವ್ಯಾಪಾರವನ್ನು ನೆಚ್ಚಿಕೊಂಡರು, ಮಂಗಳೂರಿನ ಕೇಂದ್ರ ಮಾರುಕಟ್ಟೆಯ ಹಣ್ಣಿನ ವ್ಯಾಪಾರಿಗಳಿಂದ ಕಿತ್ತಳೆ ಹಣ್ಣನ್ನು ಖರೀದಿಸಿ, ಬುಟ್ಟಿಯಲ್ಲಿಟ್ಟು ಮಾರಾಟ ಮಾಡುತ್ತಿದ್ದರು.

ಈ ಹಳ್ಳಿ ಶಾಲೆಯಿಂದ ವಂಚಿತವಾಗಲು ಕಾರಣ ಬಡತನ. ಬದುಕಿಗೆ ದುಡಿಮೆಯೊಂದೇ ದಾರಿ ಎಂದುಕೊಂಡಿದ್ದ ಆ ಹಳ್ಳಿಯ ಜನರು ಶಾಲೆಗೆ ಮಕ್ಕಳನ್ನು ಕಳಿಸುವ ಬಗ್ಗೆ ಯೋಚನೆಯನ್ನೇ ಮಾಡುತ್ತಿರಲಿಲ್ಲ. ಬೀದಿ ಬದಿಯಲ್ಲಿ ಬುಟ್ಟಿ ಹೊತ್ತು ಕಿತ್ತಳೆ ಮಾರುವ ಹಾಜಬ್ಬ ಅವರಿಗೆ ಬಡತನದ ಬೇಗೆ ಚೆನ್ನಾಗಿ ಅರ್ಥವಾಗಿತ್ತು. ಹಾಗಾಗಿ 2000ನೇ ಇಸವಿಯಲ್ಲಿ ಶಾಲೆಗೆ ಮಂಜೂರಾತಿ ಸಿಕ್ಕ ತಕ್ಷಣ ನ್ಯೂಪಡ್ಪುನಲ್ಲಿ 28 ಮಕ್ಕಳೊಂದಿಗೆ ಹಾಜಬ್ಬ ಒಂದು ಮಸೀದಿಯಲ್ಲಿ ಶಾಲೆಯನ್ನು ಆರಂಭಿಸಿದರು. ಪ್ರಾಥಮಿಕ ಶಾಲೆಯ ಬಳಿಕ ಪ್ರೌಢಶಾಲೆಯನ್ನು ಹಳ್ಳಿಗೆ ತಂದರು. ಈ ಶ್ರೀಸಾಮಾನ್ಯನ ದೊಡ್ಡ ನಿರ್ಧಾರ ಮತ್ತು ನಿರಂತರ ಪ್ರಯತ್ನಗಳಿಂದಾಗಿ ನ್ಯೂಪಡ್ಪು ಸರ್ಕಾರಿ ಶಾಲೆ ಅದ್ಭುತವಾಗಿ ಬೆಳೆಯಿತು. ಸರ್ಕಾರಿ ಕನ್ನಡ ಶಾಲೆಗಳೆಂದರೆ ತುಚ್ಛವಾಗಿ ಕಾಣುವ ಮನೋಭಾವಗಳಿಗೆ ಸವಾಲೊಡ್ಡುವಂತೆ ಶಾಲೆ ಬೆಳೆದು ನಿಂತಿದೆ.

ನ್ಯೂಪಡ್ಪುವಿನಲ್ಲಿ ಬೀಡಿ ಕಟ್ಟುತ್ತಿದ್ದ ಮಕ್ಕಳ ಕೈಗಳು ಇವತ್ತು ಪೆನ್ನು, ಪೆನ್ಸಿಲ್‌ಗಳನ್ನು ಹಿಡಿಯತೊಡಗಿವೆ. ಕೂಲಿ ಕೆಲಸ ಮಾಡುತ್ತಿದ್ದ ಮಕ್ಕಳು ಪುಸ್ತಕಗಳನ್ನು ಓದುತ್ತಿದ್ದಾರೆ. ಅಕ್ಷರ ಜ್ಞಾನವಿಲ್ಲದೆ ಅಂಧಕಾರದಲ್ಲಿದ್ದ ಮನಸ್ಸುಗಳು ಶಿಕ್ಷಣ ಪಡೆದು ಆತ್ಮವಿಶ್ವಾಸದಿಂದ





ಮುನ್ನುಗ್ಗತೊಡಗಿವೆ. ಇವತ್ತು ಈ ಶಾಲೆ 'ಸರ್ಕಾರಿ ಕನ್ನಡ ಶಾಲೆ'ಯಾಗಿ ಉಳಿದಿಲ್ಲ. ಅದು ಇಂದು 'ಹಾಜಬ್ಬ ಶಾಲೆ' ಎಂದೇ ಪ್ರಸಿದ್ಧವಾಗಿದೆ. ಇಂತಹ ಅದ್ಭುತವಾದ ಶಾಲೆಯೊಂದನ್ನು ನಿರ್ಮಿಸಲು ತನ್ನ ಇಡೀ ಬದುಕನ್ನು ಮೀಸಲಿಟ್ಟಂತಹ ಸರಳಜೀವಿ ಮೃದುಸ್ವಭಾವದ ವ್ಯಕ್ತಿತ್ವವುಳ್ಳ ಅಕ್ಷರ ಸಂತನೆಂದೇ ಕರೆಯುವ ಶ್ರೀ ಹರೇಕಳ ಹಾಜಬ್ಬನವರನ್ನು ಭಾರತ ಸರ್ಕಾರವು ಗುರುತಿಸಿತು. ದೇಶದ ಪ್ರಥಮ ನಾಗರಿಕರಾದ ರಾಷ್ಟ್ರಪತಿಯವರು ದೆಹಲಿಯ ರಾಷ್ಟ್ರಪತಿ ಭವನದಲ್ಲಿ ಪದ್ಮಶ್ರೀ ಪ್ರಶಸ್ತಿಯನ್ನು ನೀಡಿ ಇವರನ್ನು ಗೌರವಿಸಿದ್ದು ನಾಡಿನ ಜನತೆಗೆ ತುಂಬಾ ಸಂತೋಷವನ್ನುಂಟು ಮಾಡಿದೆ.

ಇಂತಹ ಒಬ್ಬ ಅಪರೂಪದ ಸಾಧಕ ಅಕ್ಷರ ಸಂತನನ್ನು ದೆಹಲಿ ಕನ್ನಡ ಶಾಲೆಯ ಆವರಣದಲ್ಲಿ ದೆಹಲಿ ಕನ್ನಡಿಗರ ಕಣ್ಣುಗಳಂತಿರುವ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ ಹಾಗೂ ದೆಹಲಿ ಕರ್ನಾಟಕ ಸಂಘ ಎರಡೂ ಸಂಸ್ಥೆಗಳು ದಿನಾಂಕ 08 ನೇ ನವೆಂಬರ್ 2021 ರಂದು ಸನ್ಮಾನಿಸಿದವು.

ಮೊದಲಿಗೆ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷರು, ಕಾರ್ಯದರ್ಶಿಗಳು, ಆಡಳಿತ ಮಂಡಳಿಯ ಪದಾಧಿಕಾರಿಗಳು, ಸದಸ್ಯರು, ಪ್ರಾಂಶುಪಾಲರು ಸೇರಿ ಶ್ರೀ ಹರೇಕಳ ಹಾಜಬ್ಬನವರಿಗೆ ಫಲಪುಷ್ಪ ಮತ್ತು ಸ್ಮರಣಿಕೆಯನ್ನು ನೀಡಿ ಶಾಲುಹೊದಿಸಿ ಸನ್ಮಾನಿಸಿದರು.

ಅನಂತರ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀಯುತ ಸಿ.ಎಂ. ನಾಗರಾಜ ಅವರು ತಮ್ಮ ಕಾರ್ಯಕಾರಿಣಿ ಸಮಿತಿಯ ಪದಾಧಿಕಾರಿಗಳು ಮತ್ತು ಸದಸ್ಯರೊಂದಿಗೆ ಶಾಲೆಯ ಆವರಣದಲ್ಲಿಯೇ ಶ್ರೀ ಹಾಜಬ್ಬನವರನ್ನು ಅಭಿನಂದಿಸಿದರು. ಹಾಗೆಯೇ ಮಕ್ಕಳ ಸಾಹಿತ್ಯ ಪರಿಷತ್ತು ದೆಹಲಿ ಘಟಕದ ಪರವಾಗಿ ಶ್ರೀ ಅರುಣ್ ಅವರು ಶ್ರೀ ಹಾಜಬ್ಬ ನವರಿಗೆ ಹೂಗುಚ್ಛ ನೀಡಿ ಅಭಿನಂದಿಸಿದರು. ಅದೇ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘವು ಆಯೋಜಿಸಿದ್ದ ಆಟೋಟ ಸ್ಪರ್ಧೆಗಳಲ್ಲಿ ಭಾಗಿಯಾಗಿದ್ದ ನೂರಾರು ಕನ್ನಡಿಗರು ಹಾಜಬ್ಬ ನವರಿಗೆ ಅಭಿನಂದನೆಗಳನ್ನು ಸಲ್ಲಿಸಿ ಗೌರವ ಅರ್ಪಿಸಿದರು.

ಭಾರತ ಸರ್ಕಾರವು ಇಂತಹ ಜನ ಸಾಮನ್ಯ ವ್ಯಕ್ತಿಗಳನ್ನು ಗುರುತಿಸಿ ಪದ್ಮಶ್ರೀ ಪ್ರಶಸ್ತಿಯನ್ನು ನೀಡಿ ಗೌರವಿಸಿದ್ದು ದೇಶದ ಕೋಟ್ಯಾಂತರ ಯುವ ಪೀಳಿಗೆಗೆ ಒಂದು ಪ್ರೇರಣೆಯಾಗಿದೆ. ಆ ದೇವರು ಶ್ರೀ ಹರೇಕಳ ಹಾಜಬ್ಬನವರಿಗೆ ಹೆಚ್ಚಿನ ಆಯಸ್ಸು ಆರೋಗ್ಯ ಆನಂದವನ್ನು ನೀಡಿ ಸದಾ ಸಂತೋಷವಾಗಿಡಲಿ ಎಂದು ಬೇಡಿಕೊಳ್ಳುತ್ತೇನೆ. □

**ತಿಮ್ಮಪ್ಪ ಜಿ.ಆರ್.**
**ಆಡಳಿತ ಮಂಡಳಿ ಸದಸ್ಯರು**
**ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ**

# ಅದ್ಭುತ ಯಶಸ್ಸು ಕಂಡ ದೆಹಲಿ ಕರ್ನಾಟಕ ಸಂಘದ ಆಹಾರ ಮೇಳ- ಕರ್ನಾಟಕ ವಿವಿಧ ಜಿಲ್ಲೆಗಳ ತಿಂಡಿ ತಿನಿಸುಗಳ ಕೈರುಚಿ ಸವಿದ ಸಾವಿರಾರು ದೆಹಲಿ ಕನ್ನಡಿಗರು







ದೆಹಲಿ ಕರ್ನಾಟಕ ಸಂಘ ದಿನಾಂಕ 14.11.2021 ರಂದು ಆಯೋಜಿಸಿದ್ದ ಆಹಾರ ಮೇಳ – "ಕೈರುಚಿ" ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳ ವಿಶಿಷ್ಟವಾದ ತಿಂಡಿ ತಿನಿಸುಗಳನ್ನು ಹೊರನಾಡ ಕನ್ನಡಿಗರು ಮತ್ತು ಕನ್ನಡೇತರರೂ ಕೂಡ ಸವಿಯುವಂತಹ ವಿಶೇಷ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಉದ್ಘಾಟನೆಯನ್ನು ಮುಖ್ಯ ಅತಿಥಿಗಳಾಗಿ ಆಗಮಿಸಿದ ದೆಹಲಿಯ ಪ್ರತಿಷ್ಠಿತ ಸರ್ ಗಂಗಾರಾಮ್ ಆಸ್ಪತ್ರೆಯ ಹಿರಿಯ ತಜ್ಞ ವೈದ್ಯರು, ಸರ್ಜಿಕಲ್ ಗ್ಯಾಸ್ಟ್ರೋ ಎಂಟಿರೋಲಾಜಿಸ್ಟ್ ಮತ್ತು ಲಿವರ್ ಟ್ರಾನ್ಸ್‌ಪ್ಲಾಂಟ್ ಸ್ಪೆಶಲಿಸ್ಟ್ ಆದ ಡಾ. ಸುರೇಶ್ ಸಿಂಘ್ವಿ ನಡೆಸಿಕೊಟ್ಟರು. ಈ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ, ಉಪಾಧ್ಯಕ್ಷರುಗಳಾದ ಡಾ. ಎಂ.ಎಸ್. ಶಶಿ ಕುಮಾರ್ ಮತ್ತು ಶ್ರೀಮತಿ ಪೂಜಾ ಪಿ. ರಾವ್, ಪ್ರಧಾನ ಕಾರ್ಯದರ್ಶಿ ಶ್ರೀ ಆರ್. ರೇಣುಕುಮಾರ್, ಖಜಾಂಚಿ ಶ್ರೀ ರಾಧಾಕೃಷ್ಣ ಹಾಗೂ ಸಮಿತಿಯ ಪದಾಧಿಕಾರಿಗಳು, ಸದಸ್ಯರು ಹಾಗೂ ಅಪಾರ ಸಂಖ್ಯೆಯಲ್ಲಿ ದೆಹಲಿ, ಎನ್.ಸಿ.ಆರ್. ನ ಕನ್ನಡಿಗರು ದೆಹಲಿ ಸ್ಥಳೀಯರು, ಹಿರಿಯರು ಉಪಸ್ಥಿತರಿದ್ದರು. ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಕಾರ್ಯಕ್ರಮ ಆಯೋಜನೆ ಬಗ್ಗೆ ಹಾಗೂ ಹಿನ್ನೆಲೆಯನ್ನು ವಿವರಿಸಿದರು. ಪ್ರಧಾನ ಕಾರ್ಯದರ್ಶಿ ಆರ್. ರೇಣುಕುಮಾರ್ ಭಾಗಿಯಾಗುತ್ತಿರುವ ಎಲ್ಲರನ್ನೂ ಸ್ವಾಗತಿಸಿ ಕಾರ್ಯಕ್ರಮಕ್ಕೆ ಶುಭ ಕೋರಿದರು.

ಕರ್ನಾಟಕವನ್ನು ಕನ್ನಡ ಕಲೆ, ಸಾಹಿತ್ಯ, ಸಂಸ್ಕೃತಿ, ಸಂಗೀತ, ವಾಸ್ತು ಶಿಲ್ಪ ಹಾಗೂ ಆಹಾರ, ಊಟೋಪಚಾರ ಇತ್ಯಾದಿಗಳೆಲ್ಲವನ್ನು ಸಮಗ್ರವಾಗಿ ಪ್ರತಿನಿಧಿಸುವ ಗುರುತರ ಹೊಣೆಗಾರಿಕೆಯನ್ನು ಸಮರ್ಥವಾಗಿ ನಿರ್ವಹಿಸುತ್ತಾ ಬಂದಿರುವುದು ದೆಹಲಿ ಕರ್ನಾಟಕ ಸಂಘದ ಹೆಗ್ಗಳಿಕೆ. ಅದೇ ರೀತಿ ಕರ್ನಾಟಕದ ವಿವಿಧ ಜಿಲ್ಲೆಗಳ ವೈವಿಧ್ಯಮಯ ಆಹಾರ ಪದ್ಧತಿ ಮತ್ತು ತಿಂಡಿ ತಿನಿಸುಗಳನ್ನು ನಮ್ಮ 21 ದೆಹಲಿ ಕನ್ನಡಿಗರ ಕುಟುಂಬಗಳು ಅತ್ಯಂತ ಶ್ರದ್ಧೆ ಮತ್ತು ಪರಿಶ್ರಮದಿಂದ ಸಿದ್ಧಪಡಿಸಿ ಸುಮಾರು ಹೊರನಾಡ ಕನ್ನಡಿಗರು ಸವಿಯುವಂತೆ ಮಾಡಿದ್ದು ನಿಜಕ್ಕೂ ಶ್ಲಾಘನೀಯ.

ಇಂತಹ ವೈಶಿಷ್ಟ್ಯ ಪೂರ್ಣವಾದ "ಕೈರುಚಿ" ಆಹಾರ ಮೇಳ ಕಾರ್ಯಕ್ರಮದಲ್ಲಿ ಸುಮಾರು ಎರಡು ಸಾವಿರಕ್ಕೂ ಹೆಚ್ಚು ಜನರು ಪಾಲ್ಗೊಳ್ಳುವ ಮೂಲಕ ಕಾರ್ಯಕ್ರಮವನ್ನು ಯಶಸ್ವಿಯಾಗೊಳಿಸಿದ್ದಲ್ಲದೆ, ಈ ಆಹಾರ ಮೇಳದಲ್ಲಿ ಭಾಗವಹಿಸಿ ಕನ್ನಡಿಗರಲ್ಲಿ ಒಂದು ಹೊಸ ಬಗೆಯ ಹುಮ್ಮಸ್ಸು ಉತ್ಸಾಹ, ಆತ್ಮ ವಿಶ್ವಾಸ ಮೂಡಲು ಕಾರಣರಾಗಿದ್ದಾರೆ. ಹಾಗಾಗಿ ದೆಹಲಿ ಕರ್ನಾಟಕ ಸಂಘ ಆಯೋಜಿಸಿದ್ದ ಈ ಆಹಾರ ಮೇಳವು ಸಾವಿರಾರು ಕನ್ನಡಿಗರ ಮೆಚ್ಚುಗೆಯನ್ನು ಪಡೆದು ಅತ್ಯಂತ ಯಶಸ್ವಿಯಾಗಿ ನೆರವೇರಿತು.

ಬೆಳಿಗ್ಗೆ ಹನ್ನೊಂದು ಗಂಟೆಗೆ ಆರಂಭಗೊಂಡ ಆಹಾರ ಮೇಳ ಸಂಜೆ ಸುಮಾರು ಐದು ಗಂಟೆಯವರೆಗೂ ಕಿಕ್ಕಿರಿದ ಜನರಿಂದ ಕೂಡಿತ್ತು. ಇಡೀ ದೆಹಲಿ ಕರ್ನಾಟಕ ಸಂಘದ ಆವರಣವು ರುಚಿ ರುಚಿಯಾದ ತಿಂಡಿ ತಿನಿಸುಗಳಿಂದ ಘಮಘಮಿಸುತಿತ್ತು ಸಸ್ಯಾಹಾರಿ ಆಹಾರ ಪ್ರಿಯರಿಗೆ ಸಂಘದ ಒಳಾಂಗಣದಲ್ಲಿ ಮತ್ತು ಮಾಂಸಾಹಾರಿ ಪ್ರಿಯರಿಗೆ ಸಂಘದ ಹೊರಾಂಗಣದಲ್ಲಿ ಆಹಾರ ಮಳಿಗೆಗಳನ್ನು ವ್ಯವಸ್ಥೆ ಮಾಡಲಾಗಿದ್ದು ಸಾವಿರಾರು ಜನರು ಬಂದು ಹೋಗುತ್ತಿದ್ದರೂ ಕೂಡ ಯಾವುದೇ ಕೊರತೆಯಾಗದಂತೆ ತುಂಬಾ ಅಚ್ಚುಕಟ್ಟಾಗಿ ಆಯೋಜಿಸಲಾಗಿತ್ತು. ಕೊರೊನಾ ಮಹಾಮಾರಿಯ ಸಂಕಟ ಕಡಿಮೆಯಾದ ನಂತರ ಸಂಘವು ಆಯೋಜಿಸಿದ್ದ ಮೊದಲ ಆಹಾರ ಮೇಳ ಇದಾಗಿದ್ದು ಕನ್ನಡಿಗರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದು ಎಲ್ಲರಿಗೂ ತುಂಬಾ ಸಂತೋಷ ತಂದಿದೆ.

ಈ ಆಹಾರ ಮೇಳವು ಯಶಸ್ವಿಯಾಗಲು ಮುಖ್ಯ ಕಾರಣ ಕರ್ತರು ಅಂದ್ರೆ 21 ಕನ್ನಡಿಗರ ಕುಟುಂಬಗಳು ತಮ್ಮ ಅಮೂಲ್ಯವಾದ

ಸಮಯವನ್ನು ನೀಡಿ, ಮುಂಚಿತವಾಗಿ ಎಲ್ಲ ತಯಾರಿಯೊಂದಿಗೆ ತಿಂಡಿ ತಿನಿಸುಗಳನ್ನು ಮಾಡಿಕೊಂಡು ಬಂದಿದ್ದು ಇಡೀ ದಿನ ಆ ಕುಟುಂಬಗಳು ಅವರವರ ಆಹಾರ ಮಳಿಗೆಗಳಲ್ಲಿ ನಿಂತಿದ್ದರೂ ಸಹ ಸ್ವಲ್ಪವೂ ಬೇಸರವಿಲ್ಲದೆ ನಗುನಗುತ್ತಲೇ ತಮ್ಮ ಮಳಿಗೆಗೆ ಬಂದ ಕನ್ನಡ ಹಾಗೂ ಕನ್ನಡೆತರರನ್ನು ಮಾತನಾಡಿಸಿ ಕಾರ್ಯಕ್ರಮದ ಜನಪ್ರಿಯತೆ ಹೆಚ್ಚುವಂತೆ ಮಾಡಿದ ಎಲ್ಲ 21 ಕುಟುಂಬಗಳೂ ಅಭಿನಂದನಾರ್ಹರು.

ರಾಷ್ಟ್ರ ರಾಜಧಾನಿಯಲ್ಲಿನ ಕನ್ನಡಿಗರ ಮಾತೃ ಸಂಸ್ಥೆಯಾಗಿರುವ ದೆಹಲಿ ಕರ್ನಾಟಕ ಸಂಘ ಆಹಾರ ಮೇಳ ಸಮಿತಿಗೆ ಮೊದಲ ಬಾರಿಗೆ ನನ್ನನ್ನು ಅಧ್ಯಕ್ಷನನ್ನಾಗಿ ನೇಮಿಸಿದರು. ಕಾರ್ಯಕ್ರಮದ ಆಯೋಜನೆಗೆ ಬೇಕಾದ ರೂಪುರೇಷೆಗಳನ್ನು ಸಿದ್ಧ ಪಡಿಸಲು ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ, ಕಾರ್ಯದರ್ಶಿ ಶ್ರೀ ಆರ್. ರೇಣುಕುಮಾರ್ ಅವರ ಸಲಹೆ ಮತ್ತು ಸೂಚನೆಗಳನ್ನು ಪಡೆದುಕೊಂಡು, ಆಹಾರ ಸಮಿತಿ ಸಂಚಾಲಕಿ ಶ್ರೀಮತಿ ಸುಮಿತ ಮುರಗೋಡ ಅವರೂ ಸೇರಿದಂತೆ ಇಡೀ ಕಾರ್ಯಕಾರಿ ಸಮಿತಿಯ ಸಹಕಾರದೊಂದಿಗೆ ಆಹಾರ ಮೇಳ ಕಾರ್ಯಕ್ರಮವನ್ನು ಎಲ್ಲರ ನಿರೀಕ್ಷೆಗೆ ಧಕ್ಕೆ ಬಾರದಂತೆ ನಡೆಸಿಕೊಟ್ಟಿದ್ದೇನೆ ಎಂದು ಹೇಳಲು ನನಗೆ ಬಹಳ ಖುಷಿಯಾಗುತ್ತಿದೆ.



ಆಹಾರ ಮೇಳ ಕಾರ್ಯಕ್ರಮದ ನಂತರ, ಜನಪ್ರಿಯ ಕನ್ನಡ ನಟ ಕಿಚ್ಚ ಸುದೀಪ್ ಅಭಿನಯದ ಹೊಚ್ಚ ಹೊಸ ಕನ್ನಡ ಚಲನಚಿತ್ರ 'ಕೋಟಿಗೊಬ್ಬ–3' ಸಂಘದ ಸಭಾಂಗಣದಲ್ಲಿ ಪ್ರದರ್ಶನಗೊಂಡಿತು. ಬಾರಿ ಸಂಖ್ಯೆಯಲ್ಲಿ ಸಿನಿಮಾ ಪ್ರಿಯರು ಹಾಗೂ ಎಲ್ಲ ಕನ್ನಡಿಗರು ಚಿತ್ರ ವೀಕ್ಷಿಸಿ ತಮ್ಮ ಮೆಚ್ಚುಗೆಯನ್ನು ಮತ್ತು ಹರ್ಷವನ್ನು ವ್ಯಕ್ತಪಡಿಸಿದರು. ◘

**ಶಿವಪ್ಪ ಎಂ**
**ಆಹಾರ ಮೇಳದ ಅಧ್ಯಕ್ಷರು**

## ಆಹಾರ ಮೇಳದಲ್ಲಿ ಪಾಲ್ಗೊಂಡಿದ್ದವರ ಅನಿಸಿಕೆಗಳು

'ದೆಹಲಿ ಕರ್ನಾಟಕ ಸಂಘದ ಆಯೋಜಿಸಿದ 'ಕೈರುಚಿ' ಆಹಾರಮೇಳ ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದು ದೆಹಲಿಯ ಸುತ್ತಮುತ್ತ ನೆಲೆಸಿರುವ ಕನ್ನಡಿಗರ ಕುಟುಂಬಗಳು ತಯಾರಿಸಿಕೊಂಡು ಬಂದ ನೂರಾರು ವಿಧದ ತಿಂಡಿ ತಿನಿಸುಗಳನ್ನು ಸವಿಯುವ ಅವಕಾಶ ಒದಗಿದ ಅತಿಸುಂದರವಾದ ಕಾರ್ಯಕ್ರಮ. ಸ್ಥಳೀಯ ಕನ್ನಡಿಗರು ಮತ್ತು ಕನ್ನಡೇತರರು ಬೆಳಗ್ಗೆ ಒಂಭತ್ತು ಗಂಟೆಯಿಂದ ಕಾಯುತ್ತಿದ್ದರು. ಅಂದರೆ ಮನೆಯಲ್ಲಿ ಮಾಡಿದ ಕೈರುಚಿ ಅಡುಗೆಗಳ, ಘಮ, ಘಮ ಪರಿಮಳ ದೆಹಲಿ ಸುತ್ತಮುತ್ತ ಯಾವರೀತಿ ಹರಡಿತ್ತು ಎಂದು ಎಲ್ಲರೂ ಊಹಿಸಿಕೊಳ್ಳಬಹುದು. ಕೈರುಚಿ ಆಹಾರ ಮೇಳ 11:30ಗಂಟೆಗೆ ಶುರುವಾಗಿ 03:30ರ ವೇಳೆಗೆ ಹೆಚ್ಚಿನ ಕೌಂಟರ್‌ಗಳು ಖಾಲಿ ಆಗಿದ್ದವು. ತಿಂಡಿ ತಿನಿಸುಗಳನ್ನು ಸವಿದ ಜನರು ಕೇಳುತ್ತಿದ್ದ ಪ್ರಶ್ನೆಗಳು ಈ ಅಡುಗೆಗಳನ್ನು ಹೇಗೆ ಮಾಡಿದ್ದೀರಿ, ಯಾವ ಯಾವ ಪದಾರ್ಥಗಳನ್ನು ಉಪಯೋಗಿಸಿದ್ದೀರಿ, ಅದ್ಭುತವಾದ ರುಚಿ ಇದೆ, ನಮಗೆ ಸ್ವಲ್ಪ ಇದನ್ನು ಹೇಗೆ ಮಾಡುವುದು ಎಂದು ಹೇಳಿಕೊಡಿ, ಆಹಾರ ಉಳಿದಿದ್ದರೆ ಪ್ಯಾಕ್ ಮಾಡಿಕೊಡಿ. ಇತ್ಯಾದಿ ಪ್ರತಿಯೊಂದು ಮಾತುಗಳು ಆಹಾರ ಮೇಳದಲ್ಲಿ ಭಾಗವಹಿಸಿದ ಪ್ರತಿಯೊಬ್ಬರಿಗೂ ಉತ್ಸಾಹವನ್ನು ತುಂಬುತ್ತಿತ್ತು. ಎನ್.ಸಿ.ಆರ್. ಸುತ್ತಮುತ್ತ ನೆಲೆಸಿರುವ ಅಕ್ಕತಂಗಿಯರು ಅತಿ ಕಡಿಮೆ ಬೆಲೆಯಲ್ಲಿ ತಿಂಡಿ ತಿನಿಸುಗಳನ್ನು ಒದಗಿಸಿದ್ದರು. ಇವರ ಶ್ರಮಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ. ಇವರಿಗೆ ಅಭಿನಂದನೆಗಳು. ಇಂತಹ ಕಾರ್ಯಕ್ರಮವನ್ನು ವಿನೂತನವಾಗಿ ಸಿದ್ದಪಡಿಸಿ ಸಮಯಕ್ಕೆ ಸರಿಯಾಗಿ ಕಾರ್ಯಕ್ರಮವನ್ನು ಮುಗಿಸಿದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿ ಮತ್ತು ಕಾರ್ಯಕಾರಿ ಸಮಿತಿಯ ಪ್ರತಿಯೊಬ್ಬ ಸದಸ್ಯರಿಗೆ ಹೃದಯ ಪೂರ್ವಕ ಧನ್ಯವಾದಗಳು'.

***ಚಂದ್ರಶೇಖರ ಜೋಳದರಾಶಿ***

ಕರ್ನಾಟಕ ಸಂಸ್ಕೃತಿಯ ಅಭಿವ್ಯಕ್ತಿಗೆ ಹಲವಾರು ರೂಪಗಳಿವೆ. ಅವುಗಳಲ್ಲಿ ಆಹಾರ, ಊಟೋಪಚಾರವೂ ಒಂದು. ಅಡುಗೆಯಂತಹ ಒಂದು ಅದ್ಭುತ ಕಲೆಯ ಅಭಿವ್ಯಕ್ತಿ ರೂಪವೇ ಆಹಾರಮೇಳ 'ಕೈ ರುಚಿ ಕಾರ್ಯಕ್ರಮ. ಪ್ರತಿಯೊಂದು ಜನಸಮುದಾಯದ ಜೀವನದೃಷ್ಟಿಯ ಮತ್ತು ಬೆಳೆದು ಬಂದ ಪರಿಸರಗಳು ಅವರ ಆಹಾರ ಪದ್ಧತಿ ಹಾಗೂ ಅಡುಗೆಯ ಶೈಲಿಗಳನ್ನು ರೂಪಿಸುತ್ತವೆ. ಕರ್ನಾಟಕದ ಸಂಸ್ಕೃತಿ ಎಲ್ಲೆಲ್ಲಿ ಒಳ್ಳೆಯ ಅಂಶಗಳು ಸಿಗುತ್ತವೆಯೋ ಅವುಗಳನ್ನು ಅಳವಡಿಸಿಕೊಂಡು ಮತ್ತು ಅರಗಿಸಿಕೊಂಡು ಪರಿಪುಷ್ಟವಾಗಿ ಬೆಳೆದಿವೆ. ಅಂತೆಯೇ ಕನ್ನಡಿಗರ ಆಹಾರ ಸಂಸ್ಕೃತಿಯೂ ವಿಪುಲವೂ ವೈವಿಧ್ಯಪೂರ್ಣವೂ ಆಗಿ ಬೆಳೆದಿದೆ. ಇಂತಹ ಶ್ರೀಮಂತ ಕನ್ನಡ ಸಂಸ್ಕೃತಿಯನ್ನು ರಾಷ್ಟ್ರ ರಾಜಧಾನಿಯಲ್ಲಿ ಪಸರಿಸುವ ಕೆಲಸವನ್ನು ಮಾಡುತ್ತಿರುವ ದೆಹಲಿ ಕರ್ನಾಟಕ ಸಂಘ ಆಯೋಜಿಸಿದ್ದ ಆಹಾರ ಮೇಳ ನಿಜಕ್ಕೂ ಅರ್ಥಪೂರ್ಣವಾಗಿತ್ತು. ನಾನು ಮತ್ತು ನನ್ನ ಗೆಳತಿಯರಾದ ಶ್ರೀಮತಿ ರಾಜಶ್ರೀ ಶಶಿಕುಮಾರ್ ಹಾಗೂ ಶ್ರೀಮತಿ ಆರಾಧನ ಕೆ.ಸಿ. ಅವರೊಡನೆ ಸೇರಿ ಮೊದಲ ಬಾರಿಗೆ ಕೈರುಚಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು. ನಮಗೆಲ್ಲ ಖುಷಿ ತಂದಿದೆ. ನಮ್ಮ ಸಂಸ್ಕೃತಿಯನ್ನು ಇದೇ ರೀತಿ ಹೊರ ನಾಡ ಕನ್ನಡಿಗರಿಗೆ ಮತ್ತು ಕನ್ನಡೇತರರಿಗೆ ಪರಿಚಯಿಸುವ ಕಾರ್ಯಕ್ರಮಗಳನ್ನು ದೆಹಲಿ ಕರ್ನಾಟಕ ಸಂಘ ಇನ್ನಷ್ಟು ಹೆಚ್ಚು ಹೆಚ್ಚು ಆಯೋಜಿಸಲೆಂದು ಆಶಿಸುತ್ತಾ, ಆಹಾರ ಮೇಳದಲ್ಲಿ ಭಾಗವಹಿಸಲು ಅವಕಾಶ ಒದಗಿಸಿದ ಸಂಘದ ಕಾರ್ಯಕಾರಿ ಸಮಿತಿಗೂ ಹಾಗೂ ಆಹಾರ ಸಮಿತಿಗೂ ಧನ್ಯವಾದಗಳನ್ನು ತಿಳಿಸುತ್ತೇನೆ.' "ಕನಕಪುರ" ಶೈಲಿಯ ಅಡುಗೆ ಎಲ್ಲರಿಂದ ಬಹಳ ಮೆಚ್ಚುಗೆ ಗಳಿಸಿದ್ದು ನನಗೆ ಬಹಳ ಸಂತಸ ತಂದಿದೆ.

***ಶ್ರೀಮತಿ ಹೇಮಾಶ್ರೀ ಚಂದ್ರಶೇಖರ್***

"ನಾನು ಬಹಳ ವರ್ಷಗಳಿಂದ ದೆಹಲಿ ಕರ್ನಾಟಕ ಸಂಘದ ಎಲ್ಲಾ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದೇನೆ. ಅದರಲ್ಲಿ ಆಹಾರ ಮೇಳವು ಒಂದು ದೊಡ್ಡ ಕಾರ್ಯಕ್ರಮವಾಗಿದೆ. ನಾನು ಪ್ರತಿ ವರ್ಷವೂ ಗೆಳತಿಯರ ಜೊತೆಗೂಡಿ ಭಾಗವಹಿಸುತ್ತಿದ್ದೇನೆ. ಸಸ್ಯಾಹಾರ ಮತ್ತು ಮಾಂಸಾಹಾರ ಮಳಿಗೆಗಳಿಗೆ ಪ್ರತ್ಯೇಕ ವ್ಯವಸ್ಥೆ ಮಾಡಿ, ಅಡುಗೆ, ತಿಂಡಿ ತಿನಿಸುಗಳನ್ನು ಬಿಸಿ ಮಾಡಲು ದೊಡ್ಡ ಪಾತ್ರೆಗಳನ್ನು ಸಂಘದಿಂದ ಒದಗಿಸಿದ್ದಲ್ಲದೆ, ಆವರಣವನ್ನ ಸ್ವಚ್ಛವಾಗಿ ಕಾಪಾಡಿಕೊಂಡು ಬಂದ ಜನರು ಬಹಳ ಖುಷಿಯಿಂದ ಕೈರುಚಿ ಆಹಾರ ಮೇಳದಲ್ಲಿ ಪಾಲ್ಗೊಂಡು ಆನಂದಿಸಿದರು. ಈ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಿದ ಎಲ್ಲ ಪಧಾದಿಕಾರಿಗಳಿಗೂ ಹಾಗೂ ಸಂಘದ ಸದಸ್ಯರು ಮತ್ತು ಸಿಬ್ಬಂದಿಗಳಿಗೂ ಹೃತ್ಪೂರ್ವಕ ಧನ್ಯವಾದಗಳು".

***ಶ್ರೀಮತಿ ಮೈಥಿಲಿ ಅಟ್ಟಾವರ್***

ಮಂಗಳೂರು ಕೊಂಕಣಿ ಶೈಲಿಯ ಆಹಾರ ಮಳಿಗೆಯನ್ನು ಹಾಕುವುದಕ್ಕೆ ನನಗೆ ನೀಡಿದ ಈ ಸದಾವಕಾಶಕ್ಕಾಗಿ ನನ್ನ ಧನ್ಯವಾದಗಳು. ವರ್ಷದಲ್ಲಿ ಎರಡು ಬಾರಿಯಾದರೂ ದೆಹಲಿ ಕರ್ನಾಟಕ ಸಂಘ ಇಂತಹ ಆಹಾರ ಮೇಳಗಳನ್ನು ಆಯೋಜಿಸಬೇಕೆಂದು ನನ್ನ ಅಭಿಪ್ರಾಯ.

***ಶ್ರೀಮತಿ ಲಕ್ಷ್ಮೀ ಕಿಣಿ***

ಎಲ್ಲರಿಗೂ ನಮಸ್ಕಾರಗಳು, ದೆಹಲಿ ಕರ್ನಾಟಕ ಸಂಘದಲ್ಲಿ ನಡೆದ ಆಹಾರ ಮೇಳ ಬಹಳ ಅದ್ಭುತವಾದ ಕಾರ್ಯಕ್ರಮವಾಗಿತ್ತು 11:00 ಗಂಟೆಗೆ ಪ್ರಾರಂಭಗೊಂಡ ಆಹಾರ ಮೇಳ ಸಂಜೆ 4:00 ಗಂಟೆಯವರೆಗೆ ಸಾವಿರಾರು ಜನರನ್ನು ಆಕರ್ಷಿಸಿತ್ತು. ಮೊದಲನೇ ಬಾರಿ ಈ ಆಹಾರಮೇಳ ಕಾರ್ಯಕ್ರಮದಲ್ಲಿ ನಾವು ತುಂಬ ಉತ್ಸಾಹದಿಂದ ಭಾಗವಹಿಸಿದೆವು. ಕರ್ನಾಟಕದ ವಿವಿಧ ಆಹಾರಗಳನ್ನು ನೋಡಿ ನಮ್ಮೂರು ನೆನಪಾಯಿತು. ಉತ್ತರ ಕರ್ನಾಟಕದ ಪ್ರಸಿದ್ಧ ಹಾಗೂ ಸ್ವಾದಿಷ್ಟ ಊಟವನ್ನು ಜನರು ಸಂತೋಷದಿಂದ ಸವಿದರು. ರುಚಿಕರ ಊಟವನ್ನು ಸವಿದ ಜನರು ನಮ್ಮನ್ನು ಪ್ರೋತ್ಸಾಹಿಸಿದರು. ನಮ್ಮ ಉತ್ತರ ಕರ್ನಾಟಕದ ಜನರನ್ನು ಭೇಟಿ ಮಾಡಿ ಇನ್ನೂ ಸಂತೋಷವಾಯಿತು. ದೆಹಲಿ ಕರ್ನಾಟಕ ಸಂಘದಲ್ಲಿ ಇಂತಹ ಕಾರ್ಯಕ್ರಮಗಳು ಮತ್ತೆ ಮತ್ತೆ ಜರುಗಲಿ ಹಾಗೂ ನಮಗೂ ಇಂತಹ ಅದ್ಭುತ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವಕಾಶ ನೀಡಿದ್ದಕ್ಕೆ ಧನ್ಯವಾದಗಳು.

***ಶ್ರೀಮತಿ ಪಾರ್ವತಿ ಉಭಾಳೆ***


























# ಕರೋನದಂತಹ ಸಂಕಟ ಎದುರಿಸಲು ನೆರವಾದ ವೈದ್ಯರಿಗೆ 'ವಿಶಿಷ್ಟ ಕನ್ನಡಿಗ' ಪ್ರಶಸ್ತಿ ನೀಡಿ ಗೌರವಿಸುತ್ತಿರುವ ದೆಹಲಿ ಕರ್ನಾಟಕ ಸಂಘ ನಿಜಕ್ಕೂ ಜನಸ್ನೇಹಿ ಸಂಘ - ಡಾ. ಎಲ್. ಹನುಮಂತಯ್ಯ

ದಿನಾಂಕ 28 ನೇ ನವೆಂಬರ್ 2021 ರಂದು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಏರ್ಪಡಿಸಿದ್ದ ಕರ್ನಾಟಕ ರಾಜ್ಯೋತ್ಸವ ಆಚರಣೆ ಪ್ರಯುಕ್ತ ನವೆಂಬರ್ ತಿಂಗಳಾದ್ಯಂತ ನಡೆದ ವೈವಿಧ್ಯಮಯ ಕಾರ್ಯಕ್ರಮಗಳ ಸಮಾರೋಪ ಸಮಾರಂಭದ ಮುಖ್ಯ ಅತಿಥಿಗಳಾಗಿದ್ದ ರಾಜ್ಯಸಭೆಯ ಸದಸ್ಯರಾದ ಡಾ. ಎಲ್. ಹನುಮಂತಯ್ಯ ಅವರು ಕರೋನದಂತಹ ಸಂಕಟ ಎದುರಿಸಲು ನೆರವಾದ ದೆಹಲಿಯಲ್ಲಿರುವ ಕನ್ನಡಿಗ ವೈದ್ಯರಿಗೆ 'ವಿಶಿಷ್ಟ ಕನ್ನಡಿಗ' ಪ್ರಶಸ್ತಿ ನೀಡಿ ಗೌರವಿಸುತ್ತಿರುವ ದೆಹಲಿ ಕರ್ನಾಟಕ ಸಂಘ ನಿಜಕ್ಕೂ ಜನಸ್ನೇಹಿ ಸಂಘವಾಗಿದೆ. ಬೇರೆ-ಬೇರೆ ರಾಜ್ಯ, ದೇಶಗಳಲ್ಲಿರುವ ಕರ್ನಾಟಕ ಸಂಘಗಳಿಗೆ ನಾನು ಭೇಟಿ ನೀಡಿದ್ದೇನೆ. ಇಲ್ಲಿನ ದೆಹಲಿಯ ಈ ಸಂಘವು ಅತ್ಯುತ್ತಮ ಸಭಾ ಭವನ, ವಸತಿ ವ್ಯವಸ್ಥೆಯು ಸೇರಿದಂತೆ ಹಲವು ಮಾನವೀಯ ಕಾರ್ಯಗಳಿಗೆ ಮಾದರಿಯಾಗಿದೆ ಮೆಚ್ಚುಗೆ ವ್ಯಕ್ತಪಡಿಸಿ ಈ ಉತ್ಕೃಷ್ಟ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗಬೇಕು ಎಂದರು. ವೈದ್ಯರು ಜನಪರ ಕಾಳಜಿಯಿಂದ ಕಾರ್ಯನಿರ್ವಹಿಸುತ್ತಿರುವುದು ಕೇಳಿ ಸಂತೋಷವಾಗಿದೆ. ಕರೋನ ಕಾಲಘಟ್ಟದಲ್ಲಿ ಇಂದು ವಿಶಿಷ್ಟ ಕನ್ನಡಿಗ ಪ್ರಶಸ್ತಿಗೆ ಭಾಜನರಾದ ವೈದ್ಯರ ಸೇವೆ ನಿಜವಾಗಿಯೂ ಅವಿಸ್ಮರಣೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಮಾರಂಭದ ಮತ್ತೊಬ್ಬ ಮುಖ್ಯ ಅತಿಥಿ ಕರ್ನಾಟಕದ ಮಾಜಿ ಸಚಿವ ಹಾಗೂ ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್‌ನ ನಿರ್ದೇಶಕರಾದ ಪಿ.ಜಿ.ಆರ್ ಸಿಂಧ್ಯಾ ಅವರು ದೆಹಲಿ ಕರ್ನಾಟಕ ಸಂಘದೊಂದಿಗೆ ಮೂರು ದಶಕಗಳ ಒಡನಾಟವಿದೆ. ಸಂಘದಲ್ಲಿ ಎಲ್ಲ ಮನಸ್ಸುಗಳು ಒಂದಾಗಿ ಕಾರ್ಯಕ್ರಮ ಮಾಡುತ್ತಿರುವುದು ಸಂತೋಷ ಎಂದು ಹೇಳಿ, ಹೊರನಾಡ ಕನ್ನಡಿಗರ ಸಾಂಸ್ಕೃತಿಕ ಪ್ರತಿಭೆ, ಇಲ್ಲಿನ ಮುದ್ದು ಮಕ್ಕಳ ಲವಲವಿಕೆಯ ಚಟುವಟಿಕೆಗಳನ್ನು ನೋಡಿ ಭಾವುಕರಾಗಿ ತಮ್ಮ ಖುಷಿಯನ್ನು ವ್ಯಕ್ತಪಡಿಸಿದರು. ಕೋವಿಡ್ ಬಿಕ್ಕಟ್ಟಿನ ಸಂದರ್ಭದಲ್ಲಿ ನಿಸ್ವಾರ್ಥವಾಗಿ ಸೇವೆ ಸಲ್ಲಿಸಿದ ಇಬ್ಬರು ವೈದ್ಯರಿಗೆ ಕರ್ನಾಟಕ ಸಂಘ 'ವಿಶಿಷ್ಟ ಕನ್ನಡಿಗ ಪ್ರಶಸ್ತಿ' ಪ್ರದಾನ ಮಾಡಿರುವುದನ್ನು ಶ್ಲಾಘಿಸಿ, ವೈದ್ಯರ ಸೇವಾ ಮನೋಭಾವಕ್ಕೆ



ಮತ್ತು ನಿಸ್ವಾರ್ಥ ಕಾರ್ಯಕ್ಕೆ ಮೆಚ್ಚುಗೆ ಹಾಗೂ ಅಭಿನಂದನೆಗಳನ್ನು ಹೇಳಿದರು. ಹೊರನಾಡ ಕನ್ನಡಿಗರ ನಾಡು-ನುಡಿಯ ಸೇವೆ ಸದಾ ಹೀಗೆ ಮುಂದುವರೆಯಲಿ ಎಂದು ಆಶಿಸಿದರು.

**ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪ್ರದಾನ:**

ಹೊರನಾಡ ಕನ್ನಡಿಗರು ಕನ್ನಡಪರ ಕೆಲಸ ಕಾರ್ಯಗಳಲ್ಲಿ ದುಡಿಯುತ್ತಿದ್ದು ಅಂತಹ ಕನ್ನಡಿಗರನ್ನು ಗುರುತಿಸಿ, ದೆಹಲಿ ಕರ್ನಾಟಕ ಸಂಘವು ಕಳೆದ ಮೂರು ದಶಕದಿಂದಲೂ 'ವಿಶಿಷ್ಟ ಕನ್ನಡಿಗ' ಪ್ರಶಸ್ತಿಯನ್ನು ಪ್ರದಾನ ಮಾಡುತ್ತಾ ಬರುತ್ತಿದೆ. ಈ ನಿಟ್ಟಿನಲ್ಲಿ ತಮ್ಮ ವೈದ್ಯ ವೃತ್ತಿಯೊಂದಿಗೆ ಕೊರೊನಾ ಸಂಕಷ್ಟ ಕಾಲದಲ್ಲಿ ಕನ್ನಡಿಗರಿಗೆ ತತ್ ಕ್ಷಣಕ್ಕೆ ಸ್ಪಂದಿಸಿ, ಆ ಕಷ್ಟಕಾಲದಲ್ಲಿ ತುರ್ತು ಚಿಕಿತ್ಸೆ ಅವಶ್ಯಕತೆ ಇದ್ದವರಿಗೆ ವೈದ್ಯಕೀಯ ಚಿಕಿತ್ಸೆ ಹಾಗೂ ಔಷಧೋಪಚಾರ ದೊರಕಿಸಿಕೊಡುವ ನಿಟ್ಟಿನಲ್ಲಿ ಕರೋನ ಯೋಧರಾಗಿ ಸೇವೆ ಸಲ್ಲಿಸಿದ ಈ ಮಹನೀಯರ ಕಾರ್ಯ ಪ್ರಶಂಸೆಗೆ ಪಾತ್ರವಾದುದ್ದಾಗಿದೆ.

ಇವರ ಈ ಅನುಪಮ ಹಾಗೂ ಶ್ಲಾಘನೀಯ ಸೇವೆಗೆ ದೆಹಲಿ ಕರ್ನಾಟಕ ಸಂಘವು 'ವಿಶಿಷ್ಟ ಕನ್ನಡಿಗ' ಪ್ರಶಸ್ತಿಗೆ ಇಬ್ಬರು ವೈದ್ಯರನ್ನು ಈ ಸಾಲಿಗೆ ಆಯ್ಕೆ ಮಾಡಿದೆ. ದೆಹಲಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ವೈದ್ಯ ಡಾ. ಗುರುರಾಜ ಸಂಗೊಂದಿಮಠ ಹಾಗೂ ಇನ್ನೊರ್ವ ವೈದ್ಯ ಡಾ. ಅಕ್ಷಯ್ ಎಂ.ಕೆ. ಅವರಿಗೆ 'ವಿಶಿಷ್ಟ ಕನ್ನಡಿಗ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಡಾ. ಗುರುರಾಜ ಸಂಗೊಂದಿ ಮಠ ಅವರು ಕನ್ನಡಿಗರ ಸೇವೆಯನ್ನು ಮಾಡಲು ಸದಾ ನಾನು ಸಿದ್ಧನಿದ್ದೇನೆ. ಅಗತ್ಯವಿರುವ ಕನ್ನಡಿಗರು ಯಾವುದೇ ಸಂದರ್ಭದಲ್ಲಿಯೂ ನನ್ನನ್ನು ಸಂಪರ್ಕಿಸಬಹುದು ಎಂದು ಹೇಳಿ ತಮ್ಮನ್ನು ಗೌರವಿಸಿದ್ದಕ್ಕಾಗಿ ದೆಹಲಿ ಕರ್ನಾಟಕ ಸಂಘ ಹಾಗೂ ಎಲ್ಲ ಪದಾಧಿಕಾರಿಗಳಿಗೆ ಧನ್ಯವಾದ ಹೇಳಿದರು. ಪ್ರಶಸ್ತಿ ಪುರಸ್ಕೃತರಾದ ಇನ್ನೊರ್ವ ವೈದ್ಯ ಡಾ. ಅಕ್ಷಯ್ ಎಂ.ಕೆ ಅವರು ಕೂಡ ವೈದ್ಯಕೀಯ ಚಿಕಿತ್ಸೆಗಾಗಿ ಕಷ್ಟದಲ್ಲಿರುವ ಎಲ್ಲ ಕನ್ನಡಿಗರಿಗೂ ತಾವು ತಮ್ಮ ಕೈಲಾದ ಎಲ್ಲ ನೆರವನ್ನು ಮಾಡುವುದಾಗಿ ಹೇಳಿದರು. ಅಲ್ಲದೆ ಕರೋನಾ ಸಮಸ್ಯೆ ಇನ್ನೂ ಪೂರ್ಣವಾಗಿ

ಪರಿಹಾರವಾಗಿಲ್ಲ. ಆದುದರಿಂದ ಎಲ್ಲರೂ ತಮ್ಮ ಆರೋಗ್ಯದ ಬಗ್ಗೆ ಹೆಚ್ಚು ಕಾಳಜಿ ವಹಿಸಬೇಕೆಂದು ಕಿವಿ ಮಾತನ್ನು ಹೇಳಿದರು.

**ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನೆ:**

ರಾಷ್ಟ್ರೀಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಸದಸ್ಯರಾಗಿರುವ ಹಾಗೂ ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರೂ ಆದ ಡಾ. ಸಿದ್ದರಾಮೇಶ್ವರ ಎಂ. ಕಂಟೀಕರ್ ಇವರಿಗೆ 'ಹೊರನಾಡ ಕನ್ನಡಿಗರ' ವಿಭಾಗದಲ್ಲಿ ಕರ್ನಾಟಕ ಸರ್ಕಾರದಿಂದ ಈ ಬಾರಿಯ ರಾಜ್ಯೋತ್ಸವ ಪ್ರಶಸ್ತಿ ಸಂದಿದೆ. ಕರ್ನಾಟಕ ರಾಜ್ಯೋತ್ಸವ ಪುರಸ್ಕಾರಕ್ಕೆ  ಭಾಜನರಾದ ಇವರಿಗೆ ದೆಹಲಿ ಕರ್ನಾಟಕ ಸಂಘ ಸನ್ಮಾನಿಸಿ ಸಮಸ್ತ ಕನ್ನಡಿಗರ ಪರವಾಗಿ ಅಭಿನಂದನೆ ಸಲ್ಲಿಸಿತು.

**ತಾಯ್ನಾಡಿಗೆ ಮರಳುತ್ತಿರುವ ಕನ್ನಡಿಗರಿಗೆ ಬೀಳ್ಕೊಡುಗೆ:**

ವೃತ್ತಿ ನಿಮಿತ್ತ ದೆಹಲಿಯಲ್ಲಿ ವಾಸವಿದ್ದು ಇದೀಗ ಸೇವೆಯಿಂದ ನಿವೃತ್ತಿ ಪಡೆದು ತಾಯ್ನಾಡಿಗೆ ಮರಳುತ್ತಿರುವ ಕನ್ನಡಿಗರಾದ ಶ್ರೀ ತ್ಯಾಗೇಶ ಮೂರ್ತಿ, ಶ್ರೀ ಬಿ.ಡಿ. ಶ್ರೀನಿವಾಸ, ಶ್ರೀ ಶಿವಾನಂದ ಸಿರ್ಸಿಕರ್ ಅವರಿಗೆ ದೆಹಲಿ ಕರ್ನಾಟಕ ಸಂಘ ಹಾಗೂ ದೆಹಲಿ ಕನ್ನಡಿಗರ ಪರವಾಗಿ ಸನ್ಮಾನಿಸಿ ಸಂಘದ ಸ್ಮರಣಿಕೆ ನೀಡಿ ಗೌರವಿಸಿ, ಅಭಿನಂದನೆ ಸಲ್ಲಿಸಿ ಆತ್ಮೀಯವಾಗಿ ಬೀಳ್ಕೊಡಲಾಯಿತು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಸಿ.ಎಂ. ನಾಗರಾಜ ಅವರು ಮಾತನಾಡಿ, ಕನ್ನಡ ಭಾಷೆ ಮತ್ತು ಸಂಸ್ಕೃತಿ ರಾಜ್ಯದ ಕಲೆಗಳನ್ನು ಉಳಿಸಿ ಬೆಳಸಿ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ತಾಯ್ನಾಡಿನಿಂದ ಬಹುದೂರದ ದೆಹಲಿಯಲ್ಲಿ ಕನ್ನಡಮ್ಮನ ಸೇವೆ ಮಾಡುವ ಕನ್ನಡ ಕಾಯಕದಲ್ಲಿ ಸಂಘ ತೊಡಗಿಸಿಕೊಂಡಿದೆ. ಮುಂಬರುವ ದಿನಗಳಲ್ಲಿ ಹಲವಾರು ಕನ್ನಡಪರ ಕಾರ್ಯಕ್ರಮಗಳ ಆಯೋಜನೆ ಮಾಡುವ ಯೋಚನೆ ನಮಗಿದ್ದು ಅದರ ಜೊತೆಗೆ ಮುಂಬರಲಿರುವ ಸಂಘದ ಅಮೃತ ಮಹೋತ್ಸವ ಕಾರ್ಯಕ್ರಮದ ಅದಕ್ಕಾಗಿ ಅಗತ್ಯ ರೂಪುರೇಷೆಗಳನ್ನು ಹಾಗೂ ಯೋಜನೆಗಳನ್ನೂ ಸಿದ್ಧಪಡಿಸಲಾಗುವುದು ಎಂದು ನುಡಿದರು. ಕೊರೊನಾ ಕಷ್ಟಕಾಲದಲ್ಲಿನ ಸಂದರ್ಭದಲ್ಲಿ ದೆಹಲಿ ಕನ್ನಡಿಗರಿಗೆ ವೈದ್ಯಕೀಯ ಸಹಾಯ ನೀಡಿರುವ ವಿಶಿಷ್ಟ ಕನ್ನಡಿಗ ಪ್ರಶಸ್ತಿಗೆ ಪುರಸ್ಕೃತರಾದವರು ಸೇರಿದಂತೆ, ದೆಹಲಿಯಲ್ಲಿರುವ ಭಾರತೀಯ ಆಡಳಿತ ಸೇವೆಯ ಹಿರಿಯ ಅಧಿಕಾರಿಗಳು, ವೈದ್ಯರು ಹಾಗೂ ಕನ್ನಡಿಗರು ಪರೋಕ್ಷವಾಗಿ ಹಾಗೂ ಅಪರೋಕ್ಷವಾಗಿ ಸಹಾಯ ಸಹಕಾರ ನೀಡಿದವರನ್ನು ಸ್ಮರಿಸಿದರು.

ಕಾರ್ಯಕ್ರಮಕ್ಕೆ ಆಗಮಿಸಿದ್ದ ಅತಿಥಿಗಳನ್ನು ಹಾಗೂ ಸಭಿಕರನ್ನು ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದ ಪ್ರಧಾನ ಕಾರ್ಯದರ್ಶಿ ಆರ್. ರೇಣುಕುಮಾರ ಅವರು, 66ನೇ ಕರ್ನಾಟಕ ರಾಜ್ಯೋತ್ಸವ ಆಚರಣೆ ಹಿನ್ನಲೆಯಲ್ಲಿ, ಕೈರುಚಿ 'ಆಹಾರ ಮೇಳ'ದ ಆಯೋಜನೆ. ಸದಭಿರುಚಿಯ ಕನ್ನಡ ಚಲನಚಿತ್ರ ಪ್ರದರ್ಶನ ಸಾಂಸ್ಕೃತಿಕ ಹಾಗೂ ಆಟೋಟ ಸ್ಪರ್ಧೆಗಳು ಇತ್ಯಾದಿಯಾಗಿ ಪ್ರತಿ ವಾರವೂ ಒಂದಿಲ್ಲೊಂದು ಕಾರ್ಯಕ್ರಮವನ್ನು  ಆಯೋಜಿಸಲಾಗಿದ್ದು ನವೆಂಬರ್ ತಿಂಗಳ ಪರ್ಯಂತ ಕನ್ನಡದ ಹಬ್ಬದ ವಾತಾವರಣ ಇತ್ತು. ದೆಹಲಿಯಲ್ಲಿನ ಹಲವು





ವೈದ್ಯರು ಕೊರೊನಾದಂತಹ ಕಷ್ಟಕಾಲದಲ್ಲಿ ಕನ್ನಡಿಗರ ನೆರವಿಗೆ ನಿಂತು ಸಹಾಯ ಮಾಡಿರುವುದನ್ನು ಸ್ಮರಿಸಿದರು.

**ಕಿಡ್ನಿ ನೀಡಿ ಜೀವದಾನ ಮಾಡಿದ ಕನ್ನಡತಿ ಮಾನವೀಯ ಅಂತಃಕರಣ ಸಾಕ್ಷಿಯಾದ ವೇದಿಕೆ:**

ದೆಹಲಿಯ ಕನ್ನಡ ಕುಟುಂಬದ ಹೆಣ್ಣು ಮಗಳೊಬ್ಬಳು ಕಿಡ್ನಿ ವೈಫಲ್ಯದಿಂದ ಬಳಲುತ್ತಿದ್ದನ್ನು ಕಂಡು ತಮ್ಮ ಕಿಡ್ನಿ ನೀಡಿ ಹೆಣ್ಣು ಮಗಳೊಬ್ಬಳ ಜೀವ ಉಳಿಸಿದ ಮಹಾದಾನಿ ಶ್ರೀಮತಿ ಭಾಗ್ಯ ರವಿ ಅವರು. ಈ ತಾಯಿ ತಮ್ಮ ಒಂದು ಕಿಡ್ನಿ ನೀಡಿ ಮಾನವೀಯ ಅಂತಃಕರಣ ಮೆರೆದಿದ್ದಾರೆ. ಅವರನ್ನು ದೆಹಲಿ ಕರ್ನಾಟಕ ಸಂಘದ ವೇದಿಕೆಯಲ್ಲಿ ಸನ್ಮಾನಿಸಲು ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ಆಹ್ವಾನಿಸಿದಾಗ, ಸಭಿಕರೆಲ್ಲ ಎದ್ದು ನಿಂತು ಕರತಾಡನ ಮಾಡಿ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು. ಶ್ರೀಮತಿ ಭಾಗ್ಯ ರವಿ ಅವರ ಈ ಮಾನವೀಯ ಕಾರ್ಯಕ್ಕೆ ದೆಹಲಿ ಕರ್ನಾಟಕ ಸಂಘದಿಂದ ಎಲ್ಲರ ಪರವಾಗಿ ಅಭಿನಂದಿಸಲಾಯಿತು.

ಸ್ಥಳೀಯ ಮಹಿಳಾ ಕಲಾವಿದರಿಂದ ನಾಡಗೀತೆಯೊಂದಿಗೆ ಆರಂಭವಾದ ಕಾರ್ಯಕ್ರಮದ ನಿರೂಪಣೆಯನ್ನು ಉಪಾಧ್ಯಕ್ಷೆ ಪೂಜಾ ಪಿ ರಾವ್ ಹಾಗೂ ಜಂಟಿ ಕಾರ್ಯದರ್ಶಿ ಸುಮಿತಾ ಮುರಗೋಡ ಅವರು ಯಶಸ್ವಿಯಾಗಿ ನಿರ್ವಹಣೆ ಮಾಡಿದರು. ಜಂಟಿ ಕಾರ್ಯದರ್ಶಿ ಬಿ. ನಾರಾಯಣ ಅವರು ವಂದನಾರ್ಪಣೆ ಸಲ್ಲಿಸಿದರು. ಈ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘದ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು, ಅಪಾರ ಸಂಖ್ಯೆಯಲ್ಲಿ ದೆಹಲಿ ಎನ್.ಸಿ.ಆರ್ ಕನ್ನಡಿಗರು ಪಾಲ್ಗೊಂಡಿದ್ದರು.

ಆಟೋಟ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳ ಬಹುಮಾನ ವಿತರಣೆ ಮತ್ತು ಆಹಾರ ಮೇಳದಲ್ಲಿ ಮಳಿಗೆಗಳನ್ನು ಹಾಕಿದ್ದ ಗೃಹಿಣಿಯರಿಗೆ ಬಹುಮಾನ ವಿತರಣೆಯನ್ನು ಕ್ರೀಡಾ ಸಮಿತಿ ಅಧ್ಯಕ್ಷರಾದ ಡಾ. ಎಂ.ಎಸ್. ಶಶಿಕುಮಾರ್, ಸಂಚಾಲಕಿ ಶ್ರೀಮತಿ ಮಾಲಿನಿ ಪ್ರಹ್ಲಾದ್, ಸದಸ್ಯರುಗಳಾದ ಶ್ರೀ ನವೀನ್ ಕುಮಾರ್ ವಿ., ಶ್ರೀ ಸಂತೋಷ ಜೆ ಹಾಗೂ ಆಹಾರ ಮೇಳ ಸಮಿತಿಯ ಅಧ್ಯಕ್ಷರಾದ ಶ್ರೀ ಶಿವಪ್ಪ ಎಂ. ಮತ್ತು ಸಂಚಾಲಕಿ ಶ್ರೀಮತಿ ಸುಮಿತಾ ಮುರಗೋಡ ಅವರು ನೆರವೇರಿಸಿಕೊಟ್ಟರು.

ದೆಹಲಿ ಹಾಗೂ ರಾಷ್ಟ್ರೀಯ ರಾಜಧಾನಿ ಪ್ರದೇಶದ ಸ್ಥಳೀಯ ಕನ್ನಡ ಕಲಾವಿದರು ನಡೆಸಿಕೊಟ್ಟ ಸಾಂಸ್ಕೃತಿಕ ಕಾರ್ಯಕ್ರಮ ಅದ್ಭುತವಾಗಿ ನಡೆಯಿತು. ಹತ್ತಕ್ಕೂ ಹೆಚ್ಚು ತಂಡಗಳ ಸ್ಥಳೀಯ ಕಲಾವಿದರು ತಮ್ಮ ಪ್ರತಿಭೆ ಮೆರೆದರು. ಬಹಳ ಅರ್ಥಪೂರ್ಣ ಅಚ್ಚುಕಟ್ಟಾದ ನೃತ್ಯ ಸಂಯೋಜನೆ, ಸಂಗೀತ, ವೈವಿಧ್ಯಮಯ ರಂಗ ಪರಿಕರಗಳನ್ನು ಬಳಸಿಕೊಂಡು ವೃತ್ತಿಪರರಂತೆಯೇ ನಮ್ಮ ಹೊರನಾಡ ಕನ್ನಡಿಗರೂ ಕೂಡ ಅತ್ಯುತ್ತಮ  ಕಾರ್ಯಕ್ರಮ ನೀಡಿದರು. ಕನ್ನಡದ ಕವಿಗಳ ರಚನೆಗೆ ಧ್ವನಿಯಾದರು. ಅತ್ಯಂತ ಲಯಬದ್ಧವಾದ ಹಾಡುಗಳು, ನೃತ್ಯಗಳು ಪ್ರೇಕ್ಷಕರ ಮನಸೂರೆ ಗೊಂಡವು. ಇಡೀ ಕರ್ನಾಟಕ ರಾಜ್ಯೋತ್ಸವ ಸಮಾರಂಭವನ್ನು ಬಹು ವಿಜೃಂಭಣೆಯಿಂದ ಆಚರಿಸಲಾಯಿತು.

ಪ್ರಿಯ ಅಭಿಮತ ಓದುಗರೆ,

ದೆಹಲಿ ಕನ್ನಡಿಗರಾದ **ಡಾ. ಸಿದ್ಧರಾಮೇಶ್ವರ ಎಂ. ಕಂಟೀಕರ್** ಅವರು 2021 ನೇ ಸಾಲಿನ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿದ್ದಾರೆ. ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರು ಹಾಗೂ ಸಂಘದ ಎಲ್ಲ ಕಾರ್ಯಕ್ರಮಗಳಲ್ಲಿ ಸದಾ ಭಾಗವಹಿಸುವುದರ ಜೊತೆಗೆ ದೆಹಲಿಯ ಇತರೆ ಸಂಘ ಸಂಸ್ಥೆಗಳ ಜೊತೆಗೂ ಆತ್ಮೀಯ ಒಡನಾಟ ಹೊಂದಿರುವ ಕ್ರಿಯಾಶೀಲ ಹೊರನಾಡ ಕನ್ನಡಿಗರಾಗಿದ್ದಾರೆ. ಮೂಲತಃ ಕರ್ನಾಟಕ ಮತ್ತು ಮಹಾರಾಷ್ಟ್ರದ ಗಡಿಯಲ್ಲಿರುವ ಅತ್ಯಧಿಕ ಸಂಖ್ಯೆಯಲ್ಲಿ ಕನ್ನಡವನ್ನು ಮಾತನಾಡುವ ಸೋಲಾಪುರ್ ನಲ್ಲಿ ಶ್ರೀ ಮಲ್ಲಕಯ್ಯ ಮತ್ತು ಶ್ರೀಮತಿ ಪಾರ್ವತಿರವರ ಮಗನಾಗಿ ಜನಿಸಿ ವೈದ್ಯಕೀಯ ಶಿಕ್ಷಣ ಮುಗಿಸಿದ ನಂತರ ಶಿವಮೊಗ್ಗದಲ್ಲಿ ನೆಲೆಸಿದ ಇವರು ರೋಗ ಶಾಸ್ತ್ರಜ್ಞನಾಗಿ, ನಂತರ ಪ್ರಾಧ್ಯಾಪಕನಾಗಿ ಸೇವೆ ಸಲ್ಲಿಸಿ ಮುಂದೆ ಕಾನೂನು ಪದವಿ ಪಡೆದು ಜಿಲ್ಲಾ ಗ್ರಾಹಕ ನ್ಯಾಯಾಲಯದ ಸದಸ್ಯಸ್ಥಾನದಿಂದ ಈಗ ರಾಷ್ಟ್ರೀಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಸದಸ್ಯ ಹುದ್ದೆಯಂತಹ ಎತ್ತರದ ಸ್ಥಾನಕ್ಕೆ ಏರುವವರೆಗೆ ಸಮಾಜದ ನೂರಾರು ಜನರಿಗೆ ವೈದ್ಯಕೀಯ ಸಲಹೆ, ಗ್ರಾಹಕರ ವ್ಯಾಜ್ಯಗಳಗೆ ಪರಿಹಾರ ಮಾರ್ಗದರ್ಶನ ಇತ್ಯಾದಿ ಅನೇಕ ಬಗೆಯಲ್ಲಿ ಜನರ ನೋವು ನಲಿವಿಗೆ ಸ್ಪಂದಿಸಿದ್ದಾರೆ. ಇಂತಹ ಅಪರೂಪದ ಸಾಧಕ ಡಾ. ಕಂಟೀಕರ್ ಅವರು ರಾಜ್ಯೋತ್ಸವ ಪುರಸ್ಕಾರವನ್ನು ಸ್ವೀಕರಿಸಿರುವ ಈ ಸಂದರ್ಭದಲ್ಲಿ **ದೆಹಲಿ ಕರ್ನಾಟಕ ಸಂಘದ ಮುಖವಾಣಿ ಅಭಿಮತ ಸಂಪಾದಕ ಮಂಡಳಿ** ಅಭಿನಂದನೆಗಳನ್ನು ಸಲ್ಲಿಸಿ ಅವರನ್ನು ಸಂದರ್ಶನ ಮಾಡಿದ ವಿವರವಾದ ವರದಿ ಇಲ್ಲಿದೆ.

–ಸಂಪಾದಕರು

**ಅಭಿಮತ :** ನಮಸ್ಕಾರ ಸರ್. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾಗಿರುವ ನಿಮಗೆ ಹೃತ್ಪೂರ್ವಕ ಅಭಿನಂದನೆಗಳು.

**ಡಾ. ಸಿದ್ಧರಾಮೇಶ್ವರ ಎಂ. ಕಂಟೀಕರ್:** ಧನ್ಯವಾದಗಳು.

**ಅಭಿಮತ :** ಸರ್, ರಾಜ್ಯೋತ್ಸವ ಪ್ರಶಸ್ತಿಯಂತಹ ಉನ್ನತ ಪುರಸ್ಕಾರ ದೊರೆತಿರುವುದನ್ನು ನೀವು ಯಾವ ರೀತಿ ಸಂಭ್ರಮಿಸಿದಿರಿ?

**ಡಾ. ಕಂಟೀಕರ್ :** ಮೊದಲನೆಯದಾಗಿ ಇದು ನನಗೆ ಮಾತ್ರವಲ್ಲ. ದೆಹಲಿ ಕನ್ನಡಿಗರಿಗೆಲ್ಲರ ಪರವಾಗಿ ನನಗೆ ಸಂದಿರುವ ಗೌರವ ಅಂತ ಭಾವಿಸುತ್ತೇನೆ.

**ಅಭಿಮತ :** ಸರ್ ನೀವು ಸೋಲಾಪುರದಲ್ಲಿ ಹುಟ್ಟಿ ಶಿವಮೊಗ್ಗಕ್ಕೆ ಬಂದು ನೆಲೆ ನಿಂತಿರಿ. ಇದರ ಹಿನ್ನೆಲೆ ಏನು?

**ಡಾ. ಕಂಟೀಕರ್ :** ನಾನು ಸೋಲಾಪುರದ ಡಾ. ವಿ.ಎಂ. ಕಾಲೇಜಿನಲ್ಲಿ (ಸರ್ಕಾರಿ) ವೈದ್ಯಕೀಯ ಪದವಿಗೆ ಸೇರಿ ಅಲ್ಲಿಯೇ ಎಂ.ಬಿ.ಬಿ.ಎಸ್. ಮತ್ತು ಎಂ.ಡಿ. ಅಧ್ಯಯನವನ್ನು ಪ್ಯಾಥೋಲಜಿ ವಿಭಾಗದಲ್ಲಿ ಮುಗಿಸಿದ ನಂತರ ನನ್ನ ಪೂಜ್ಯ ಗುರುಗಳಾದ ಸ್ವರ್ಗೀಯ ಡಾ. ಎಸ್.ಜೆ. ನಾಗಾಲೋಟ ಮಠ್ ಅವರ ಮಾರ್ಗದರ್ಶನದಂತೆ ಶಿವಮೊಗ್ಗದ ಪ್ರತಿಷ್ಠಿತ ನಂಜಪ್ಪ ಆಸ್ಪತ್ರೆಯಲ್ಲಿ ಪೆಥಾಲಜಿಸ್ಟ್ ಆಗಿ ವೃತ್ತಿ ಜೀವನ ಆರಂಭ ಮಾಡಿದೆ. 1987 ರಿಂದ 1992 ರವರೆಗೂ ಅದೇ ವೃತ್ತಿಯಲ್ಲಿ ಮುಂದುವರಿದೆ.

ಆ ಸಂದರ್ಭದಲ್ಲಿ ಶಿವಮೊಗ್ಗ ಮತ್ತು ಸುತ್ತ ಮುತ್ತಲಿನ ಪ್ರದೇಶಗಳ ಜನರಿಗೆ ಅತ್ಯಾಧುನಿಕ ತಂತ್ರಜ್ಞಾನ ಸೌಲಭ್ಯವುಳ್ಳ ಪ್ರಯೋಗಾಲಯ ಅಗತ್ಯವಿದೆ ಎಂದು ಅರಿತು "ಕಂಟೀಕರ್ ಲ್ಯಾಬೊರೇಟರಿ" ಸ್ಥಾಪಿಸಿ ಜನರಿಗೆ ಉತ್ತಮ ಗುಣ ಮಟ್ಟದ ಹಾಗೂ ಉಚಿತವಾದ ಸೇವೆಗಳನ್ನುನೀಡುತ್ತಾ ಬಂದೆ. ಮುಖ್ಯವಾಗಿ ಮಾನಸಿಕ ಅಸ್ವಸ್ಥರಿಗೆ, ಅಂಗವಿಕಲರಿಗೆ, ಅಂಧರಿಗೆ ಮತ್ತು ವೃದ್ಧಾಶ್ರಮದಲ್ಲಿರುವವರಿಗೆ ಸೇವೆ ಸಲ್ಲಿಸುತ್ತಾ ಬಂದೆ. ಇದಲ್ಲದೆ ಶಿವಮೊಗ್ಗದ ಪ್ರಥಮ ಸರ್ಕಾರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಪ್ಯಾಥಾಲಜಿ ವಿಭಾಗವನ್ನು ಪ್ರಾರಂಭಿಸುವಲ್ಲಿ ನಾನು ನೆರವಾಗಿದ್ದೇನೆ. ಇದರ ಜೊತೆ ಜೊತೆಯಲ್ಲಿಯೇ ನಾನು ಕಾನೂನು ಪದವಿಯನ್ನುವ್ಯಾಸಂಗ ಮಾಡಿ ಅದರಲ್ಲಿಯೇ ಪಿ.ಹೆಚ್.ಡಿ. ಅಧ್ಯಯನವನ್ನೂ ಕೈಗೊಂಡು ಅದನ್ನೂ ಮುಗಿಸಿದೆ.

**ಅಭಿಮತ:** ಸರ್, ವೈದ್ಯಕೀಯ ವೃತ್ತಿಯಲ್ಲಿದ್ದ ನೀವು ಕಾನೂನು ಪದವಿ ಕಡೆಗೆ ಒಲವು ತೋರಿದ್ದಕ್ಕೆ ಏನು ಕಾರಣ ?

**ಡಾ. ಕಂಟೀಕರ್ :** ನಾನು ಪ್ಯಾಥೋಲಾಜಿಸ್ಟ್ ಆಗಿ ಕೆಲಸ ಮಾಡುವಾಗ ಮತ್ತು ನನ್ನದೇ ಲ್ಯಾಬೋರೇಟರಿ ಸ್ಥಾಪಿಸಿದಾಗ ನನಗೆ ಅನೇಕ ರೀತಿಯ ಅನುಭವಗಳು ಆದವು. ಮುಖ್ಯವಾಗಿ ನಮಗೆ ಒಂದು ಸಂಸ್ಥೆ ನಡೆಸುವಾಗ ಕಾನೂನಿನ ನಿಯಮಗಳು ಮತ್ತು ನಿಬಂಧನೆಗಳು ತಿಳಿದಿಲ್ಲದಿದ್ದರೆ ನಮಗೆ ಎದುರಾಗುವ ಸಮಸ್ಯೆಗಳಿಂದ ಬಿಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಹಾಗಾಗಿ ವೈದ್ಯಕೀಯ ವೃತ್ತಿಯ ತತ್ವಗಳು, ನಿರ್ಲಕ್ಷತೆ, ಜೀವವಿಮೆ ಮತ್ತಿತರ ಗ್ರಾಹಕ ವ್ಯಾಜ್ಯಗಳ ಮೂಲಭೂತ ಜ್ಞಾನ ಹೊಂದಿರುವುದು ಸೂಕ್ತ ಅದರಿಂದ ನಮಗೂ ಮತ್ತು ನಮ್ಮ ಜೊತೆ ಕೆಲಸ ಮಾಡುವವರಿಗೂ ಸಹಕಾರಿಯಾಗುತ್ತದೆ ಎನ್ನುವ ಕಾರಣಕ್ಕೆ ನಾನು ಕಾನೂನು ಅಧ್ಯಯನ ಮಾಡಿದೆ.



**ಅಭಿಮತ :** ಸರ್ ಈ ರಾಷ್ಟ್ರೀಯ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗಕ್ಕೆ ನೀವು ಬರಲು ಕಾರಣವಾದ ಹಿನ್ನೆಲೆಯೇನು ?

**ಡಾ. ಕಂಟೀಕರ್ :** ನಾನು 2002 ರಲ್ಲಿ ಕರ್ನಾಟಕ ಸರ್ಕಾರದಿಂದ ಶಿವಮೊಗ್ಗ ಜಿಲ್ಲಾ ಗ್ರಾಹಕರ ವ್ಯಾಜ್ಯ ಮತ್ತು ಪರಿಹಾರ ವೇದಿಕೆಯ ಸದಸ್ಯನಾಗಿ ನೇಮಕಗೊಂಡೆ. ಆಗ ವೈದ್ಯರ ನಿರ್ಲಕ್ಷತೆ, ಜೀವವಿಮೆ ಮತ್ತಿತರ ಅನೇಕ ರೀತಿಯ ಗ್ರಾಹಕ ವ್ಯಾಜ್ಯಗಳ ಪರಿಹಾರ ಪ್ರಕರಣದಲ್ಲಿ ಅತ್ಯುತ್ತಮವಾದ ತೀರ್ಪುಗಳನ್ನು ನೀಡಿದ್ದೇನೆ. ಅಲ್ಲದೆ ನಾನು ಶಿವಮೊಗ್ಗದಲ್ಲಿನ ಸಿ.ಬಿ.ಆರ್. ರಾಷ್ಟ್ರೀಯ ಕಾನೂನು ಕಾಲೇಜಿನಲ್ಲಿ ವೈದ್ಯ ಶಾಸ್ತ್ರ ಮತ್ತು ಕಾನೂನು ವಿಭಾಗದ ಗೌರವ ಪ್ರಾಧ್ಯಾಪಕನಾಗಿ ಸೇವೆ ಸಲ್ಲಿಸಿದ್ದೇನೆ.

ಹೀಗೆ ವೈದ್ಯಕೀಯ ಮತ್ತು ಕಾನೂನು ಅಧ್ಯಯನ ವಿಭಾಗಗಳಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿ ಮತ್ತು ದೈನಂದಿನ ಕಾರ್ಯಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಅನುಭವಗಳ ಆಧಾರದ ಮೇಲೆ ನನ್ನನ್ನು ಭಾರತದ ಸರ್ವೋಚ್ಚ ನ್ಯಾಯಾಲಯದ ನೇಮಕಾತಿ ಸಮಿತಿ ರಾಷ್ಟ್ರೀಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗಕ್ಕೆ ಸದಸ್ಯನಾಗಿ 2013ರಲ್ಲಿ ನೇಮಿಸಿತು. ಅಂದಿನಿಂದ ನಾನು ದೆಹಲಿಯಲ್ಲಿ ಸೇವೆ ಸಲ್ಲಿಸುತ್ತಾ ಇಲ್ಲಿಯೇ ವಾಸವಾಗಿದ್ದೇನೆ.

**ಅಭಿಮತ :** ಸರ್, ರಾಷ್ಟ್ರೀಯ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗ ಗ್ರಾಹಕರ ಹಕ್ಕುಗಳ ಬಗ್ಗೆ ಅರಿವು ಮೂಡಿಸಲು ಯಾವ ರೀತಿ ಕೆಲಸ ಮಾಡುತ್ತಿದೆ?

**ಡಾ. ಕಂಟೀಕರ್ :** ನಮ್ಮ ಆಯೋಗದಿಂದ ದೇಶದ ಎಲ್ಲ ರಾಜ್ಯಗಳೂ ಮತ್ತು ನಗರ ಪಟ್ಟಣಗಳಲ್ಲೂ ಗ್ರಾಹಕರ ಹಕ್ಕುಗಳು ಮತ್ತು ಗ್ರಾಹಕರ ವ್ಯಾಜ್ಯಗಳ ಬಗ್ಗೆ ಜಾಗೃತಿ ಮೂಡಿಸಲು ಅನೇಕ ಕಾರ್ಯಕ್ರಮಗಳನ್ನು ಆಯೋಜಿಸುತ್ತೇವೆ. ಮುಖ್ಯವಾಗಿ ವಿಚಾರ ಗೋಷ್ಠಿ, ಸಂವಾದಗಳು, ಉಪನ್ಯಾಸ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತೇವೆ. ಇದರ ಜೊತೆಗೆ ದೂರದರ್ಶನ ವಾಹಿನಿಯ ಮೂಲಕ ಗ್ರಾಹಕರ ಹಕ್ಕುಗಳ ರಕ್ಷಣೆ ಮತ್ತು ವ್ಯಾಜ್ಯಗಳ ಬಗ್ಗೆ ಜಾಗೃತಿ ಮೂಡಿಸುವ ಕೆಲಸವನ್ನು ನಿರಂತರವಾಗಿ ಮಾಡಲಾಗುತ್ತಿದೆ.

**ಅಭಿಮತ:** ಸರ್ ನೀವು ವೈದ್ಯಕೀಯ ಮತ್ತು ಕಾನೂನು ಕ್ಷೇತ್ರಗಳನ್ನು ಹೊರತುಪಡಿಸಿ ಸಾಮಾಜಿಕವಾಗಿ ಜನರಿಗೆ ಅರಿವು ಮೂಡಿಸುವ ಬೇರೆ ಯಾವ ರೀತಿಯ ಜವಾಬ್ದಾರಿಗಳನ್ನು ಕೈಗೊಂಡಿದ್ದೀರಿ ?

**ಡಾ. ಕಂಟೀಕರ್ :** ನಾನು ಭಾರತೀಯ ಕುಟುಂಬ ಯೋಜನಾ ಸಂಘ (FPAI) ದಲ್ಲಿ ಸಕ್ರಿಯ ಸದಸ್ಯನಾಗಿ, ಅದರ ಉಪಾಧ್ಯಕ್ಷನಾಗಿ ನಿರಂತರವಾಗಿ ಆ ಸಂಸ್ಥೆಗೆ ಸೇವೆ ಸಲ್ಲಿಸುತ್ತಾ ಬಂದಿದ್ದೇನೆ. ಅಲ್ಲದೆ, ಪರಿಸರ ಕಾಳಜಿಯ ದೃಷ್ಟಿಯಿಂದ ಸ್ವಚ್ಛ ಪರಿಸರಕ್ಕಾಗಿ "ಶುಶ್ರುತ ಬಯೋ ಮೆಡಿಕಲ್ ವೇಸ್ಟ್

ಮ್ಯಾನೇಜ್ಮೆಂಟ್ ಸೊಸೈಟಿ ಪ್ರಾರಂಭಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದೇನೆ. ಈ ಸಂಸ್ಥೆಯ ಮೂಲಕ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳ ವೈದ್ಯಕೀಯ ತ್ಯಾಜ್ಯಗಳ ವಿಲೇವಾರಿಯನ್ನು ಶಿವಮೊಗ್ಗ, ಭದ್ರಾವತಿ, ತೀರ್ಥಹಳ್ಳಿ ಮತ್ತು ಸಾಗರ ಮೊದಲಾದ ನಗರಗಳಲ್ಲಿ ಅತ್ಯಂತ ಯಶಸ್ವಿಯಾಗಿ ನಿರ್ವಹಿಸುತ್ತಾ ಬರುತ್ತಿದೆ.

ಹಾಗೆಯೇ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ವತಿಯಿಂದ ಶಿವಮೊಗ್ಗ ನಗರದಲ್ಲಿ ಎರಡನೇ ರಕ್ತ ನಿಧಿ "ಸಂಜೀವಿನಿ ರೆಡ್ ಕ್ರಾಸ್ ರಕ್ತ ನಿಧಿ"ಯನ್ನು ಸ್ಥಾಪಿಸುವಲ್ಲಿ ನಾನು ಸಂಪೂರ್ಣವಾಗಿ ನೆರವಾಗಿದ್ದೇನೆ. ಇದಲ್ಲದೆ ರೋಟರಿ ಸದಸ್ಯನಾದ ನಾನು ಪ್ರಥಮ ಬಾರಿಗೆ "ರೋಟರಿ ಮಿಡ್ ಟೌನ್ ರಕ್ತ ನಿಧಿ"ಯನ್ನು ಶಿವಮೊಗ್ಗದಲ್ಲಿ ನನ್ನ ನೇತೃತ್ವದಲ್ಲಿ ರೋಟರಿ ಕ್ಲಬ್ ವತಿಯಿಂದ ಸ್ಥಾಪಿಸಿದ್ದೇನೆ.

ಇದರಿಂದ ಶಿವಮೊಗ್ಗ ಮತ್ತು ಅಕ್ಕ ಪಕ್ಕದ ಜಿಲ್ಲೆಗಳ ಜನರು ನಿರಂತರವಾಗಿ ಪ್ರಯೋಜನವನ್ನು ಪಡೆಯಲು ಅನುಕೂಲವಾಗುತ್ತಿದೆ.

**ಅಭಿಮತ:** ಸರ್ ನೀವು ಇದುವರೆಗೆ ಪ್ರಮುಖವಾದ ಯಾವುದಾದರೂ ಪ್ರಬಂಧ ಮತ್ತು ಪುಸ್ತಕಗಳನ್ನು ಬರೆದು ಪ್ರಕಟಿಸಿದ್ದೀರಾ ?

**ಡಾ. ಕಂಟೀಕರ್ :** ಹೌದು. ನಾನು ಸಂಶೋಧನೆ ಮಾಡಿ ಅನೇಕ ಪ್ರಬಂಧಗಳನ್ನು ಬರೆದಿದ್ದೇನೆ. ಅವುಗಳನ್ನು ರಾಷ್ಟ್ರ ಮತ್ತು ಅಂತರ ರಾಷ್ಟ್ರೀಯ ಮಟ್ಟದ ವೈದ್ಯಕೀಯ ಮತ್ತು ಕಾನೂನು ಸಮ್ಮೇಳನಗಳಲ್ಲಿ, ವಿಚಾರ ಗೋಷ್ಠಿಗಳಲ್ಲಿ ಮಂಡಿಸಿದ್ದೇನೆ. ಗ್ರಾಹಕ ಜಾಗೃತಿ ಮತ್ತು ಮಾಹಿತಿ ಹಕ್ಕು ಕಾಯ್ದೆ ಬಗ್ಗೆ ಜಾಗೃತಿ ಮೂಡಿಸುವ ಗೋಷ್ಠಿಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದೇನೆ. ವೈದ್ಯಕೀಯ ಮತ್ತು ಕಾನೂನು ವಿಚಾರಗಳ ಕುರಿತು ಆಕಾಶವಾಣಿಯಲ್ಲಿ ಉಪನ್ಯಾಸ ನೀಡಿದ್ದೇನೆ. ಪತ್ರಿಕೆಗಳಲ್ಲೂ ಅನೇಕ ಲೇಖನಗಳನ್ನು ಬರೆದು ಪ್ರಕಟಿಸಿದ್ದೇನೆ.

**ಅಭಿಮತ:** ಸರ್ ನೀವು ದೆಹಲಿ ಕನ್ನಡಿಗರ ಸಂಪರ್ಕಕ್ಕೆ ಹೇಗೆ ಬಂದಿರಿ? ದೆಹಲಿ ಕರ್ನಾಟಕ ಸಂಘದ ಬಗ್ಗೆ ನಿಮ್ಮ ಅನಿಸಿಕೆ ತಿಳಿಸಿ.

**ಡಾ. ಕಂಟೀಕರ್ :** ನಾನು 2013 ರಲ್ಲಿ ದೆಹಲಿಗೆ ಬಂದೆ. ಆಗ ಕರ್ನಾಟಕ ಭವನ –3 ಭೀಮಾ ದಲ್ಲಿ ಉಳಿದುಕೊಂಡಿದ್ದೆ. ಅಲ್ಲಿನ ಕನ್ನಡದ ಸಿಬ್ಬಂದಿಗಳ ಜೊತೆ ಮಾತನಾಡುತ್ತಾ ದೆಹಲಿ ಕರ್ನಾಟಕ ಸಂಘದ ಬಗ್ಗೆ ತಿಳಿದುಕೊಂಡೆ. ಸಂಘಕ್ಕೆ ಬಂದು ಆಗ ಪ್ರಧಾನ ಕಾರ್ಯದರ್ಶಿಯಾಗಿದ್ದ ಸಿ.ಎಂ. ನಾಗರಾಜ ಅವರು ಮತ್ತು ಅನೇಕರ ಪರಿಚಯವಾದ ನಂತರ ಸಂಘದ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾ ಬರುತ್ತಿದ್ದೇನೆ. ಮುಂದಿನ ದಿನಗಳಲ್ಲಿ ನನ್ನ ಸರ್ಕಾರಿ ನಿವಾಸ ಮೋತಿಬಾಗ್‌ನಲ್ಲಿ ಇದ್ದುದರಿಂದ ಸಂಘಕ್ಕೆ ಹೆಚ್ಚು ಹೆಚ್ಚು ಬರುತ್ತಿದ್ದೆ. ಆಗ ಚಂದ್ರಶೇಖರ್, ಶಿವಪ್ಪ, ಮೊದಲಾದ ಅನೇಕರ ಪರಿಚಯ ಆಯಿತು. ದೆಹಲಿಯ ಇತರ ಸಂಘ ಸಂಸ್ಥೆಗಳಲ್ಲೂ ನನ್ನನ್ನು ತೊಡಗಿಸಿಕೊಂಡಿದ್ದೇನೆ.

ದೆಹಲಿ ಕರ್ನಾಟಕ ಸಂಘವನ್ನು ನೋಡಿದಾಗ ನನಗೆ ಶಿವಮೊಗ್ಗದ ಕುವೆಂಪು ರಂಗ ಮಂದಿರ ನೋಡಿದಂತೆ ಭಾಸವಾಗುತ್ತದೆ. ಸಂಘಕ್ಕೆ ಬಂದಾಗ ಕರ್ನಾಟಕಕ್ಕೇ ಹೋದಂತಹ ವಾತಾವರಣವನ್ನು ತಂದು ಕೊಡುತ್ತದೆ. ಇದರಿಂದ ಬಹಳ ಖುಷಿಯಾಗುತ್ತದೆ. ಒಳ್ಳೆಯ ಕಾರ್ಯಕ್ರಮಗಳನ್ನು ಇಲ್ಲಿ ಆಯೋಜಿಸುತ್ತಾರೆ. ಕನ್ನಡದ ವಾತಾವರಣ ಮೂಡಿಸಲು ಸಂಘದ ಕಾರ್ಯಕಾರಿ ಸಮಿತಿ ತುಂಬಾ ಚೆನ್ನಾಗಿ ಕೆಲಸ ಮಾಡುತ್ತಿರುವುದು ನನಗೆ ಸಂತೋಷ ತಂದಿದೆ.

**ಅಭಿಮತ:** ಸರ್, ರಾಜ್ಯೋತ್ಸವ ಪುರಸ್ಕೃತರಾದ ನಿಮ್ಮಿಂದ ಹೊರನಾಡಿನಲ್ಲಿ ಮುಖ್ಯವಾಗಿ ದೆಹಲಿಯಲ್ಲಿ ಕನ್ನಡ ಹಾಗೂ ಕರ್ನಾಟಕ ಸಂಸ್ಕೃತಿಯನ್ನು ಇನ್ನಷ್ಟು ಚೆನ್ನಾಗಿ ಬೆಳೆಸುವ ಕೆಲಸಕ್ಕೆ ಪ್ರೋತ್ಸಾಹ ಸಿಗಲೆಂದು ಆಶಿಸುತ್ತಾ ನಿಮಗೆ ಮತ್ತೊಮ್ಮೆ ನಮ್ಮ ಅಭಿಮತ ಸಂಪಾದಕ ಮಂಡಳಿಯ ಅಭಿನಂದನೆಗಳನ್ನು ಸಲ್ಲಿಸುತ್ತೇವೆ. ಧನ್ಯವಾದಗಳು ಸರ್.

# ಡಾ. ಗುರುರಾಜ ಸಂಗೊಂದಿಮಠ



ಡಾ. ಗುರುರಾಜ ಸಂಗೊಂದಿಮಠ ಇವರು ಬಿಜಾಪುರ ಜಿಲ್ಲೆಯ ಜಮಖಂಡಿಯಲ್ಲಿ ಶ್ರೀಮತಿ ಪ್ರೇಮಾ ಮತ್ತು ಶ್ರೀ ಮಲ್ಲಿಕಾರ್ಜುನ ಜಿ. ಸಂಗೊಂದಿಮಠ 1981ರಲ್ಲಿ ಜನಿಸಿದರು. ಇವರ ಈರ್ವರು ಸಹೋದರಿಯರು ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಪೂರೈಸಿ, ಒಬ್ಬರು ವೈದ್ಯರು ಇನ್ನೊಬ್ಬರು ಇಂಜಿನಿಯರ್ ಆಗಿದ್ದಾರೆ.

ತಮ್ಮ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಗುಲಬರ್ಗಾ, ಬೆಳಗಾವಿ, ಧಾರವಾಡಗಳಲ್ಲಿ ಮಾಡಿದ ಇವರು ಪಿ.ಯು.ಸಿ. ವಿದ್ಯಾಭ್ಯಾಸವನ್ನು ಧಾರವಾಡದ ಕೆ.ಸಿ.ಡಿ. ಕಾಲೇಜಿನಲ್ಲಿ ಪೂರ್ಣಗೊಳಿಸಿ, ಕೆಂಪೇಗೌಡ ವೈದ್ಯಕೀಯ ಶಿಕ್ಷಣ ಸಂಸ್ಥೆ, ಹುಬ್ಬಳ್ಳಿಯಲ್ಲಿ 2004ರಲ್ಲಿ ಎಂ.ಬಿ.ಬಿ.ಎಸ್. ಮುಗಿಸಿರುತ್ತಾರೆ. ನಂತರ ಸೈಂಟ್ ಜಾನ್ಸ್ ಮೆಡಿಕಲ್ ಕಾಲೇಜು ಬೆಂಗಳೂರಿನಲ್ಲಿ ಸ್ನಾತಕೋತ್ತರ (ಪಿ.ಜಿ.) ಪದವಿಯನ್ನು ಅಧ್ಯಯನ ಮಾಡಿದ ಇವರು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯಕ್ಕೆ ಮೂರನೇ ರ್‍ಯಾಂಕ್ ಪಡೆದು ಉತ್ತೀರ್ಣರಾಗಿದ್ದಾರೆ.

ಫೆಬ್ರವರಿ 2011ರಲ್ಲಿ ರಾಷ್ಟ್ರೀಯ ಪರೀಕ್ಷಾ ಮಂಡಳಿ (ಎನ್.ಬಿ.ಇ.)ಯಿಂದ ಎರಡನೇ ರ್‍ಯಾಂಕ್ ಪಡೆದು ಐ.ಎಸ್.ಐ.ಸಿ. ದೆಹಲಿಯ ಎಫ್.ಎನ್.ಬಿ. (ಸ್ಪೈನ್ ಸರ್ಜರಿ)ಯಲ್ಲಿ ತೇರ್ಗಡೆ ಹೊಂದಿರುತ್ತಾರೆ. ಸದ್ಯಕ್ಕೆ 2011ರಿಂದ ಇಲ್ಲಿಯವರೆಗೆ ದೆಹಲಿಯ ವಸಂತಕುಂಜ್‌ನಲ್ಲಿರುವ ಇಂಡಿಯನ್ ಸ್ಪೈನ್ ಸೆಂಟರ್‌ನಲ್ಲಿ ಸ್ಪೈನ್ ಸರ್ಜರಿ ತಜ್ಞ ಹಾಗೂ ಶಸ್ತ್ರ ಚಿಕಿತ್ಸಾ ಘಟಕದ ಮುಖ್ಯಸ್ಥರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರ ಪತ್ನಿ ಶ್ರೀಮತಿ ಸುಮನ ಇವರು ವಿಕಿರಣ ತಜ್ಞೆಯಾಗಿದ್ದು ಇದೇ ಆಸ್ಪತ್ರೆಯಲ್ಲಿ ಇವರೊಂದಿಗೆ ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ದಂಪತಿಗಳಿಗೆ ಸಮರ್ಥ ಹೆಸರಿನ ಎಂಟು ವರ್ಷದ ಮಗನಿದ್ದಾನೆ.

ಜರ್ಮನಿ, ಹಾಂಗ್‌ಕಾಂಗ್, ಯು.ಎಸ್.ಎ., ಜಪಾನ್ ಮತ್ತು ಇಟಲಿ ದೇಶಗಳ ಸಂದರ್ಶಕ ಸಹಪಾಠಿಗಳಾಗಿರುವ ಇವರು ಹಲವಾರು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಮ್ಮೇಳನಗಳಲ್ಲಿ ತಮ್ಮ ಪ್ರಬಂಧಗಳನ್ನು ಮಂಡಿಸಿರುತ್ತಾರೆ. ಅಲ್ಲದೆ ಇನ್ನು ಫಿನ್‌ಲ್ಯಾಂಡ್, ಥಾಯ್‌ಲ್ಯಾಂಡ್, ಹವಾಯಿ, ಐಯರ್‌ಲ್ಯಾಂಡ್, ಸೇಂಟ್ ಲೂಯಿಸ್ (ಯು.ಎಸ್.ಎ) ದೇಶಗಳ ಫೆಲೋಶಿಪ್ ಪಡೆದಿರುವ ಇವರ ಪ್ರತಿಭೆಯನ್ನು ಗುರುತಿಸಿ 2013ರಲ್ಲಿ 'ಯಂಗ್ ಇನ್‌ವೆಸ್ಟಿಗೇಟರ್ ಆಫ್ ಇಂಡಿಯಾ' ಯುವ ತನಿಖಾಧಿಕಾರಿ ಪ್ರಶಸ್ತಿಯನ್ನು ಅಸೋಸಿಯೇಶನ್ ಆಫ್ ಸ್ಪೈನ್ ಸರ್ಜನ್ಸ್ ಆಫ್ ಇಂಡಿಯಾ ವತಿಯಿಂದ ನೀಡಿ ಪುರಸ್ಕರಿಸಲಾಗಿದೆ.

ಆಗಸ್ಟ್ 2019ರಲ್ಲಿ 'ಉದಯೋನ್ಮುಖ ಪ್ರತಿಭೆ' ಪ್ರಶಸ್ತಿಗೆ ಭಾಜನರಾಗಿದ್ದು ಇದನ್ನು ANBAI ನಾರ್ತ್ ಝೋನ್ ವತಿಯಿಂದ ನೀಡಿದ್ದು ಇವರಿಗೆ ಸಂದ ಗೌರವವಾಗಿದೆ.

ಕೊರಿಯನ್ ಸ್ಪೈನ್ ಸೊಸಾಯಿಟಿ ವತಿಯಿಂದ ಬೆಸ್ಟ್ ಪೇಪರ್ ಪ್ರಶಸ್ತಿಯನ್ನು ಜೂನ್ 2021ರಲ್ಲಿ ನೀಡಲಾಗಿದೆ. ಇವರು ಸಲ್ಲಿಸಿದ ಅನೇಕ ಪ್ರಬಂಧಗಳು ವೈದ್ಯಕೀಯ ಜರ್ನಲ್‌ಗಳಲ್ಲಿ ಪ್ರಕಟಗೊಂಡಿವೆ.

21 ತಿಂಗಳ ಮಗುವಿನ ವಿರೂಪ ಬೆನ್ನುಮೂಳೆ ಮೇಲಿನ ಯಶಸ್ವಿ ಶಸ್ತ್ರಚಿಕಿತ್ಸೆ ಮಾಡಿರುವುದು ಇವರ ಶಸ್ತ್ರಚಿಕಿತ್ಸಾ ನೈಪುಣ್ಯಕ್ಕೆ ಸಾಕ್ಷಿಯಾಗಿದೆ. ತಮ್ಮ ವೈದ್ಯಕೀಯ ಕೆಲಸಗಳ ಮಧ್ಯೆ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ನವದೆಹಲಿ ಘಟಕದ ಪ್ರಧಾನ ಕಾರ್ಯದರ್ಶಿಗಳಾಗಿ ಹಾಗೂ ವೀರಶೈವ ಮಹಾಸಭಾ ದೆಹಲಿ ರಾಜ್ಯ ಯುವ ಘಟಕದ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಮಾರ್ಚ್ 2020ರ ಕೋವಿಡ್–19ರ ಕಾರ್ಮಿಕರ ಸಮೂಹ ವಲಸೆ ತಡೆಯಲು ಇತರ ಸಂಘ ಸಂಸ್ಥೆಗಳ ನೆರವಿನೊಂದಿಗೆ ಆಹಾರ ಸಾಮಗ್ರಿಗಳನ್ನು ವಿತರಿಸಲು ನೆರವಾಗಿದ್ದಾರೆ. ವಿಶೇಷವಾಗಿ ದೆಹಲಿ ಕನ್ನಡಿಗರಿಗೆ ಬೆನ್ನುಮೂಳೆ ಸಮಸ್ಯೆ ಕುರಿತು ಉಚಿತ ಸಲಹೆ ಹಾಗೂ ಕೋವಿಡ್ ಸಂಕಷ್ಟ ಸಮಯದಲ್ಲಿ ಸಹಾಯ ಸಹಕಾರ ನೀಡಿರುತ್ತಾರೆ ಮತ್ತು ಲಯನ್ಸ್ ಕ್ಲಬ್ ಮುಖಾಂತರ ಕೂಡಾ ಸೇವೆ ಸಲ್ಲಿಸುತ್ತಿದ್ದಾರೆ.

ದೆಹಲಿ ಕರ್ನಾಟಕ ಸಂಘದ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸಕ್ರೀಯವಾಗಿ ಭಾಗವಹಿಸುವ ಇವರು ಸಂಘದಲ್ಲಿ ಉಚಿತವಾಗಿ ವೈದ್ಯಕೀಯ ಸಲಹೆಗಳನ್ನು ನೀಡಿದ್ದಾರೆ. ದೆಹಲಿಯಲ್ಲಿ ವೈದ್ಯಕೀಯ ವೃತ್ತಿಯಲ್ಲಿರುವ ಇವರು ಕೋವಿಡ್–19 (ಕೊರೊನಾ) ಸಂದರ್ಭದಲ್ಲಿ ಸಲ್ಲಿಸಿದ ಮಾನವೀಯ ಕೊಡುಗೆಗಳನ್ನು ಗುರುತಿಸಿ ದೆಹಲಿ ಕರ್ನಾಟಕ ಸಂಘವು ಈ ಬಾರಿಯ ಕರ್ನಾಟಕ ರಾಜ್ಯೋತ್ಸವ ಸಮಾರಂಭದಲ್ಲಿ 'ವಿಶಿಷ್ಟ ಕನ್ನಡಿಗ' ಪ್ರಶಸ್ತಿ ನೀಡಿ ಗೌರವಿಸಿದೆ.

# ಡಾ. ಅಕ್ಷಯ್ ಗೌಡ ಎಂ.ಕೆ.



ಇವರು ಹಾಸನ ಜಿಲ್ಲೆಯ, ಚನ್ನರಾಯಪಟ್ಟಣ ತಾಲ್ಲೂಕು, ಮುಳ್ಳಕೆರೆ ಗ್ರಾಮದ ನಿವಾಸಿಗಳಾದ ಶ್ರೀಮತಿ ಶಾರದಾ ಹಾಗೂ ಶ್ರೀ ಕಾಂತರಾಜು ದಂಪತಿಗಳ ಪುತ್ರ. ಇವರ ಕಿರಿಯ ಸಹೋದರ ಹರ್ಷ ಸಾಫ್ಟ್‌ವೇರ್ ಇಂಜಿನಿಯರ್ ಆಗಿದ್ದಾರೆ. ಇವರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ತುಮಕೂರು ಹಾಗೂ ಚಿತ್ರದುರ್ಗದಲ್ಲಿ ಮುಗಿಸಿ, ತಮ್ಮ ಹೈಸ್ಕೂಲ್ ವಿದ್ಯಾಭ್ಯಾಸವನ್ನು ಮೈಸೂರಿನ ಸದ್ವಿದ್ಯಾ ಶಾಲೆಯಲ್ಲಿ ಮಾಡಿರುತ್ತಾರೆ. ತದನಂತರ ಸರ್ಕಾರಿ ವೈದ್ಯಕೀಯ ಕಾಲೇಜು ಹಾಸನದಲ್ಲಿ ಎಂ.ಬಿ.ಬಿ.ಎಸ್. ಪದವಿ ಹಾಗೂ ದಾವಣಗೆರೆ ಮೆಡಿಕಲ್ ಕಾಲೇಜಿನಲ್ಲಿ ಎಂ.ಎಸ್. (ಆರ್ಥೋ) ಸ್ನಾತಕೋತ್ತರ ಪದವಿಯನ್ನು ಪಡೆದಿರುತ್ತಾರೆ.

ನಂತರ ನ್ಯಾಷನಲ್ ಬೋರ್ಡ್ ಆಫ್ ಎಗ್ಸಾಮಿನೇಷನ್ ದೆಹಲಿಯಿಂದ, ಡಿ.ಎನ್.ಬಿ. (ಆರ್ಥೋ) ಸ್ನಾತಕೋತ್ತರ ಪದವಿಯನ್ನು ಹಾಗು ದೆಹಲಿಯಲ್ಲಿಯೇ ಫೆಲೋಷಿಪ್ ಇನ್ ರಿಪ್ಲೇಸ್‌ಮೆಂಟ್‌ನ್ನು ಮುಗಿಸಿರುತ್ತಾರೆ.

ಇವರು ಪ್ರತಿಷ್ಠಿತ ವೈದ್ಯಕೀಯ ಸಂಸ್ಥೆಗಳಾದ ವಿಕ್ಟೋರಿಯಾ (ಬಿಎಂಸಿ) ಬೆಂಗಳೂರು, ಕಿಮ್ಸ್ ಮಂಗಳೂರು, ಹಾಸನ ಮುಂತಾದ ಆಸ್ಪತ್ರೆಗಳಲ್ಲಿ ಕೆಲಸ ಮಾಡಿದ ಅನುಭವ ಹೊಂದಿದ್ದಾರೆ. ಕಳೆದ ಮೂರು ವರ್ಷಗಳಿಂದ ದೆಹಲಿಯ ಪ್ರತಿಷ್ಠಿತ ಫೋರ್ಟಿಸ್ ಗ್ರೂಪ್ ಆಫ್ ಇನ್ಸ್ಟಿಟ್ಯೂಷನ್ಸ್ ಮತ್ತು ಪ್ರಸ್ತುತ ಪ್ರೀಮಿಯರ್ ಇನ್‌ಸ್ಟಿಟ್ಯೂಟ್, ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಆರ್ಥೋಪೆಡಿಕ್, ಸಫ್ದರ್‌ಜಂಗ್ ಆಸ್ಪತ್ರೆಯಲ್ಲಿ ಮೂಳೆ ಶಸ್ತ್ರ ಚಿಕಿತ್ಸಕರಾಗಿ ಕೆಲಸ ಮಾಡುತ್ತಿದ್ದಾರೆ. ಇವರ ಪತ್ನಿ ಡಾ. ವಂದನಾ (ಎಂ.ಡಿ.) ಅವರು ಸಫ್ದರ್‌ಜಂಗ್ ಆಸ್ಪತ್ರೆಯಲ್ಲಿ ಅರಿವಳಿಕೆ ತಜ್ಞರಾಗಿ ಕೆಲಸ ಮಾಡುತ್ತಿದ್ದಾರೆ. ಇವರೂ ಕೂಡಾ ಕೊರೊನಾ ಸಂಕಟದ ಸಮಯದಲ್ಲಿ ತೀವ್ರ ನಿಘಾ ಘಟಕದ ಮುಖ್ಯಸ್ಥೆಯಾಗಿದ್ದುಕೊಂಡು ಸಾವಿರಾರು ಕೊರೊನಾ ಪೀಡಿತರಿಗೆ ನೆರವಾಗಿದ್ದಾರೆ.

ದೆಹಲಿ ಕರ್ನಾಟಕ ಸಂಘದ ಅನೇಕ ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸಿ, ದೆಹಲಿಯಲ್ಲಿ ವೈದ್ಯಕೀಯ ವೃತ್ತಿಯಲ್ಲಿರುವ ಡಾ. ಅಕ್ಷಯ್ ಇವರು ಕೋವಿಡ್–19 (ಕೊರೊನಾ) ಸಂದರ್ಭದಲ್ಲಿ ಸಲ್ಲಿಸಿದ ಮಾನವೀಯ ಕೊಡುಗೆಗಳನ್ನು ಗುರುತಿಸಿ ದೆಹಲಿ ಕರ್ನಾಟಕ ಸಂಘವು ಕರ್ನಾಟಕ ರಾಜ್ಯೋತ್ಸವ ಸಮಾರಂಭದಲ್ಲಿ 'ವಿಶಿಷ್ಟ ಕನ್ನಡಿಗ' ಪ್ರಶಸ್ತಿ ನೀಡಿ ಗೌರವಿಸಿದೆ.

# ತಾಯ್ನಾಡಿಗೆ ಮರಳುತ್ತಿರುವವರಿಗೆ ಬೀಳ್ಕೊಡುಗೆ:



**ತ್ಯಾಗೇಶ ಮೂರ್ತಿ**



**ಬಿ.ಡಿ. ಶ್ರೀನಿವಾಸ,**



**ಶಿವಾನಂದ ಸಿರ್ಶೀಕರ್**



**ಮಾನವೀಯ ಅಂತಃ ಕರಣಗಳಿಗೆ ಸಾಕ್ಷಿಯಾದ ಭಾಗ್ಯ ರವಿ**

# ಸ್ಥಳೀಯ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮ

























## ಸಾಂಸ್ಕೃತಿಕ ಕಾರ್ಯಕ್ರಮ ನೀಡಿದ ತಂಡಗಳು

1. ಸುದೀತಿ ಅಂಬಳೆ ಮತ್ತು ಶ್ರೀಧ ಅಂಬಳೆ
2. ಸ್ಮಿತಾ ಭಟ್ ಮತ್ತು ಶ್ರೀಕಾಂತ್ ರಾವ್
3. ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಶನ್
4. ಸಪ್ನಾ ಅಟ್ಟಾವರ್ ಮತ್ತು ರಮ್ಯ
5. ದೆಹಲಿ ಕನ್ನಡ ಕಲಾವಿದರ ಬಳಗ
6. ದೆಹಲಿ ಫ್ರೆಂಡ್ಸ್ 7. ಕಾವೇರಿ ಬಳಗ 8. ಸಿರಿ ಮತ್ತು ಅನ್ವಿತಾ
9. ನೇತ್ರಾ ಮತ್ತು ಕುಮಾರ್
10. ಮಕ್ಕಳ ಸಾಹಿತ್ಯ ಪರಿಷತ್ತು

# ದೆಹಲಿ ಕರ್ನಾಟಕ ಸಂಘದ ವಾರ್ಷಿಕ ಆಟೋಟ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳು







ದೆಹಲಿ ಕರ್ನಾಟಕ ಸಂಘದ ವಾರ್ಷಿಕ ಸಾಂಸ್ಕೃತಿಕ ಹಾಗೂ ಆಟೋಟ ಸ್ಪರ್ಧೆಗಳನ್ನು ದಿನಾಂಕ 06.11.2021 ಹಾಗೂ 07.11.2021ರ ಶನಿವಾರ ಮತ್ತು ಭಾನುವಾರ ದೆಹಲಿ ಕರ್ನಾಟಕ ಸಂಘದ ಆವರಣ ಹಾಗೂ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಆಯೋಜಿಸಲಾಗಿತ್ತು.

ಕೊರೊನಾ ಮಹಾಮಾರಿಯಿಂದ ಎರಡು ವರ್ಷ ಕ್ರಿಕೆಟ್, ವಾಲಿಬಾಲ್, ಕಬಡ್ಡಿ ಹಾಗೂ ಥ್ರೋಬಾಲ್ ಪಂದ್ಯಾವಳಿಗಳು ನಡೆದಿದ್ದು, ಆಟೋಟ ಸ್ಪರ್ಧೆಗಳನ್ನು ಆಯೋಜಿಸಲು ಸಾಧ್ಯವಾಗಿರಲಿಲ್ಲ.

ಸಂಘದ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿ ಹಾಗೂ ಕಾರ್ಯಕಾರಿ ಸಮಿತಿಯ ಸದಸ್ಯರು ಸಾಂಸ್ಕೃತಿಕ ಸಮಿತಿ ಮತ್ತು ಕ್ರೀಡಾ ಸಮಿತಿಯ ಸಮ್ಮುಖದಲ್ಲಿ ನವೆಂಬರ್ 6ರಂದು ದೆಹಲಿ ಕರ್ನಾಟಕ ಸಂಘದ ಆವರಣದಲ್ಲಿ ಸಾಂಸ್ಕೃತಿಕ ಸ್ಪರ್ಧೆ ಹಾಗೂ ಒಳಾಂಗಣ ಕ್ರೀಡಾ ಸ್ಪರ್ಧೆಗಳಿಗೆ ಚಾಲನೆ ನೀಡಲಾಯಿತು.

ಮರುದಿನ ನವೆಂಬರ್ 7ರ ಭಾನುವಾರ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರು ಶ್ರೀ ಸಿ.ಎಂ. ನಾಗರಾಜ, ಆಟೋಟ ಸ್ಪರ್ಧೆಗಳಿಗೆ ಚಾಲನೆ ನೀಡಿ ಬಂದಿದ್ದ ಸ್ಪರ್ಧಿಗಳಿಗೆ ಕ್ರೀಡಾ ಸ್ಫೂರ್ತಿಯಿಂದ ಆಡಬೇಕೆಂದು ಎಲ್ಲರಿಗೂ ಶುಭ ಕೋರಿದರು. ಪ್ರಧಾನ ಕಾರ್ಯದರ್ಶಿ ಶ್ರೀ ಆರ್. ರೇಣುಕುಮಾರ್ ಅವರು ಎಲ್ಲಾ ಸ್ಪರ್ಧಿಗಳಿಗೂ ಸ್ನೇಹ ಬಾಂಧವ್ಯದಿಂದ ಆಡಿ ಎಂದು ಮನವಿ ಮಾಡಿ ಶುಭ ಕೋರಿದರು. ಈ ಸಂದರ್ಭದಲ್ಲಿ ಕ್ರೀಡಾ ಸಮಿತಿಯ ಅಧ್ಯಕ್ಷರಾದ ಡಾ. ಎಂ.ಎಸ್. ಶಶಿಕುಮಾರ್, ಸಂಚಾಲಕರಾದ ಶ್ರೀಮತಿ ಮಾಲಿನಿ ಪ್ರಹ್ಲಾದ್ ಹಾಗೂ ಕಾರ್ಯಕಾರಿ ಸಮಿತಿಯ ಸದಸ್ಯರು ಹಾಗೂ ಕ್ರೀಡಾ ಸಮಿತಿಯ ಸದಸ್ಯರು ಉಪಸ್ಥಿತರಿದ್ದರು.

**ಬಹುಮಾನ ವಿಜೇತರು**

**ಭಾವಗೀತೆ/ಭಕ್ತಿ ಗೀತೆ/ಜಾನಪದ ಗೀತೆ (8 ರಿಂದ 13 ವರ್ಷ)** ಅವನಿ ನೆಲ್ಲಿ–ಪ್ರಥಮ, ಧನ್ವಿನ್–ದ್ವಿತೀಯ, ಹಂಸಶ್ರೀ–ತೃತೀಯ

**ಕನ್ನಡ ರೈಮ್ಸ್ (4 ರಿಂದ 10ವರ್ಷ)** ಮೊನಿಷ್ಕ–ಪ್ರಥಮ, ನೂತನ ಕಾಯ್ಕಡೆ–ದ್ವಿತೀಯ, ಖುಷಿ ಗೌಡ ಮತ್ತು ಕೀರ್ತನ್ ಪಿ–ತೃತೀಯ

**ಸ್ಮರಣ ಶಕ್ತಿ ಸ್ಪರ್ಧೆ (11 ರಿಂದ 14 ವರ್ಷ) :** ದಿವ್ಯ ಬಿರಾದಾರ ಮತ್ತು ರೋಹಿತ್– ಪ್ರಥಮ, ಸೆಲೆಸ್ಟಿನ್ ಡಿ'ಸೋಜ ಮತ್ತು ಸೃಜನ್ ಆರ್–ದ್ವಿತೀಯ, ಓಶಿನ್ ಮುರಗೋಡ–ತೃತೀಯ

**ಸ್ಮರಣ ಶಕ್ತಿ ಸ್ಪರ್ಧೆ (7 ರಿಂದ 10 ವರ್ಷ) :** ರೋಶಿನಿ ಗೌಡ–ಪ್ರಥಮ, ಅವನಿ ನೆಲ್ಲಿ–ದ್ವಿತೀಯ, ಖುಷಿ ಗೌಡ–ತೃತೀಯ

**ಚಿತ್ರ ಬರೆಯುವ ಸ್ಪರ್ಧೆ (10 ವರ್ಷಕ್ಕಿಂತ ಕೆಳಗಿನವರು) :** ವೈಷ್ಣವಿ–ಪ್ರಥಮ, ಮೊನಿಷ್ಕಾ–ದ್ವಿತೀಯ

**50 ಮೀ ಓಟ (3 ರಿಂದ 6 ವರ್ಷ) :** ಮೊನಿಷ್ಕಾ–ಪ್ರಥಮ, ಆದೃತಿ ಸತೀಶ್–ದ್ವಿತೀಯ, ದೃತಿ–ತೃತೀಯ

**ಬಾಲ್ ಇನ್ ಬಕೆಟ್ (3 ರಿಂದ 6 ವರ್ಷ) :** ಆದೃತಿ ಸತೀಶ್–ಪ್ರಥಮ, ಮೊನಿಷ್ಕಾ–ದ್ವಿತೀಯ

**50 ಮೀ. ಓಟ (6 ರಿಂದ 10 ವರ್ಷ) :** ಕೀರ್ತನ್ ಪಿ–ಪ್ರಥಮ, ಇಶಾನ್ ಸಂತೋಷ್–ದ್ವಿತೀಯ, ತನುಷ್ ರಂಜಿತ್–ತೃತೀಯ

**50 ಮೀ. ಓಟ (6 ರಿಂದ 10 ವರ್ಷ) :** ನೂತನ ಕಾಯ್ಕಡೆ–ಪ್ರಥಮ, ಅನುಷ್ಕಾ ಜಕ್ಕಪ್ಪ–ದ್ವಿತೀಯ, ರೋಶಿನಿ ಮಂಜುನಾಥ ಮತ್ತು ಖುಷಿ ಶಂಕ್ರೇ ಗೌಡ–ತೃತೀಯ

**ಬಾಲ್ ಇನ್ ಬಕೆಟ್ (6 ರಿಂದ 10 ವರ್ಷ) :** ದರ್ಶನ್–ಪ್ರಥಮ, ಧನ್ವಿನ್–ದ್ವಿತೀಯ, ಮಂಜುನಾಥ–ತೃತೀಯ

**ಮೂರು ಕಾಲಿನ ಓಟ (8 ರಿಂದ 12 ವರ್ಷ) :** ಮದುಸೂಧನ ಮತ್ತು ಕೀರ್ತನ್ ಪಿ–ಪ್ರಥಮ, ಸೃಜನ್ ಮತ್ತು ಜೀವನ್ ರಾಜ್–ದ್ವಿತೀಯ, ಹರ್ಷಿತ್ ಮತ್ತು ಓಂಕಾರೇಶ್ವರ–ತೃತೀಯ

**ಮೂರು ಕಾಲಿನ ಓಟ (8 ರಿಂದ 12 ವರ್ಷ) :** ಸಹನಾ ತಿಮ್ಮಪ್ಪ ಮತ್ತು ಅವನಿ ನೆಲ್ಲಿ–ಪ್ರಥಮ, ಓಶಿನ್ ಮುರಗೋಡ ಮತ್ತು ಅನುಷ್ಕಾ–ದ್ವಿತೀಯ, ಖುಷಿ ಮತ್ತು ರೋಶಿನಿ ಗೌಡ–ತೃತೀಯ

**ಕೇರಂ (15 ವರ್ಷ ಮೇಲ್ಪಟ್ಟ ಪುರುಷರು) :** ತ್ಯಾಗೇಶ್ ಮೂರ್ತಿ–ಪ್ರಥಮ, ರವಿ–ದ್ವಿತೀಯ

**ಕೇರಂ (15 ವರ್ಷ ಮೇಲ್ಪಟ್ಟ ಮಹಿಳೆಯರು) :** ಏಕ್ತಾ ಮೂರ್ತಿ–ಪ್ರಥಮ, ಅಶ್ವಿನಿ ಬಿ.ಎಸ್.–ದ್ವಿತೀಯ

**ಕೇರಂ ಡಬಲ್ಸ್ (15 ವರ್ಷ ಮೇಲ್ಪಟ್ಟವರು) :** ಏಕ್ತಾ ಮೂರ್ತಿ ಮತ್ತು ತ್ಯಾಗೇಶ್ ಮೂರ್ತಿ–ಪ್ರಥಮ, ರವಿ ಮತ್ತು ದಿನೇಶ್ ಪಿ–ದ್ವಿತೀಯ

**ಚೆಸ್ (10 ವರ್ಷ ಮೇಲ್ಪಟ್ಟವರು) :** ಋತ್ವಿಕ್ ನೆಲ್ಲಿ–ಪ್ರಥಮ, ಯಶಸ್–ದ್ವಿತೀಯ

**ಭಕ್ತಿ ಗೀತೆ/ಭಾವಗೀತೆ/ಜಾನಪದ ಗೀತೆ (14 ರಿಂದ 18 ವರ್ಷ) :** ಹಿಮಾಂಶು–ಪ್ರಥಮ, ಪ್ರೇರಣಾ ರಾವ್–ದ್ವಿತೀಯ

**ಭಕ್ತಿ ಗೀತೆ/ಭಾವಗೀತೆ/ಜಾನಪದ ಗೀತೆ (19 ವರ್ಷಕ್ಕಿಂತ ಮೇಲ್ಪಟ್ಟವರು) :** ರಂಜಿತ ಶೆಣೈ–ಪ್ರಥಮ, ಎಸ್. ಕುಮಾರ–ದ್ವಿತೀಯ, ಅಶೋಕ ಹನಮ್ ಸಾಗರ–ತೃತೀಯ

**ಚಿತ್ರ ಬರೆಯುವ ಸ್ಪರ್ಧೆ (10 ರಿಂದ 18 ವರ್ಷ) :** ಡಿಯೋನ್ ಡಿ'ಸೋಜ–ಪ್ರಥಮ, ರಿಷಿ ಜೆ.–ದ್ವಿತೀಯ, ಓಶಿನ್ ಮುರಗೋಡ–ತೃತೀಯ

**ರಂಗೋಲಿ (18 ವರ್ಷ ಮೇಲ್ಪಟ್ಟವರು) :** ಶ್ರುತಿ ಕಾಯ್ಕಡೆ–ಪ್ರಥಮ, ಮೈಥಿಲಿ ಅತ್ತಾವರ–ದ್ವಿತೀಯ, ಪ್ರೇಮಾ ಗೌಡ–ತೃತೀಯ

**100 ಮೀ. ಓಟ (11 ರಿಂದ 16 ವರ್ಷ ಹುಡುಗರು–ಗ್ರೂಪ್–1) :** ಸೌರಭ್ ಸತೀಶ್–ಪ್ರಥಮ, ಡಿಯೋನ್ ಡಿ'ಸೋಜ–ದ್ವಿತೀಯ, ಸುಮಿತ್ ಸತೀಶ್–ತೃತೀಯ

**100 ಮೀ. ಓಟ (11 ರಿಂದ 16 ವರ್ಷ ಹುಡುಗರು–ಗ್ರೂಪ್–2) :** ಸೆಲೆಸ್ಟಿನ್ ಡಿ'ಸೋಜ–ಪ್ರಥಮ, ಮದುಸೂಧನ–ದ್ವಿತೀಯ, ಹರ್ಷಿತ್ ಮತ್ತು ಜೀವನ್ ರಾಜ್–ತೃತೀಯ

**100 ಮೀ. ಓಟ (11 ರಿಂದ 16 ವರ್ಷ) :** ಸಹನಾ ತಿಮ್ಮಪ್ಪ–ಪ್ರಥಮ, ಹಂಸಶ್ರೀ–ದ್ವಿತೀಯ, ಅವನಿ ನೆಲ್ಲಿ–ತೃತೀಯ

**200 ಮೀ. ಓಟ (11 ರಿಂದ 16 ವರ್ಷ, ಹುಡುಗರು–ಗ್ರೂಪ್–1) :** ಸೌರಭ್ ಕುರ್ಮೋಲಿ–ಪ್ರಥಮ, ಸುಮಿತ್ ಸತೀಶ್–ದ್ವಿತೀಯ, ಸೆಲೆಸ್ಟಿನ್ ಡಿ'ಸೋಜ–ತೃತೀಯ

**200 ಮೀ. ಓಟ (11 ರಿಂದ 16 ವರ್ಷ,ಹುಡುಗರು–ಗ್ರೂಪ್–2) :** ಕೀರ್ತನ್ ಪಿ–ಪ್ರಥಮ, ಮದುಸೂಧನ್ ಪೂಜಾರಿ–ದ್ವಿತೀಯ, ಜೀವನ್ ರಾಜ್–ತೃತೀಯ, ಚಿರಾಗ್–ಸಮಾಧಾನಕರ ಬಹುಮಾನ

**200 ಮೀ. ಓಟ (11 ರಿಂದ 16 ವರ್ಷ) :** ಸಹನಾ ತಿಮ್ಮಪ್ಪ–ಪ್ರಥಮ, ಅವನಿ ನೆಲ್ಲಿ–ದ್ವಿತೀಯ, ನೂತನ ಕಾಯ್ಕಡೆ–ತೃತೀಯ

**100 ಮೀ. ಓಟ (17 ರಿಂದ 24 ವರ್ಷ) :** ಅನನ್ಯಾ ರಾಧಾಕೃಷ್ಣ–ಪ್ರಥಮ, ಸಹನಾ ತಿಮ್ಮಪ್ಪ–ದ್ವಿತೀಯ, ರಚನಾ ಜೆ–ತೃತೀಯ

**100 ಮೀ. ಓಟ (17 ರಿಂದ 24 ವರ್ಷ, ಹುಡುಗರು) :** ಧನುಶ್ ಗೌಡ–ಪ್ರಥಮ, ಧ್ರುವ್ ಕಾಮ್ ಶೆಟ್ಟಿ–ದ್ವಿತೀಯ

**100 ಮೀ. ಓಟ (28 ವರ್ಷ ಮೇಲ್ಪಟ್ಟ ಮಹಿಳೆಯರು) :** ಶ್ರುತಿ ಕಾಯ್ಕಡೆ–ಪ್ರಥಮ, ಪುಷ್ಪಲತಾ ಬಿ.ಎಸ್.–ದ್ವಿತೀಯ, ಡಾ. ಅನು–ತೃತೀಯ, ಶ್ರೀದೇವಿ ಪೂಜಾರಿ–ನಾಲ್ಕನೇ ಬಹುಮಾನ

**100 ಮೀ. ಓಟ (36 ವರ್ಷ ಮೇಲ್ಪಟ್ಟ ಪುರುಷರು)** : ಸನ್ಮಾನ್ ಎನ್. ಎಂ.–ಪ್ರಥಮ, ವಿನೋದ್ ಕಾಯ್ಕಡೆ–ದ್ವಿತೀಯ, ರವಿ ಕುಮಾರ್–ತೃತೀಯ

**200 ಮೀ. ಓಟ (17 ವರ್ಷ ಮೇಲ್ಪಟ್ಟವರು)** : ಅನನ್ಯಾ ರಾಧಾಕೃಷ್ಣ–ಪ್ರಥಮ, ಶ್ರುತಿ ವಿನೋದ್ ಕಾಯ್ಕಡೆ–ದ್ವಿತೀಯ, ರಚನಾ ಜೆ–ತೃತೀಯ

**200 ಮೀ. ಓಟ (17 ವರ್ಷ ಮೇಲ್ಪಟ್ಟ ಪುರುಷರು)** : ಧ್ರುವ್ ಕಾಮ್ ಶೆಟ್ಟಿ–ಪ್ರಥಮ, ಸನ್ಮಾನ್ ಎನ್. ಎಂ.–ದ್ವಿತೀಯ, ಧನುಶ್ ಗೌಡ–ತೃತೀಯ

**200 ಮೀ. ವೇಗ ನಡಿಗೆ (40 ವರ್ಷ ಮೇಲ್ಪಟ್ಟ ಮಹಿಳೆಯರು)** : ಲಕ್ಷ್ಮೀ ಗೌಡ–ಪ್ರಥಮ, ಶೋಭಾ ಗೌಡ–ದ್ವಿತೀಯ, ರೀನಾ ಕುರ್ಮೋಲಿ–ತೃತೀಯ ಮತ್ತು ರಂಜಿತಾ ಶೆಣೈ–ಸಮಾಧಾನಕರ ಬಹುಮಾನ

**200 ಮೀ. ವೇಗ ನಡಿಗೆ (50 ಮೇಲ್ಪಟ್ಟ ಪುರುಷರು)** : ಶಶಿಕಾಂತ್ ಪಾಟೀಲ–ಪ್ರಥಮ, ಕೆ.ಎಸ್. ಮೂರ್ತಿ–ದ್ವಿತೀಯ

**400 ಮೀ. ಓಟ** : ಧನುಷ್ ಗೌಡ–ಪ್ರಥಮ, ಸನ್ಮಾನ್ ಎನ್.ಎಂ.–ದ್ವಿತೀಯ

**4x100 ಮೀ. ರಿಲೆ (11 ರಿಂದ 16 ವರ್ಷ, ಹುಡುಗರು)** : ಸುಮಿತ್, ಸುದೀಪ್, ಕಿರಣ್ ಕುಮಾರ್, ಹರ್ಷಿತ್ ಆರ್–ಪ್ರಥಮ, ಸೌರಭ್, ಕಾರ್ತಿಕ್ ಆಚಾರ್ಯ, ಸುಮಂತ್, ಕೀರ್ತನ್ ಪಿ–ದ್ವಿತೀಯ

**4x100 ಮೀ. ರಿಲೆ (11 ರಿಂದ 16 ವರ್ಷ)** : ನೂತನ ಕಾಯ್ಕಡೆ, ಲಕ್ಷ್ಮೀ, ಹಂಸಶ್ರೀ ಮತ್ತು ಅನುಷ್ಕಾ–ಪ್ರಥಮ, ಸಹನಾ ತಿಮ್ಮಪ್ಪ, ಅವನಿ ನೆಲ್ಲಿ, ರೋಶಿನಿ ಮತ್ತು ಖುಷಿ–ದ್ವಿತೀಯ

**100 ಮೀ. ಮೂರು ಕಾಲಿನ ಓಟ (17 ವರ್ಷ ಮೇಲ್ಪಟ್ಟ ಪುರುಷರು)** : ಡಿಯೋನ್ ಡಿ'ಸೋಜ ಮತ್ತು ಜೆ. ರಿಷಿ–ಪ್ರಥಮ, ಸುದೀಪ್ ಮತ್ತು ಕಿರಣ್ ಕುಮಾರ್–ದ್ವಿತೀಯ, ಸುಮಂತ್ ಮತ್ತು ಸೌರಭ್ ಕುರ್ಮೋಲಿ–ತೃತೀಯ

**100 ಮೀ. ಮೂರು ಕಾಲಿನ ಓಟ (25 ವರ್ಷ ಮೇಲ್ಪಟ್ಟ ಪುರುಷರು)** : ಸನ್ಮಾನ್ ಎನ್.ಎಂ. ಮತ್ತು ಧ್ರುವ್ ಕಾಮ್ ಶೆಟ್ಟಿ–ಪ್ರಥಮ, ವಿನೋದ್ ಕಾಯ್ಕಡೆ ಮತ್ತು ಧನುಷ್ ಗೌಡ–ದ್ವಿತೀಯ, ಶಶಿಕಾಂತ್ ಪಾಟೀಲ ಮತ್ತು ರವಿ–ತೃತೀಯ

**100 ಮೀ. ಮೂರು ಕಾಲಿನ ಓಟ (17 ವರ್ಷ ಮೇಲ್ಪಟ್ಟವರು)** : ರಚನಾ ಜೆ ಮತ್ತು ಅನನ್ಯಾ ರಾಧಾಕೃಷ್ಣ–ಪ್ರಥಮ, ಪುಷ್ಪಲತಾ ಬಿ.ಎನ್ ಮತ್ತು ಮಂಜುಳಾ–ದ್ವಿತೀಯ, ಶೋಭಾ ಗೌಡ ಮತ್ತು ಶುಭಾ ದೇವಿಪ್ರಸಾದ್–ತೃತೀಯ

**100 ಮೀ. ಲಿಂಬೆ ಮತ್ತು ಚಮಚ (35 ವರ್ಷಕ್ಕಿಂತ ಕೆಳಗಿನವರು)**: ಲಕ್ಷ್ಮೀ ಗೌಡ–ಪ್ರಥಮ, ಶ್ರೀದೇವಿ ಪೂಜಾರಿ–ದ್ವಿತೀಯ, ನಿಖಿತಾ ಪೂಜಾರಿ–ತೃತೀಯ

**100 ಮೀ. ಲಿಂಬೆ ಮತ್ತು ಚಮಚ (35 ವರ್ಷಕ್ಕಿಂತ ಮೇಲ್ಪಟ್ಟವರು)**: ಮಂಜುಳಾ ಜಕ್ಕಪ್ಪ–ಪ್ರಥಮ, ಶ್ರೀದೇವಿ ಎಸ್. ಎಂ.–ದ್ವಿತೀಯ, ಜ್ಯೋತಿ ಜಗದೀಶ್ ಮತ್ತು ಪೂರ್ಣಿಮಾ ಗೌಡ–ತೃತೀಯ

**ಸೂಜಿ ಮತ್ತು ದಾರ** : ವಿನೋದ್ ಕಾಯ್ಕಡೆ–ಪ್ರಥಮ, ರಾಘವೇಂದ್ರ ನಾಯಕ್–ದ್ವಿತೀಯ, ಸತೀಶ್ ಎಸ್.ಎಂ.–ತೃತೀಯ

**ಶಾಟ್ ಪುಟ್ (35 ವರ್ಷಕ್ಕಿಂತ ಕೆಳಗಿನವರು)**: ರಮ್ಯ ಆರ್.ಎಸ್–ಪ್ರಥಮ, ಪ್ರತಿಭಾ ಗೌಡ–ದ್ವಿತೀಯ

**ಶಾಟ್ ಪುಟ್ (35 ವರ್ಷಕ್ಕಿಂತ ಕೆಳಗಿನವರು)**: ವಿನೋದ್ ಕಾಯ್ಕಡೆ–ಪ್ರಥಮ, ಅಂಬಿಕೇಶ್ ಪಾಟೀಲ–ದ್ವಿತೀಯ, ಧ್ರುವ್ ಕಾಮ್ ಶೆಟ್ಟಿ–ತೃತೀಯ













**ಶಾಟ್ ಪುಟ್ (35 ವರ್ಷಕ್ಕಿಂತ ಕೆಳಗಿನವರು)**: ಪುಷ್ಪಲತಾ ಬಿ.ಎನ್.–ಪ್ರಥಮ, ಮಂಜುಳಾ ಜಕ್ಕಪ್ಪ–ದ್ವಿತೀಯ, ಹೇಮಾಶ್ರೀ ಚಂದ್ರಶೇಖರ–ತೃತೀಯ

**ಶಾಟ್ ಪುಟ್ (36 ವರ್ಷಕ್ಕಿಂತ ಮೇಲ್ಪಟ್ಟ ಪುರುಷರು)**: ಸನ್ಮಾನ್ ಎನ್.ಎಂ. –ಪ್ರಥಮ, ಪ್ರಶಾಂತ ಪಿ.ಟಿ. –ದ್ವಿತೀಯ, ಸತೀಶ್ ಎಸ್.ಎಂ. –ತೃತೀಯ

**ಶಾಟ್ ಪುಟ್ (50 ವರ್ಷಕ್ಕಿಂತ ಮೇಲ್ಪಟ್ಟ ಪುರುಷರು)**: ದೇವೇಂದ್ರಪ್ಪ –ಪ್ರಥಮ, ಮಂಜುನಾಥ –ದ್ವಿತೀಯ

ಎಲ್ಲಾ ಆಟೋಟ ಸ್ಪರ್ಧೆಗಳು ಮುಗಿಯುವರೆಗೂ ಮೈದಾನದಲ್ಲಿದ್ದ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ, ಉಪಾಧ್ಯಕ್ಷೆ ಶ್ರೀಮತಿ ಪೂಜಾ ಪಿ. ರಾವ್, ಜಂಟಿ ಕಾರ್ಯದರ್ಶಿ ಶ್ರೀಮತಿ ಸುಮಿತಾ ಮುರಗೋಡ, ಖಜಾಂಚಿ ಶ್ರೀ ರಾಧಾಕೃಷ್ಣ, ಸದಸ್ಯರುಗಳಾದ ಶ್ರೀ ಶಿವಪ್ಪ ಎಂ., ಶ್ರೀ ಕೆ.ಎಸ್. ಮೂರ್ತಿ, ಶ್ರೀ ಪ್ರಭಾಕರ ಮಡ್ಡಿತೋಟ್, ಶ್ರೀ ನವೀನ್ ಕುಮಾರ್ ವಿ., ಶ್ರೀ ಎ.ಟಿ. ಶ್ರೀನಿವಾಸ, ಶ್ರೀಮತಿ ಸವಿತಾ ನೆಲ್ಲಿ, ಶ್ರೀಮತಿ ಅಶ್ವಿನಿ ಬಿ.ಎಸ್., ಶ್ರೀ ಚಂದ್ರಶೇಖರ ಎನ್.ಪಿ. ಹಾಗೂ ಕ್ರೀಡಾ ಸಮಿತಿ ಅಧ್ಯಕ್ಷರಾದ ಡಾ. ಎಂ.ಎಸ್. ಶಶಿಕುಮಾರ್, ಸಂಚಾಲಕಿ ಶ್ರೀಮತಿ ಮಾಲಿನಿ ಪ್ರಹ್ಲಾದ್ ಅವರ ಸಮ್ಮುಖದಲ್ಲಿ ಭಾಗವಹಿಸಿದ ಎಲ್ಲಾ ಸ್ಪರ್ಧಿಗಳಿಗೂ ಧನ್ಯವಾದವನ್ನು ತಿಳಿಸಿ ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಆಟೋಟ ಸ್ಪರ್ಧೆಗಳಿಗೆ ಮೆರುಗು ನೀಡುವಂತೆ ಕ್ರೀಡಾ ಸಮಿತಿಯ ಸದಸ್ಯರಾದ ಶ್ರೀ ಸಂತೋಷ ಜೆ. ಅವರು ಮನವಿ ಮಾಡಿಕೊಂಡರು. ◻

***ಸಂತೋಷ ಜೆ***

# ದೆಹಲಿ ಕನ್ನಡಿಗರ ಸಮಾಜ ಮುಖಿ ಕೆಲಸಗಳಿಗೆ ಸರ್ಕಾರದ ಅನುದಾನ ನೀಡಬೇಕು-
# ವಿಧಾನ ಪರಿಷತ್ ಸಭಾಪತಿ ಬಸವರಾಜ ಎಸ್. ಹೊರಟ್ಟಿ

ದೆಹಲಿ ಕರ್ನಾಟಕ ಸಂಘ ಮತ್ತು ಅನ್ನಪೂರ್ಣ ಪ್ರಕಾಶನ ಸಿರಿಗೇರಿ, ಸಿರಗುಪ್ಪ ತಾಲ್ಲೂಕು ಬಳ್ಳಾರಿ ಜಿಲ್ಲೆ ಇವುಗಳ ಸಂಯುಕ್ತಾಶ್ರಯದಲ್ಲಿ ದೆಹಲಿ ಕರ್ನಾಟಕ ಸಂಘದ ಸಭಾ ಭವನದಲ್ಲಿ ನಡೆದ ಕರ್ನಾಟಕ ರಾಜ್ಯೋತ್ಸವ ಆಚರಣೆ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿ ಮಾತನಾಡಿದ ಕರ್ನಾಟಕ ವಿಧಾನ ಪರಿಷತ್ ಮಾನ್ಯ ಸಭಾಪತಿ ಬಸವರಾಜ ಎಸ್. ಹೊರಟ್ಟಿ ಅವರು ದೆಹಲಿ ಕನ್ನಡ ಸಂಘದ ಕಾರ್ಯಕ್ರಮಗಳು ಮತ್ತು ಕೆಲಸಗಳ ಬಗೆಗೆ ಸಂತೋಷವನ್ನು ವ್ಯಕ್ತಪಡಿಸಿ ದೆಹಲಿಯಲ್ಲಿ ಇನ್ನೂ ಎರಡು ಕನ್ನಡ ಶಾಲೆಗಳು ಪ್ರಾರಂಭಿಸವಾಗಬೇಕು ಎಂದು ಅಭಿಪ್ರಾಯ ಪಟ್ಟರು. ದೆಹಲಿ ಕನ್ನಡಿಗರ ಸಮಸ್ಯೆಗಳನ್ನು ಮತ್ತು ಬೇಡಿಕೆಗಳನ್ನು ಆಲಿಸಿದ ಅವರು ಯು.ಪಿ.ಎಸ್.ಸಿ. ಪರೀಕ್ಷೆ, ಉನ್ನತ ಅಧ್ಯಯನ ಸೇರಿದಂತೆ ಅನೇಕ ಕನಸುಗಳನ್ನು ಹೊತ್ತಿಕೊಂಡು ದೆಹಲಿಗೆ ಬರುವ ಕನ್ನಡಿಗರಿಗೆ ಮುಖ್ಯವಾಗಿ ವಿದ್ಯಾರ್ಥಿಗಳಿಗೆ ಒಂದು ವಸತಿ ಸೌಲಭ್ಯವನ್ನು ಒದಗಿಸಬೇಕು, ದೆಹಲಿಯಲ್ಲಿಯೂ ಸಹ ಕರ್ನಾಟಕದ ಹಾಗೆ ಇಂದಿರಾ ಕ್ಯಾಂಟೀನ್ ಸ್ಥಾಪಿಸಬೇಕು ಎಂಬ ಇನ್ನಿತರ ಬೇಡಿಕೆಗಳಿಗೆ ತಾವು ಪೂರಕವಾಗಿ ಸ್ಪಂದಿಸುವುದಾಗಿ ಹೇಳಿ, ಇಂತಹ ಸಮಾಜ ಮುಖಿ ಕೆಲಸಗಳಿಗೆ ಸರ್ಕಾರಕ್ಕೆ ಅನುದಾನಗಳನ್ನು ನೀಡುವುದು ದೊಡ್ಡ ಹೊರೆಯೇನೂ ಆಗುವುದಿಲ್ಲ, ಅದಕ್ಕಾಗಿ ದೆಹಲಿ ಕರ್ನಾಟಕ ಸಂಘ ಹಾಗೂ ಸ್ಥಳೀಯ ಕನ್ನಡಿಗರು ಸೂಕ್ತ ಮನವಿ ಪತ್ರಗಳನ್ನು ಕರ್ನಾಟಕ ಸರ್ಕಾರಕ್ಕೆ ಕಳಿಸಿದರೆ ಅದಕ್ಕೆ ತಾವು ಕೂಡ ದನಿಗೂಡಿಸುವುದಾಗಿ ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದ ಕರ್ನಾಟಕ ವಿಧಾನ ಪರಿಷತ್ ಮಾಜಿ ಸದಸ್ಯರಾದ ಡಿ.ಎಸ್. ವೀರಯ್ಯನವರು ಮಾತನಾಡಿ ಕನ್ನಡ ಸಂಘ ಬಹುಪಯೋಗಿ ಕನ್ನಡ ಕೆಲಸಗಳ ಜೊತೆಗೆ ಸಮಾಜಸೇವೆ ಮಾಡುತ್ತಿದ್ದು ತಮ್ಮ ಸಂಬಂಧಿಗಳೂ ಸಹ ಇಲ್ಲಿ ಕೇಂದ್ರಿಯ ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿ ಮಾಡುವಾಗ ಸಂಘದ ಸಂಪರ್ಕಕ್ಕೆ ಬಂದು ಸಂಘದ ಲಾಭ ಪಡೆದುಕೊಂಡಿದ್ದಾರೆ ಎಂಬುದನ್ನು ನೆನಪಿಸಿಕೊಂಡರು. ಅಲ್ಲದೆ ಸರ್ಕಾರವು ಇಂತಹ ಒಳ್ಳೆಯ ಕೆಲಸಗಳಿಗೆ ಸದಾ ಬೆಂಬಲ ನೀಡುತ್ತದೆ ಎಂದರು.

ಅನ್ನಪೂರ್ಣ ಪ್ರಕಾಶನದ ಮುಖ್ಯಸ್ಥರಾದ ಸಿರಿಗೇರಿ ಯರಿಸ್ವಾಮಿಯವರು ಮಾತನಾಡಿ ದೆಹಲಿ ಕನ್ನಡ ಸಂಘದ ಬಗ್ಗೆ ತಮಗೆ ಮೇಲೆ ಮೊದಲಿನಿಂದಲೂ ಬಹಳ ಅಭಿಮಾನವಿದೆ. ದೆಹಲಿ ಕನ್ನಡಿಗರ ಪರವಾಗಿ ಯಾವುದೇ ಪುಸ್ತಕ ಪ್ರಕಾಶನಗಳಿದ್ದರೂ ಅದನ್ನು ನಾನು ಉಚಿತವಾಗಿ ಮಾಡಿ ಕೊಡುತ್ತೇನೆ. ಸಂಘದ ಪರವಾಗಿ ಯಾವುದೇ ಮುದ್ರಣ ಕೆಲಸಗಳಿದ್ದರೂ ಸಹ ಉಚಿತವಾಗಿ ಮಾಡಿಕೊಡಲಾಗುವುದು ಎಂದರು. ದೆಹಲಿ ಕನ್ನಡ ಸಂಘ ಕರ್ನಾಟಕ ಸರ್ಕಾರ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿಗೆ ಮನವಿ ಮಾಡಿಕೊಂಡು ಪರಿಷತ್ತಿನ ದೆಹಲಿ ಶಾಖೆಯನ್ನು ಸಹ ಪ್ರಾರಂಭಿಸಬಹುದು ಎಂದು ಸಲಹೆ ನೀಡಿದರು.







ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಕರ್ನಾಟಕ ಸಂಘದ ಅಧ್ಯಕ್ಷರಾದ ಸಿ.ಎಂ. ನಾಗರಾಜ ಅವರು ಮಾತನಾಡಿ ದೆಹಲಿ ಕರ್ನಾಟಕ ಸಂಘ ಕನ್ನಡ ಪರ ಕೆಲಸಗಳಿಗೆ ಸದಾ ಮುಂದೆ ಇರುತ್ತದೆ. ದೆಹಲಿಗೆ ಬರುವ ಕನ್ನಡಿಗರಿಗೆ ಮುಖ್ಯವಾಗಿ ವಿದ್ಯಾರ್ಥಿಗಳಿಗೆ ಒಂದು ವಸತಿ ಸೌಲಭ್ಯವನ್ನು ಒದಗಿಸಬೇಕು, ಅದಕ್ಕೆ ಕರ್ನಾಟಕ ಸರ್ಕಾರದಿಂದ ಧನ ಸಹಾಯಕ್ಕೆ ಮನವಿ ಮಾಡುತ್ತಾ ಸಂಘದಿಂದಲೂ ಸಹ ಹಣಕಾಸಿನ ನೆರವು ಮಾಡಿಕೊಡಲಾಗುವುದು ಎಂದು ತಿಳಿಸಿದರು.

ರಾಜ್ಯೋತ್ಸವ ಆಚರಣೆಯ ಅಂಗವಾಗಿ ಹಮ್ಮಿಕೊಂಡಿದ್ದ ಕವಿಗೋಷ್ಠಿ ಕಾರ್ಯಕ್ರಮದಲ್ಲಿ ದೆಹಲಿ ಎನ್.ಸಿ.ಆರ್ ಕನ್ನಡಿಗರಾದ ಡಾ. ಎಸ್. ಎಲ್. ಭಂಡಾರ್ಕರ್, ಶ್ರೀಮತಿ ಪ್ರೇಮಲತಾ, ಶ್ರೀ ಅರವಿಂದ ಬಿಜೈ ಮಾಸ್ಟರ್ ಅಭಿಷೇಕ್ ಉಬಾಳೆ, ಹಾಗೂ ಕರ್ನಾಟಕದಿಂದ ಆಗಮಿಸಿದ್ದ ಡಾ. ಡಿ.ಎಸ್.ವೀರಯ್ಯ, ಡಾ. ಸತೀಶ್ ಹೊಸಮನಿ, ಶ್ರೀ ಬಿಂಡಿಗನವಿಲೆ ಭಗವಾನ್, ಶ್ರೀ ವಿ.ಟಿ. ರಾಮಕೃಷ್ಣಯ್ಯ ಭಾಗವಹಿಸಿ ಸ್ವರಚಿತ ಕವನಗಳನ್ನು ಪ್ರಸ್ತುತ ಪಡಿಸಿ ಕವಿಗೋಷ್ಠಿಯನ್ನು ಯಶಸ್ವಿಗೊಳಿಸಿದರು. ಕವಿಗೋಷ್ಠಿಯ ಅಧ್ಯಕ್ಷತೆಯನ್ನು ಶ್ರೀಮತಿ ರತ್ನಾ ಕಾಳೇಗೌಡರವರು ವಹಿಸಿದ್ದರು.

ಅನಂತರ ದೆಹಲಿ ಕನ್ನಡಿಗರ ಸಮಸ್ಯೆಗಳು ಎಂಬ ಕುರಿತ ವಿಚಾರ ಗೋಷ್ಠಿಯಲ್ಲಿ ದೆಹಲಿಯ ಸ್ಥಳೀಯರಾದ ಅರುಣ್ ಕುಮಾರ್, ಯಲ್ಲಾಲಿಂಗ ಕೊಪ್ಪದ, ಗುರುಗ್ರಾಮದ ಕನ್ನಡಿಗರಾದ ಶ್ರೀ ಸಾಬುದರ್ಗ, ಶ್ರೀ ಎಂ. ಕೃಷ್ಣಪ್ಪ, ಶ್ರೀ ಚಂದ್ರ ಶೇಖರ್ ಜೋಳದರಾಶಿ, ಶ್ರೀ ಲಕ್ಷ್ಮಣ್ ಕಟ್ಟೀಮನಿ ಅವರು ದೆಹಲಿಯ ಹೊರನಾಡ ಕನ್ನಡಿಗರ ವಿವಿಧ ಸಮಸ್ಯೆಗಳ ಕುರಿತು ಮಾತನಾಡಿದರು.

ಮತ್ತೊಂದು ಸಂಕೀರ್ಣ ಗೋಷ್ಠಿ 'ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ' ವಿಷಯದ ಕುರಿತು ದೆಹಲಿಯ ಪ್ರತಿಷ್ಠಿತ ಜೆ.ಎನ್.ಯು. ವಿಶ್ವ ವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾದ ಪ್ರೊ. ವಿಶ್ವನಾಥ್ ಅವರಿಂದ ಅರ್ಥಪೂರ್ಣವಾಗಿ ನೆರವೇರಿತು.

ಪ್ರಧಾನ ಕಾರ್ಯದರ್ಶಿಗಳಾದ ರೇಣುಕುಮಾರ್ ಮಾತನಾಡಿ ಸಂಘದ ಸಾಧನೆ ಮತ್ತು ಕನ್ನಡಿಗರ ಬಗ್ಗೆ ತಿಳಿಸಿಕೊಟ್ಟರು. ಸುಮಾರು ಮೂರು ಘಂಟೆಗಳ ಕಾರ್ಯಕ್ರಮವು ಬಹಳ ಚೆನ್ನಾಗಿ ಮೂಡಿ ಬಂದು ಎಲ್ಲ ದೆಹಲಿ ಕನ್ನಡಿಗರಿಗೆ ಒಂದು ಸಾಹಿತ್ಯಕ ವಾತಾವರಣವನ್ನು ಒದಗಿಸಿಕೊಟ್ಟಿತು. ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರುಗಳಾದ ಶ್ರೀ ಕೆ.ಎಸ್. ಮೂರ್ತಿಯವರು ಕಾರ್ಯಕ್ರಮವನ್ನು ನಿರೂಪಿಸಿದರೆ, ಶ್ರೀ ಶಿವಪ್ಪ ಎಂ ಅವರು ವಂದನೆ ಸಲ್ಲಿಸಿದರು. ಕಾರ್ಯಕ್ರಮದಲ್ಲಿ ಮಕ್ಕಳು, ಮಹಿಳೆಯರು ಹಿರಿಯರು, ಪ್ರಾಧ್ಯಾಪಕರು ಸೇರಿದಂತೆ ಹೆಚ್ಚಿನ ಸಂಖ್ಯೆಯ ಕನ್ನಡ ಅಭಿಮಾನಿಗಳು ಪಾಲ್ಗೊಂಡು ಯಶಸ್ವಿಗೊಳಿಸಿದರು.

## ದೆಹಲಿ ಎನ್.ಸಿ.ಆರ್ ನಲ್ಲಿ ನಡೆಯುವ ಕನ್ನಡ ಚಟುವಟಿಕೆಗಳಿಗೆ ಸದಾ ನಮ್ಮ ಸಹಕಾರವಿದೆ 'ಸಿ.ಎಂ. ನಾಗರಾಜ'

# ಗುರುಗಾಂವ್ ಕನ್ನಡ ಸಂಘ(ರಿ) ಕರ್ನಾಟಕ ರಾಜ್ಯೋತ್ಸವ ಸಂಭ್ರಮ 2021



ಗುರುಗಾಂವ್ ಕನ್ನಡ ಸಂಘವು ದೆಹಲಿ ಕರ್ನಾಟಕ ಸಂಘದ ಸಹಯೋಗದೊಂದಿಗೆ ಹಾಗೂ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಕಾರದಲ್ಲಿ ದಿನಾಂಕ 21.11.2021 ರಂದು ಭಾನುವಾರ ಗುರುಗಾಂವ್ ನ ಎಕ್ಸೆಲ್ಸಿಯರ್ ಅಮೇರಿಕನ್ ಶಾಲೆಯಲ್ಲಿ ಆಯೋಜಿಸಿದ್ದ ಕರ್ನಾಟಕ ರಾಜ್ಯೋತ್ಸವ ಸಂಭ್ರಮಾಚರಣೆಯನ್ನು ಉದ್ಘಾಟಿಸಿ ಮಾತನಾಡಿದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಸಿ.ಎಂ. ನಾಗರಾಜ ಅವರು ದೆಹಲಿ ಕರ್ನಾಟಕ ಸಂಘವು ರಾಷ್ಟ್ರ ರಾಜಧಾನಿ ಪ್ರದೇಶದಲ್ಲಿ ಕನ್ನಡ ಸಂಘ ಸಂಸ್ಥೆಗಳು ಹಮ್ಮಿಕೊಳ್ಳುವ ಅರ್ಥಪೂರ್ಣ ಕನ್ನಡ ಚಟುವಟಿಕೆಗಳಿಗೆ ಸದಾ ಕಾಲ ಪ್ರೋತ್ಸಾಹ ನೀಡುತ್ತದೆ ಎಂದು ಹೇಳಿದರು.

ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿದ್ದ ನವದೆಹಲಿಯ ನ್ಯಾಷನಲ್ ಸೆಕ್ಯೂರಿಟಿ ಕೌನ್ಸಿಲ್ ಸೆಕ್ರೆಟರಿಯೇಟ್‌ನಲ್ಲಿ ಉಪ ಕಾರ್ಯದರ್ಶಿ ಯಾಗಿರುವ ಕು. ಶ್ವೇತಾ ರಾವ್ ಬಿ. ಅವರು ಮಾತನಾಡಿ ಗುರುಗಾಂವ್ ಕನ್ನಡ ಸಂಘ ನಡೆಸುತ್ತಿರುವ ಸಾಂಸ್ಕೃತಿಕ ಕಾರ್ಯಕ್ರಮಗಳು ಕನ್ನಡದ ಬೆಳವಣಿಗೆಗೆ ನೆರವಾಗುತ್ತವೆ ಮತ್ತು ಕನ್ನಡ ಕಲಿಯಲು ಮಕ್ಕಳಿಗೂ ಸ್ಫೂರ್ತಿಯಾಗುತ್ತವೆ ಎಂದು ಅಭಿಪ್ರಾಯಪಟ್ಟರು.

ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಆರ್. ರೇಣುಕುಮಾರ್ ಕನ್ನಡವನ್ನು ಉಳಿಸುವ ಎಲ್ಲರೂ ಕೆಲಸವನ್ನು ಮಾಡುತ್ತಿರುವುದು ಸಂತೋಷ ತಂದಿದೆ ಎಂದರು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಗುರುಗಾಂವ್ ಕನ್ನಡ ಸಂಘದ ಅಧ್ಯಕ್ಷ ಶ್ರೀ ಶಾಂತಕುಮಾರ ನಿಂಬಾಳ ಅವರು ಕರ್ನಾಟಕ ಏಕೀಕರಣ ಆದ ನಂತರ ಪ್ರತಿ ವರ್ಷ ರಾಜ್ಯೋತ್ಸವವನ್ನು ಆಚರಿಸುತ್ತಾ ಕನ್ನಡ ಮತ್ತು ಕರ್ನಾಟಕಗಳ ಬಗ್ಗೆ ಕನ್ನಡಿಗರಲ್ಲಿ ಅಭಿಮಾನ ಮೂಡಿಸುವ ಕೆಲಸವನ್ನು ಮಾಡಿಕೊಂಡು ಬರಲಾಗುತ್ತಿದೆ ಈ ನಿಟ್ಟಿನಲ್ಲಿ ಗುರುಗಾಂವ್ ಸಂಘದ ಈ ಪ್ರಯತ್ನಕ್ಕೆ ನಿಮ್ಮ ಸಹಕಾರ ಇರಲೆಂದು ಕೋರಿದರು.

ಪ್ರಧಾನ ಕಾರ್ಯದರ್ಶಿ ಶ್ರೀ ಸಂತೋಷ ಜೆ ಅವರು ಗುರುಗಾಂವ್ ಕನ್ನಡ ಸಂಘಕ್ಕೆ ನಿಸ್ವಾರ್ಥವಾಗಿ ಅಂದಿನಿಂದ ಇಂದಿನವರೆಗೂ ತನು ಮನ ಧನದೊಂದಿಗೆ ಸಹಕರಿಸುತ್ತಾ ಯುವ ಜನತೆಗೆ ಮಾರ್ಗದರ್ಶನ ನೀಡುತ್ತಾ ಬರುತ್ತಿರುವ ಹಿರಿಯ ಕನ್ನಡಿಗರಾದ ಶ್ರೀ ಪ್ರಸನ್ನ ಬಂಟ್ವಾಳ ಮತ್ತು ಶ್ರೀ ಡಿ.ವಿ. ಶ್ರೀನಿವಾಸ ಮೂರ್ತಿ ಇವರಿಗೆ ಮೊಟ್ಟ ಮೊದಲ ಬಾರಿಗೆ ಗುರುಗಾಂವ್ ಕನ್ನಡ ಸಂಘದ ವತಿಯಿಂದ 'ಗುರುಗಾಂವ್ ಕನ್ನಡ ಸೇವಾ ಪ್ರಶಸ್ತಿ'ಯನ್ನು ನೀಡಿ ಗೌರವಿಸಬೇಕೆಂಬ ನಿಲುವನ್ನು ತಮ್ಮ ಕಾರ್ಯಕಾರಿ ಸಮಿತಿ ತೆಗೆದುಕೊಂಡ ನಿರ್ಧಾರದಂತೆ ಇಂದಿನ ಕಾರ್ಯಕ್ರಮದಲ್ಲಿ ಈ ಇಬ್ಬರು ಮಹನೀಯರನ್ನು ಗುರುತಿಸಿ ಸನ್ಮಾನಿಸಲಾಗುತ್ತಿದೆ ಎಂದರು.





ಈ ಕಾರ್ಯಕ್ರಮದ ಕೇಂದ್ರ ಬಿಂದು ಪ್ರೊ. ಕೃಷ್ಣೇ ಗೌಡರು ಮತ್ತು ಅಂಜಲಿ ಸ್ಕೂಲ್ ಆಫ್ ಡಾನ್ಸ್ ಅಂಡ್ ಮ್ಯೂಸಿಕ್ ತಂಡದ ಕಲಾವಿದರಾಗಿದ್ದರು. ಇವರೆಲ್ಲರ ಸಾನಿಧ್ಯದಲ್ಲಿ ಗುರುಗಾಂವ್ ಕನ್ನಡ ಸಂಘಕ್ಕೆ ಗಣನೀಯ ಸೇವೆ ಸಲ್ಲಿಸಿದ ಶ್ರೀ ಪ್ರಸನ್ನ ಬಂಟ್ವಾಳ ಮತ್ತು ಶ್ರೀ ಡಿ.ವಿ.ಎಸ್. ಮೂರ್ತಿ ಇವರಿಗೆ ಗುರುಗಾಂವ್ ಕನ್ನಡ ಸೇವಾ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಇವರುಗಳ ಕೊಡುಗೆ ಶ್ಲಾಘನೀಯ ಹಾಗೂ ಗುರುಗಾಂವ್ ಕನ್ನಡ ಸೇವಾ ಪ್ರಶಸ್ತಿ ನೀಡಿ ಗೌರವಿಸಬೇಕೆಂದು ಕಾರ್ಯಕಾರಿ ಸಮಿತಿ ತೆಗೆದುಕೊಂಡ ನಿರ್ಧಾರ ಅಭಿನಂದನಾರ್ಹ.

ಇದೇ ಸಂದರ್ಭದಲ್ಲಿ 10ನೇ ಮತ್ತು 12ನೇ ತರಗತಿಯಲ್ಲಿ 90% ಕ್ಕೂ ಹೆಚ್ಚು ಅಂಕ ಗಳಿಸಿದ ಗುರುಗಾಂವ್ ಕನ್ನಡ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪುರಸ್ಕಾರ ನೀಡಿ ಅಭಿನಂದಿಸಲಾಯಿತು.

ಗುರುಗಾಂವ್ ಸ್ಥಳೀಯ ಕಲಾವಿದರಿಂದ ಮತ್ತು ಗುರುಗಾಂವ್ ಕನ್ನಡ ಕಲಿಕಾ ಕೇಂದ್ರದ ಮಕ್ಕಳಿಂದ ಪ್ರಸ್ತುತಿಗೊಂಡ ಎಲ್ಲ ಸಾಂಸ್ಕೃತಿಕ ಕಾರ್ಯಕ್ರಮಗಳು ತುಂಬಾ ಚೆನ್ನಾಗಿ ಮೂಡಿ ಬಂದವು. ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ದೆಹಲಿ ಎನ್.ಸಿ.ಆರ್. ಕನ್ನಡಿಗರೆಲ್ಲ ಸೇರಿ ನಾಡಗೀತೆಯನ್ನು ಹಾಡಿದರು, ನಂತರ ದೆಹಲಿ ಕರ್ನಾಟಕ ಸಂಘಕ್ಕೆ ನೂತನವಾಗಿ ಆಯ್ಕೆಯಾಗಿ ಬಂದ ಎಲ್ಲ ಪದಾಧಿಕಾರಿಗಳಿಗೆ ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರುಗಳಿಗೆ ಹೂಗುಚ್ಛ ನೀಡಿ ಅಭಿನಂದಿಸಲಾಯಿತು.



ಕರ್ನಾಟಕ ರತ್ನ ದಿವಂಗತ ಪುನೀತ್ ರಾಜಕುಮಾರ್ ಅವರಿಗೆ ಸ್ಥಳೀಯ ಕಲಾವಿದರಿಂದ ನೃತ್ಯ ನಮನ ಅರ್ಪಿಸಲಾಯಿತು.

ಹೀಗೆ ಸುಮಾರು ನಾಲ್ಕು ಗಂಟೆಗೂ ಹೆಚ್ಚು ಹೊತ್ತು ನಡೆದ ಕಾರ್ಯಕ್ರಮ ಮುಗಿದಾಗ ಸಮಯ ಹೋಗಿದ್ದು ತಿಳಿಯಲೇ ಇಲ್ಲ ಎನ್ನುವಂತಿತ್ತು. ಕರ್ನಾಟಕದಿಂದ ಬಂದಿದ್ದ ಕಲಾವಿದರ ಕಾರ್ಯಕ್ರಮವನ್ನು ನೋಡಲು ಅಷ್ಟೊತ್ತು ಕಾದು ಕುಳಿತಿದ್ದ ಕನ್ನಡಿಗರಿಗೆ ಪ್ರೊ. ಕೃಷ್ಣೇ ಗೌಡ್ರು ಹಾಗೂ ಅಂಜಲಿ ಸ್ಕೂಲ್ ಆಫ್ ಡಾನ್ಸ್ ಅಂಡ್ ಮ್ಯೂಸಿಕ್ ತಂಡದ ಕಲಾವಿದರಿಂದ ಮೂಡಿ ಬಂದ ವೈವಿಧ್ಯಮಯ ಕಾರ್ಯಕ್ರಮಗಳು ಕನ್ನಡಿಗರ ಮನರಂಜಿಸುತ್ತಿದ್ದವು.

ಈ ಕಾರ್ಯಕ್ರಮಕ್ಕೆ ಗುರುಗ್ರಾಮ, ದೆಹಲಿ, ನೋಯ್ಡಾ, ಮಾನೇಸರ್, ಫರಿದಾಬಾದ್ ಮತ್ತು ಭಿವಾಡಿ ಹೀಗೆ ದೂರದೂರದಿಂದ ಬಂದಿದ್ದ ಕನ್ನಡಿಗರಿಂದ ಸಭಾಂಗಣ ತುಂಬಿ ತುಳುಕಿತ್ತು.

ಕನ್ನಡಿಗರೆಲ್ಲ ಸಂತೋಷದಿಂದ ಸಂಭ್ರಮಿಸುತ್ತಿದ್ದ ಕಾರ್ಯಕ್ರಮ ಕೊನೆಯ ಹಂತಕ್ಕೆ ಬಂದಿದ್ದು ತಿಳಿಯಲೇ ಇಲ್ಲ. ಸಮಯ ರಾತ್ರಿ 9:30 ಆಗಿತ್ತು, ಪ್ರೊ. ಕೃಷ್ಣೇಗೌಡರ ಹಾಸ್ಯಕ್ಕೆ ನಕ್ಕು ನಕ್ಕು ಆಗಲೇ ಎಲ್ಲರ ಹೊಟ್ಟೆ ಹಸಿವಿನಿಂದ ತಳಮಳ ಅನ್ನೋದಕ್ಕೆ ಶುರುವಾಗಿತ್ತು, ಅಷ್ಟರಲ್ಲೇ ಎಲ್ಲ ಸಿದ್ಧತೆಯೊಂದಿಗೆ ಘಮಘಮಿಸುತ್ತಿದ್ದ ಬಿಸಿ ಬಿಸಿ ಊಟ ತನ್ನ ಕಡೆ ಕರೆಯುತ್ತಿತ್ತು. ಸ್ಥಳೀಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಶ್ರೀಮತಿ ಸುಮತಿ ಸಾಯಿಪ್ರಸಾದ್ ನಿರೂಪಣೆ ಮಾಡಿದರೆ ಕಾರ್ಯಕ್ರಮಕ್ಕೆ ಸ್ವಾಗತ ಕೋರಿದವರು ಉಪಾಧ್ಯಕ್ಷರಾದ ಶ್ರೀ ರಾಜಕುಮಾರ ನೀಲೂರ. ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಸಂತೋಷ್.ಜೆ ವಂದನಾರ್ಪಣೆ ಮಾಡಿದರು.

ಈ ಕರ್ನಾಟಕ ರಾಜ್ಯೋತ್ಸವದ ಸಂಭ್ರಮದಲ್ಲಿ ಭಾಗಿಯಾಗಿದ್ದ ಕನ್ನಡಿಗರೆಲ್ಲ ಕಾರ್ಯಕ್ರಮವನ್ನು ವೀಕ್ಷಿಸಿ, ಆನಂದಿಸಿ ಯಶಸ್ವಿಗೊಳಿಸಿ ಹೋಗುವಾಗ ಮೆಚ್ಚುಗೆಯನ್ನು ವ್ಯಕ್ತಪಡಿಸಿ ಇಂತಹ ಅದ್ಭುತವಾದ ಕಾರ್ಯಕ್ರಮವನ್ನು ತಂದು ನಮಗೆಲ್ಲ ಆನಂದಪಡಿಸಿದ ಎಲ್ಲರಿಗೂ ಅನಂತ ಅನಂತ ಧನ್ಯವಾದಗಳು ಎಂದು ಹೇಳಿ ಹೋದದ್ದು ಎಲ್ಲರಲ್ಲೂ ತುಂಬಾ ಖುಷಿತಂದಿತು.

ಗುರುಗಾಂವ್ ಕನ್ನಡ ಸಂಘಕ್ಕೆ ಹೊಸದಾಗಿ ಆಯ್ಕೆಯಾಗಿ ಬಂದಿರುವ ಎಲ್ಲ ಪದಾಧಿಕಾರಿಗಳು ಮತ್ತು ಸದಸ್ಯರು ಮಹಾಮಾರಿ ಕೋರೊನಾದ ನಂತರ ಇಂತಹದ್ದೊಂದು ಕಾರ್ಯಕ್ರಮವನ್ನು ಆಯೋಜಿಸಿ ಯಶಸ್ವಿಗೊಳಿಸಿದ್ದು ಎಲ್ಲರ ಆತ್ಮವಿಶ್ವಾಸವನ್ನು ಹೆಚ್ಚಿಸಿದಂತ್ತಾಗಿದೆ. ಈ ಕಾರ್ಯಕ್ರಮದ ಯಶಸ್ವಿಯಾಗಲು ಹಿಂದೆ ನಿಂತು ಸಹಕರಿಸಿದ ಎಲ್ಲ ಕನ್ನಡ ಸೇವಕರಿಗೆ ಧನ್ಯವಾದಗಳು. ◘

***ತಿಮ್ಮಪ್ಪ ಜಿ.ಆರ್,*** ಗುರುಗ್ರಾಮ ಕನ್ನಡಿಗ

# ದೆಹಲಿಯಲ್ಲೂ ಕನ್ನಡಿಗರು ಈ ಹಿಂದಿನಿಂದಲೂ ಕನ್ನಡನಾಡು ನುಡಿಯ ಸೇವೆಯಲ್ಲಿ ನಿರತರಾಗಿದ್ದಾರೆ : ಆರ್. ರೇಣುಕುಮಾರ

ರಾಷ್ಟ್ರದ ರಾಜಧಾನಿ ದೆಹಲಿಯಲ್ಲಿನ ದೆಹಲಿ ಕರ್ನಾಟಕ ಸಂಘ ಹಾಗೂ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಮೂಲಕ ಕನ್ನಡಿಗರೆಲ್ಲರೂ ಒಂದೆಡೆ ಸೇರಿ, ಕನ್ನಡ ನಾಡಿನ ಸಂಪದ್ಭರಿತ ಸಂಸ್ಕೃತಿಯನ್ನು ಉಳಿಸಿ ಬೆಳಸಿಕೊಂಡು ಹೋಗುವ ನಿಟ್ಟಿನಲ್ಲಿ ಕಾರ್ಯಮಾಡಲಾಗುತ್ತಿದೆ ಎಂದು ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಆರ್. ರೇಣುಕುಮಾರ ಹೇಳಿದರು. ಅವರು ಹೊಸದುರ್ಗ ತಾಲ್ಲೂಕಿನ ಸಾಣೇಹಳ್ಳಿ ತರಳಬಾಳು ಶಾಖಾಮಠದಲ್ಲಿ ಗುರುವಾರ ನವೆಂಬರ್ 4 ರಂದು ನಡೆದ ಶಿವಸಂಚಾರ ನಾಟಕೋತ್ಸವ ಬೆಳ್ಳಿಹಬ್ಬ ಕಾರ್ಯಕ್ರಮದ ಸಮಾರಂಭದಲ್ಲಿ ಹೊರನಾಡ ಕನ್ನಡಿಗರ ಪ್ರತಿನಿಧಿಯಾಗಿ ಭಾಗವಹಿಸಿ ಮಾತನಾಡಿದರು.



ದೆಹಲಿಯಲ್ಲಿನ ಕನ್ನಡದ ಎರಡು ಪ್ರಮುಖ ಸಂಸ್ಥೆಗಳಲ್ಲಿ ಒಂದಾದ ದೆಹಲಿ ಕರ್ನಾಟಕ ಸಂಘ ಸಾಂಸ್ಕೃತಿಕ ಹಿರಿಮೆ ಗರಿಮೆ ಪಸರಿಸುವ ಕಾರ್ಯ ಮಾಡುತ್ತಿದ್ದರೆ, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಮೂಲಕ ಅಕ್ಷರ ಬೀಜ ಬಿತ್ತುವ ಪ್ರಮುಖ ಕಾರ್ಯ ನಡೆಯುತ್ತಿದೆ. ದೆಹಲಿ ಕರ್ನಾಟಕ ಸಂಘದಲ್ಲಿ ನಾಟಕೋತ್ಸವ, ನೃತ್ಯ ಹಾಡು ಸೇರಿದಂತೆ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.

ಸಾಣೇಹಳ್ಳಿ ಶ್ರೀಗಳು ಸಾಧಕರು. ಅಕ್ಷರ ಬಾರದವರಿಗೆ ದೃಶ್ಯಮಾಧ್ಯಮವೂ ಆದ ನಾಟಕಗಳ ಮೂಲಕ ಜನಸಾಮಾನ್ಯರಿಗೆ ಅರಿವಿನ ಆಹಾರ ನೀಡುವ ಕಾರ್ಯ ಸಾಣೇಹಳ್ಳಿ ಕ್ಷೇತ್ರ ಮಾಡುತ್ತಿದೆ. ದೇಶ–ವಿದೇಶಗಳಲ್ಲಿಯೂ ಸಾಣೇಹಳ್ಳಿ ಶಿವಸಂಚಾರ ತಂಡ ತನ್ನ ನಾಟಕ ಪ್ರದರ್ಶನ ನೀಡುತ್ತಿರುವುದು ಹೆಮ್ಮೆಯ ವಿಷಯ. ಪ್ರೇರಣಾ ಶಕ್ತಿ ಶ್ರೀಗಳು. ಸಮಾಜ ಪರಿವರ್ತನೆ, ಮಾನವ ಜೀವನದ ಮೇಲೆ ರಂಗಭೂಮಿ ಬೀರುವ ಪರಿಣಾಮ ಇಂದಿನ ಸಾಣೇಹಳ್ಳಿಯಲ್ಲಿ ನಡೆಯುತ್ತಿರುವ ಕಾರ್ಯಕ್ರಮಗಳೇ ನಿದರ್ಶನ. ಈ ನಿಟ್ಟಿನಲ್ಲಿ ಕಳೆದ 25 ವರ್ಷಗಳಿಂದ ಸಾಣೇಹಳ್ಳಿ ಶಿವಸಂಚಾರ ನಾಟಕ ತಂಡದ ಸಾಧನೆ ಅನನ್ಯ ಹಾಗೂ ಅದ್ಭುತಗಳಲ್ಲೊಂದು.

ದೆಹಲಿ ಕರ್ನಾಟಕ ಸಂಘವು ವಾರ್ಷಿಕೋತ್ಸವ, ನಾಡು–ನುಡಿಯ ಕಾರ್ಯಕ್ರಮ ಆಯೋಜಿಸುತ್ತಾ ಬರುತ್ತಿದೆ. ಕೊರೊನಾ ಸಂಕಷ್ಟ ಕಾಲದಲ್ಲಿ ಕಳೆದೆರಡು ವರ್ಷಗಳಿಂದ ಈ ಕೆಲಸ ನಿಂತಿದೆ. ಕೊರೊನಾ ಕರಿ ಛಾಯೆ ಕಳೆದು ಇದೆಲ್ಲವು ತಿಳಿಯಾದ ನಂತರ ಹೊರನಾಡಿನಲ್ಲಿ ಒಳನಾಡ ಧ್ವನಿ ರಿಂಗಣಿಸಲು ಅಗತ್ಯ ರೂಪು ರೇಷೆ ಸಿದ್ಧಪಡಿಸಿಕೊಂಡು ಕಾರ್ಯಕ್ರಮಗಳಿಗೆ ನಾಂದಿಯಾಡಲಿದ್ದೇವೆ.

2008ರ ಅವಧಿಯಲ್ಲಿ ತಾವು ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ಕಾರ್ಯದರ್ಶಿಯಾಗಿದ್ದ ಸಂದರ್ಭದಲ್ಲಿ ಸಾಣೇಹಳ್ಳಿ ಶಿವಸಂಚಾರ ನಾಟಕ ತಂಡ ಆಹ್ವಾನಿಸುವ ಒತ್ತಾಯ ಮತ್ತು ಒತ್ತಾಸೆ ದೆಹಲಿ ಕನ್ನಡಿಗರದ್ದಾಗಿತ್ತು, ಕಾರಣಾಂತರಗಳಿಂದ ಅದು ಸಾಧ್ಯವಾಗಿರಲಿಲ್ಲ. ಮುಂಬರುವ ದಿನಗಳಲ್ಲಿ ದೆಹಲಿ ಕರ್ನಾಟಕ ಸಂಘದಲ್ಲಿ ಸಾಣೇಹಳ್ಳಿ ನಾಟಕ ತಂಡದಿಂದ ನಾಟಕ ಪ್ರದರ್ಶನ ಏರ್ಪಡಿಸಲಾಗುವುದು ಎಂದರು. ಸಾಣೇಹಳ್ಳಿ ಶ್ರೀಗಳು ಫಲತಾಂಬೂಲ ನೀಡಿ ಆಶೀರ್ವದಿಸಿದರು.

ಪಂಡಿತರಾಧ್ಯ ಶಿವಚಾರ್ಯ ಸ್ವಾಮೀಜಿಯವರು ಕಾರ್ಯಕ್ರಮದ ಸಾನಿಧ್ಯವಹಿಸಿ ಆಶೀರ್ವದಿಸಿದರು. ಮೋಟಗಿ ಮಠದ ಪ್ರಭು ಚನ್ನಬಸವಸ್ವಾಮೀಜಿ ಹಾಗೂ ಗಣ್ಯಾತಿಗಣ್ಯರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ◘

***ಹರಿಪ್ರಿಯ***

## ನೀತಿ ಆಯೋಗದ ಕಾರ್ಯದಳಕ್ಕೆ ಡಾ. ಅವನೀಂದ್ರನಾಥ್ ರಾವ್



ಕೇಂದ್ರ ಸರಕಾರದ ಮಂತ್ರಾಲಯಗಳ ವಿವಿಧ ಗ್ರಂಥಾಲಯಗಳ ಬಲವರ್ಧನೆಗಾಗಿ ನೀತಿ ಆಯೋಗ ಕಾರ್ಯದಳವನ್ನು ರಚಿಸಿದೆ. ಇದರ ಸದಸ್ಯರಾಗಿ ಡಾ. ಅವನೀಂದ್ರನಾಥ್ ರಾವ್ ಅವರನ್ನು ನೇಮಕ ಮಾಡಲಾಗಿದೆ. ಡಾ. ರಾವ್ ಈಚೆಗೆ ದೆಹಲಿಯ ಕೇಂದ್ರ ಸಚಿವಾಲಯ ಗ್ರಂಥಾಲಯದಲ್ಲಿ ಗ್ರಂಥಾಲಯ ಮತ್ತು ಮಾಹಿತಿ ಅಧಿಕಾರಿಯಾಗಿ ಪದೋನ್ನತಿ ಪಡೆದಿದ್ದರು. ಅವರು ಈ ಹಿಂದೆ ಸಚಿವಾಲಯ ಗ್ರಂಥಾಲಯಗಳ ಕುರಿತು ಸಂಶೋಧನೆಯನ್ನೂ ನಡೆಸಿದ್ದರು. ಡಾ. ಅವನೀಂದ್ರನಾಥ್ ರಾವ್ ಅವರು ದೆಹಲಿ ಕರ್ನಾಟಕ ಸಂಘದಲ್ಲಿ ಉಪಾಧ್ಯಕ್ಷರು ಮತ್ತು ಕೋಶಾಧಿಕಾರಿಯಾಗಿ ಈ ಹಿಂದೆ ಕಾರ್ಯ ನಿರ್ವಹಿಸಿದ್ದಾರೆ.

# ೬೬ನೇ ಕರ್ನಾಟಕ ರಾಜ್ಯೋತ್ಸವ ಸಂಭ್ರಮ ಹಾಗೂ ವಿವಿಧ ನವೀಕೃತ ಕೊಠಡಿಗಳ ಉದ್ಘಾಟನೆ

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯು ಕರ್ನಾಟಕ ರಾಜ್ಯೋತ್ಸವ ಸಂಭ್ರಮ ಹಾಗೂ ವಿವಿಧ ನವೀಕೃತ ಕೊಠಡಿಗಳ ಉದ್ಘಾಟನೆಯನ್ನು 01.11.2021ರಂದು ಆಯೋಜಿಸಲಾಗಿತ್ತು. ಕನ್ನಡ ಶಿಕ್ಷಕರು ಸುಶ್ರಾವ್ಯವಾಗಿ ಪ್ರಸ್ತುತಪಡಿಸಿದ ಕನ್ನಡತಿ ನಮ್ಮೊಡತಿ ಆಶಯ ಗೀತೆಯಿಂದ ಆರಂಭವಾದ ಕಾರ್ಯಕ್ರಮವನ್ನು ಮುಖ್ಯ ಅತಿಥಿಗಳು ಹಾಗೂ ಗಣ್ಯರು ದೀಪ ಬೆಳಗಿಸಿ ಕನ್ನಡ ತಾಯಿ ಭುವನೇಶ್ವರಿಗೆ ಪುಷ್ಪಾರ್ಚನೆಗೈದು ನಾಡಗೀತೆ ಹಾಡುವ ಮೂಲಕ 66ನೇ ಕರ್ನಾಟಕ ರಾಜ್ಯೋತ್ಸವ ಸಂಭ್ರಮಕ್ಕೆ ಚಾಲನೆ ನೀಡಲಾಯಿತು.

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ವಿವಿಧ ನವೀಕೃತ ಕೊಠಡಿಗಳಾದ ಒಳಾಂಗಣ ಕ್ರೀಡಾ ಕೊಠಡಿಯನ್ನು ರಾಷ್ಟ್ರೀಯ ಕ್ರೀಡಾ ತರಬೇತುದಾರರು, ಮಾಜಿ ರಣಜಿ ಆಟಗಾರರಾದ ಶಿವರಾಮ ರೈ, ಸಂಪೂರ್ಣ ಸ್ಮಾರ್ಟ್‌ಕ್ಲಾಸನ್ನು ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷರು, ಜೆ.ಎನ್.ಯು. ಪ್ರಾಧ್ಯಾಪಕರಾದ ಡಾ. ವೆಂಕಟಾಚಲ ಹೆಗಡೆ, ಆಡಳಿತ ವ್ಯವಸ್ಥಾಪನಾ ಸಭಾ ಕೊಠಡಿಯನ್ನು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಸಿ.ಎಂ. ನಾಗರಾಜ ಮತ್ತು ದೈಹಿಕ ಶಿಕ್ಷಣ ಶಿಕ್ಷಕರ ಕೊಠಡಿಯನ್ನು ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಆರ್. ರೇಣುಕುಮಾರ್ ಅವರು ಉದ್ಘಾಟಿಸಿದರು.

ಕಾರ್ಯಕ್ರಮದ ಮುಖ್ಯ ಅತಿಥಿ ದೆಹಲಿ ತಾಂತ್ರಿಕ ವಿಶ್ವವಿದ್ಯಾಲಯ ಅಭಿಕಲ್ಪ ವಿಭಾಗ ಮುಖ್ಯಸ್ಥರಾದ ಡಾ. ರಂಗನಾಥ ಎಂ. ಸಿಂಗಾರಿ ಅವರು ತಮ್ಮ ಕುಟುಂಬದವರ ಮೇಲೆ ಬರೆದಿದ್ದ ಸ್ವರಚಿತ ಕವನವನ್ನು ಬಹಳ ಸೊಗಸಾಗಿ ವರ್ಣಿಸಿದರು. ಗುರುಹಿರಿಯರಿಗೆ ಗೌರವ ತೋರಬೇಕು. ಸಮಯ ಪರಿಪಾಲನೆ, ಶಿಸ್ತು, ಕಾಳಜಿಯೊಂದಿಗೆ ಪ್ರತಿಯೊಬ್ಬರಿಗೂ ಸಮಯವನ್ನು ನೀಡಬೇಕು. ನಮ್ಮ ಮುಂದಿರುವಂತಹ ಎಲ್ಲಾ ಜವಾಬ್ದಾರಿಗಳನ್ನು ಸಮರ್ಪಕವಾಗಿ ನಿರ್ವಹಿಸಬೇಕು. ಸಹನೆ, ಸಂಯಮ ಮನುಷ್ಯನಿಗೆ ಬಹಳ ಅವಶ್ಯಕ. ಪ್ರತಿಯೊಬ್ಬರೂ ತಮ್ಮ ಕೆಲಸವನ್ನು ಸಮರ್ಪಕವಾಗಿ ಮಾಡುತ್ತಾ ಹೋಗಬೇಕು ಫಲ ಪ್ರತಿಫಲಾಪೇಕ್ಷೆಯನ್ನು ಬಯಸಬಾರದು. ಎಂಬುದಕ್ಕೆ ಸೂಕ್ತ ಹೇಳಿಕೆಯನ್ನು ನೀಡುತ್ತಾ ರಾಜ್ಯೋತ್ಸವ ಸಂಭ್ರಮಕ್ಕೆ ಶುಭ ಹಾರೈಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಸಂಸ್ಥೆಯ ಅಧ್ಯಕ್ಷರಾದ ವಸಂತ ಶೆಟ್ಟಿ ಬೆಳ್ಳಾರೆ ಅವರು ಶಾಲೆಯ ಎಲ್ಲಾ ತರಗತಿ ಕೊಠಡಿಗಳನ್ನು ಸ್ಮಾರ್ಟ್‌ಕ್ಲಾಸ್ ಮಾಡುವಲ್ಲಿ ದೆಹಲಿ ಕರ್ನಾಟಕ ಸಂಘದ ಸಹಕಾರವನ್ನು ಶ್ಲಾಘಿಸಿದರು. ಪ್ರತಿಯೊಂದು ತರಗತಿಯೂ ಸ್ಮಾರ್ಟ್‌ಕ್ಲಾಸ್ ಆಗಿರುವುದು ಹೆಮ್ಮೆಯೆನಿಸುತ್ತದೆ. 66ನೇ ಕರ್ನಾಟಕ ರಾಜ್ಯೋತ್ಸವದ ಶುಭಾಶಯಗಳನ್ನು ತಿಳಿಸುತ್ತಾ ಕರ್ನಾಟಕ ರಾಜ್ಯೋತ್ಸವವು ಕನ್ನಡಿಗರಿಗೆ ಎಷ್ಟು ಮಹತ್ವದ್ದು ಎಂಬುದನ್ನು ತಿಳಿಸಿದರು. ಹಾಗೆಯೇ ಸಂಸ್ಥೆಯ ನವೀಕೃತ ಕೊಠಡಿಯ ನಿರ್ಮಾಣ ಮಾಡುವಲ್ಲಿ ಆಡಳಿತ ಮಂಡಳಿಯ





ಜೊತೆಜೊತೆಯಾಗಿ ದುಡಿದಂತಹ ವಾಸ್ತುಶಿಲ್ಪಿ ಉದಯ ಭಟ್, ಜಸ್ವಿಂದರ್ ಸಿಂಗ್ ಹಾಗೂ ಸಲಹೆಗಾರರಾದ ಕೆ.ಎಸ್. ಮೂರ್ತಿ ಅವರನ್ನು ಅಭಿನಂದಿಸಿದರು. ನಿಸ್ವಾರ್ಥವಾಗಿ ಸಂಸ್ಥೆಯಲ್ಲಿ ಹೇಗೆ ಕಾರ್ಯ ನಿರ್ವಹಿಸಬಹುದು ಎಂಬುದನ್ನು ಪ್ರಸ್ತುತ ಆಡಳಿತ ಮಂಡಳಿ ಕನ್ನಡಿಗರ ಮುಂದಿಟ್ಟಿದೆ. ಸಂಸ್ಥೆಯ ಯಾವುದೇ ಹಣವನ್ನು ದುರುಪಯೋಗಪಡಿಸಿಕೊಳ್ಳದೆ ಶಿಸ್ತಿನ ಕೆಲಸ ನಿರ್ವಹಿಸಿದ್ದರ ಪ್ರತಿಫಲವೇ ಈಗಿನ ನವೀಕೃತ ಕೊಠಡಿಗಳು. ಶಿಕ್ಷಕ ವೃಂದದವರಿಗೆ ಸವಲತ್ತುಗಳನ್ನು ನೀಡಿದಲ್ಲಿ ಅವರಿಗೂ ಗುಣಮಟ್ಟದ ಫಲಿತಾಂಶ ನೀಡಿ ಸಂಸ್ಥೆಯನ್ನು ಇನ್ನಷ್ಟು ಉನ್ನತ ಹಂತಕ್ಕೆ ಕೊಂಡೊಯ್ಯಲು ಸಹಕಾರಿಯಾಗುವುದು ಎಂದರು.

ಕನ್ನಡ ಪೋಷಕರಿಂದ ಕನ್ನಡ ಭಾಷೆ ಹೃದಯದ ಭಾಷೆ ಸಮೂಹ ಗಾನ ಹಾಗೂ ಕನ್ನಡ ಶಿಕ್ಷಕರಿಂದ ಶ್ರೀವಿಜಯನ ಕವಿರಾಜಮಾರ್ಗ, ಅಕ್ಕಮಹಾದೇವಿಯ ವಚನ, ಸರ್ವಜ್ಞ ತ್ರಿಪದಿ, ಪುರಂದರದಾಸರ ಕೀರ್ತನೆ, ಡಿವಿಜಿ ಅವರ ಮಂಕುತಿಮ್ಮ, ಅರೆಭಾಷೆ ಕನ್ನಡ ಹಾಡು ಹಾಗೂ ಗೀಗಿ ಪದವು ಕಾರ್ಯಕ್ರಮದ ಸೊಬಗನ್ನು ಮತ್ತಷ್ಟು ಹೆಚ್ಚಿಸಿತು. ಪ್ರಸ್ತುತಗೊಂಡಿತು. ಜೊತೆಗೆ ಶಾಲಾ ಆವರಣದ ಸುತ್ತಲೂ ರಾರಾಜಿಸುತ್ತಿದ್ದ ಕನ್ನಡ ಬಾವುಟ, ಕೊರಳಲ್ಲಿ ಮಿನುಗುತ್ತಿದ್ದ ಕನ್ನಡ ಶಾಲು ಹೊರನಾಡಿನ ಮಣ್ಣಿನಲ್ಲೂ ಕನ್ನಡದ ಕಂಪನ್ನು ಪಸರಿಸುತಿತ್ತು.

ಈ ಸಂದರ್ಭದಲ್ಲಿ ಯು.ಎಸ್. ಲೈಬ್ರೆರಿ ಆಫ್ ಕಾಂಗ್ರೆಸ್, ನವದೆಹಲಿ ಇಲ್ಲಿನ ಗ್ರಂಥಪಾಲಕರಾದ ಡಾ. ಎಡ್ವರ್ಡ್ ಮತಾಯಸ್ ಗೌರವ ಉಪಸ್ಥಿತರಿದ್ದರು. ಸಂಸ್ಥೆಯ ಉಪಾಧ್ಯಕ್ಷರುಗಳಾದ ಎನ್.ಪಿ. ಚಂದ್ರಶೇಖರ, ಟಿ.ಎಂ. ಮೈಲಾರಪ್ಪ ಕಾರ್ಯಕಾರಿ ಸಮಿತಿ ಸದಸ್ಯರಾದ ತಿಮ್ಮಪ್ಪ ಜಿ.ಆರ್., ಮಾಲಿನಿ ಪ್ರಹ್ಲಾದ್, ಜಯಶ್ರೀ ಬಸವರಾಜು, ಸಂತೋಷ ಕೆ.ಕೆ., ಬಿ.ಎಲ್. ಮೋಹನ್ ಹಾಗೂ ಕನ್ನಡ ಶಾಲಾ ಶಿಕ್ಷಕ–ಶಿಕ್ಷಕೇತರ ವೃಂದದವರು, ಕನ್ನಡ ಪೋಷಕರು ಹಾಗೂ ಕನ್ನಡಾಭಿಮಾನಿಗಳು ಉಪಸ್ಥಿತರಿದ್ದರು. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ. ಎಂ.ಎಸ್. ಶಶಿಕುಮಾರ್ ಸ್ವಾಗತಿಸಿದರು. ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಪ್ರಾಂಶುಪಾಲರಾದ ಪ್ರಶಾಂತ ಕುಮಾರ್ ವಂದಿಸಿದರು. ಶಿಕ್ಷಕರಾದ ಎಂ.ಎಸ್. ಲಾವಣ್ಯ ಕಾರ್ಯಕ್ರಮ ನಿರೂಪಿಸಿದರು. ▫

*ಅರವಿಂದ ಬಿಜೈ*


# ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿಯ ವಾರ್ಷಿಕ ಮಹಾಸಭೆ

ದಿನಾಂಕ 21.11.2021 ರಂದು ಜರುಗಿದ ದೆಹಲಿ ಪೋಲಿಸ್ ಕಲ್ಯಾಣ ಸಮಿತಿಯ ವಾರ್ಷಿಕ ಮಹಾಸಭೆಯಲ್ಲಿ ಹಲವಾರು ಸದಸ್ಯರುಗಳ ಸಮ್ಮುಖದಲ್ಲಿ ಸಮಿತಿಯ ಹಿತಾದೃಷ್ಟಿಗಳ ಕುರಿತು ವಿಚಾರ ವಿಮರ್ಶೆಗಳನ್ನು ಚರ್ಚಿಸಲಾಯಿತು ಮತ್ತು ಸಮಿತಿಯ ವಾಡಿಕೆಯಂತೆ 2021–2023 ಸಾಲಿನ ಅವಧಿಯವರೆಗೆ ಹೊಸ ಪದಾಧಿಕಾರಿಗಳನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು

ಅಧ್ಯಕ್ಷರಾಗಿ ಶ್ರೀ ದೇವೇಂದ್ರಪ್ಪ, ಪ್ರಧಾನ ಕಾರ್ಯದರ್ಶಿಯಾಗಿ ಶ್ರೀ ಕೆ.ಬಿ. ಬಸವರಾಜು, ಉಪಾಧ್ಯಕ್ಷರಾಗಿ ಶ್ರೀ ಹೆಚ್.ಕೆ. ಮಂಜುನಾಥ, ಖಜಾಂಚಿಗಳಾಗಿ ಶ್ರೀ ಆರ್. ಮಹಾದೇವ್,



**ದೇವೇಂದ್ರಪ್ಪ**



**ಕೆ.ಬಿ. ಬಸವರಾಜು**

ಜಂಟಿ ಕಾರ್ಯದರ್ಶಿಯಾಗಿ ಶ್ರೀ ಕೆ.ಜೆ. ಮಂಜುನಾಥ ಹಾಗೂ ಎಂಟು ಕಾರ್ಯಕಾರಿ ಸಮಿತಿಯ ಸದಸ್ಯರುಗಳನ್ನು ಆಯ್ಕೆ ಮಾಡಲಾಯಿತು. ▫

*ಗಿರೀಶ್ ಎಸ್*

# ದೆಹಲಿಯ ಜನಕಪುರಿ ಕನ್ನಡ ಕೂಟದ ವತಿಯಿಂದ 66ನೇ ಕರ್ನಾಟಕ ರಾಜ್ಯೋತ್ಸವ



ದೆಹಲಿಯ ಜನಕಪುರಿ ಕನ್ನಡ ಕೂಟದ ವತಿಯಿಂದ 66ನೇ ಕರ್ನಾಟಕ ರಾಜ್ಯೋತ್ಸವವನ್ನು ಭಾನುವಾರ ನ. 28ರಂದು ಜನಕಪುರಿಯ ಡಿಸ್ಟ್ರಿಕ್ಟ್ ಉದ್ಯಾನವನದಲ್ಲಿ ಏರ್ಪಡಿಸಲಾಗಿತ್ತು. ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದ ಅಂಗವಾಗಿ ಸಾಂಸ್ಕೃತಿಕ ಹಾಗೂ ಆಟೋಟ ಸ್ಪರ್ಧೆಗಳನ್ನು ಆಯೋಜನೆ ಮಾಡಲಾಗಿತ್ತು. ತೊಂಭತ್ತೈದರ ಇಳಿ ವಯಸ್ಸಿನ ವೆಂಕಟ ಸುಬ್ಬ ರಾವ್ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದು ಈ ಕಾರ್ಯಕ್ರಮದ ವಿಶೇಷತೆಯಾಗಿತ್ತು. ಅವರು ಸಹ ಅತ್ಯುತ್ಸಾಹದಿಂದ ಹಮ್ಮಿಕೊಂಡಿದ್ದ ಆಟೋಟಗಳಲ್ಲಿ ಭಾಗವಹಿಸಿ ಯುವಕರಿಗೆ ಪ್ರೇರಣೆಯಾದರು. ಭಾಗವಹಿಸಿದವರಿಗೆ ಉತ್ಸಾಹ ತುಂಬಿ ಆಟೋಟಗಳಲ್ಲಿ ಪಾಲ್ಗೊಳ್ಳುವಂತೆ ಸ್ಫೂರ್ತಿ ನೀಡಿದರು.

ವಿವಿಧ ಆಟೋಟ ಸ್ಪರ್ಧೆಗಳಲ್ಲಿ ಜನಕಪುರಿಯ ಸದಸ್ಯರು ಪಾಲ್ಗೊಂಡರು. ಸ್ಪರ್ಧೆಗಳಲ್ಲಿ ಭಾಗವಹಿಸಿ, ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.

ಜನಕಪುರಿ ಕನ್ನಡ ಕೂಟದ ಅಧ್ಯಕ್ಷರಾದ ಎನ್. ಆರ್.ಶ್ರೀನಾಥ ಹಾಗೂ ಕಾರ್ಯದರ್ಶಿಗಳಾದ ಶೇಷಗಿರಿ ನಾಯಕ ಇವರು ಜನಕಪುರಿ ಕನ್ನಡ ಕೂಟದ ಎಲ್ಲಾ ಸದಸ್ಯರಿಗೆ ಆತ್ಮೀಯ ಸ್ವಾಗತ ಕೋರಿದರು. ಬಹು ಅಚ್ಚುಕಟ್ಟಾದ ಕಾರ್ಯಕ್ರಮ ಆಯೋಜನೆ ಮಾಡಿದರು. ಈ ಆಟೋಟ ಸ್ಪರ್ಧೆಗಳಲ್ಲಿ ಎಲ್ಲರೂ ಭಾಗವಹಿಸಿದರು. ಕಾರ್ಯಕ್ರಮದ ನಂತರ ಭೋಜನ ವ್ಯವಸ್ಥೆ ಮಾಡಲಾಗಿತ್ತು. ಅಲ್ಲಿ ಮನೆಯ ಸಂಭ್ರಮದ ವಾತಾವರಣವೇ ಏರ್ಪಟ್ಟಿತ್ತು.

ಕೋವಿಡ್ ಲಾಕ್‌ಡೌನ್ ಹಿನ್ನೆಲೆಯಲ್ಲಿ ಎರಡು ವರ್ಷಗಳ ನಂತರ ನಡೆದ ಕರ್ನಾಟಕ ರಾಜ್ಯೋತ್ಸವದ ನಿಮಿತ್ತ ಹಮ್ಮಿಕೊಂಡಿದ್ದಈ ಕಾರ್ಯಕ್ರಮದಲ್ಲಿ ದೆಹಲಿ ಜನಕಪುರಿ ಕನ್ನಡ ಕೂಟದ ಖಜಾಂಚಿಗಳಾದ ಎಂ.ವಿ.ವೆಂಕಟೇಶ, ಸದಸ್ಯರು ಸೇರಿದಂತೆ ಹಿರಿಯರು ಹಾಗೂ ಅವರ ಕುಟುಂಬದ–ಸದಸ್ಯರು, ಮಕ್ಕಳು ಸಕ್ರೀಯವಾಗಿ ಭಾಗವಹಿಸಿ, ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ◻

***ಎಂ.ವಿ. ವೆಂಕಟೇಶ***

# ದೆಹಲಿ ಒಕ್ಕಲಿಗ ಗೌಡ ಸಂಘದ ವತಿಯಿಂದ ಪದ್ಮಶ್ರೀ, ವೃಕ್ಷಮಾತೆ ಶ್ರೀಮತಿ ತುಳಸಿಗೌಡ ರವರಿಗೆ ಅಭಿನಂದನೆ

ತಾನು ಹುಟ್ಟಿದ ಎರಡೇ ವರ್ಷಕ್ಕೆ ತನ್ನ ತಂದೆಯನ್ನು ಕಳೆದುಕೊಂಡು ಕುಟುಂಬಕ್ಕೆ ವಂಶ ಪಾರಂಪರ್ಯವೇನೋ ಎಂಬಂತೆ ಬಂದಂತಿದ್ದ ಬಡತನದೊಂದಿಗೆ ಜೀವನ ಸಾಗಿಸಲೇಬೇಕಾದ ಅನಿವಾರ್ಯದಲ್ಲಿ ಶಾಲೆಯ ಮೆಟ್ಟಿಲೇರುವ ಕನಸನ್ನೇ ಕೈ ಬಿಟ್ಟು ತನ್ನ ಹಳ್ಳಿಯ ಬಳಿಯೇ ಇದ್ದ ಗಿಡಗಳ ನರ್ಸರಿಗೆ ಬಾಲ್ಯದಿಂದಲೇ ದಿನಗೂಲಿ ಕೆಲಸಕ್ಕೆ ತಾಯಿಯೊಂದಿಗೆ ಹೋಗಿ ಬವಣೆಯ ಬದುಕು ಶುರುಮಾಡಿದ ಶ್ರೀಮತಿ ತುಳಸಿ ಗೌಡರು ಪಟ್ಟ ಕಷ್ಟದ ಬದುಕು, ವ್ಯಥೆ ಅಷ್ಟಿಷ್ಟಲ್ಲ. ತಾನು ಕೆಲಸಕ್ಕೆ ಹೋಗುತ್ತಿದ್ದ ನರ್ಸರಿಯಿಂದಲೇ ಸಣ್ಣ ಸಸಿ ಮತ್ತು ಗಿಡಗಳೊಂದಿಗೆ ಏನೋ ರೀತಿಯ ತಾಯಿ ಮಗುವಿನ ತರದ ಅವಿನಾಭಾವ ಬೆಳೆಸಿಕೊಂಡು ಗಿಡಗಳನ್ನು ನೆಟ್ಟು ಪೋಷಿಸುವ ಪರಿಸರ ಕಾಳಜಿಯ ಹವ್ಯಾಸವನ್ನೇ ಸತ್ಕಾರ್ಯದ ವೃತ್ತಿಯನ್ನಾಗಿ ಮಾಡಿಕೊಂಡು ಸುಮಾರು 30 ಸಾವಿರ ಗಿಡಗಳನ್ನು ನೆಟ್ಟು ಜತನದಿಂದ ಬೆಳೆಸಿದ ಮುಗ್ಧ ಜೀವ, ವೃಕ್ಷಮಾತೆ ಶ್ರೀಮತಿ ತುಳಸಿ ಗೌಡರಿಗೆ ಕೊನೆಗೂ ಭಾರತ ಸರಕಾರ ಪ್ರತಿಷ್ಠಿತ 'ಪದ್ಮಶ್ರೀ' ಪ್ರಶಸ್ತಿಯನ್ನು ನೀಡಿ ಪುರಸ್ಕರಿಸಿದ್ದು ಪ್ರತೀ ಕನ್ನಡಿಗರಿಗೂ ಹೆಮ್ಮೆ ನೀಡಿದೆ. ಅದರಲ್ಲೂ ಪದ್ಮಶ್ರೀ ವಿಜೇತ ವೃಕ್ಷಮಾತೆಯನ್ನು ಹತ್ತಿರದಿಂದ ನೋಡಿ, ಪ್ರೀತಿಯಿಂದ ಆಧರಿಸಿ, ಗೌರವಿಸೋ ಅವಕಾಶ ಸಿಕ್ಕಿದ್ದು ದೆಹಲಿ ಕನ್ನಡಿಗರ ಸಂತಸವನ್ನು ಇಮ್ಮಡಿಗೊಳಿಸಿತು.


ಈ ಅಭಿಮಾನದ ಸಲುವಾಗಿಯೇ 09.11.2021ರಂದು ದೆಹಲಿ ಒಕ್ಕಲಿಗ ಗೌಡ ಸಂಘದ ವತಿಯಿಂದ ಅಧ್ಯಕ್ಷರಾದ ಶ್ರೀ ಅನಂತರಾಮ ಅರಳಿ ರವರ ನೇತೃತ್ವದಲ್ಲಿ ಮುಗ್ಧ ಸಾಧಕಿ, ವೃಕ್ಷಮಾತೆ ಶ್ರೀಮತಿ ತುಳಸಿ ಗೌಡರನ್ನು ಸಂಭ್ರಮದಿಂದ ಆತ್ಮೀಯತೆಯಿಂದ ಸತ್ಕರಿಸಲಾಯಿತು. ಶ್ರೀಮತಿ ತುಳಸಿಗೌಡರು ಮತ್ತವರ ಕುಟುಂಬವರ್ಗ ಸಹ ಈ ಪ್ರೀತಿ ಪೂರ್ವಕ ಗೌರವಾಧರಕ್ಕೆ ಸಂತಸ ವ್ಯಕ್ತಪಡಿಸಿ ಎಲ್ಲರೊಡನೆ ಆತ್ಮೀಯರಾಗಿ ಬೆರೆತು ಮೆಚ್ಚುಗೆಯ ನುಡಿಗಳನ್ನಾಡಿದರು. ಈ ಸಾರ್ಥಕತೆಯ ಕ್ಷಣಗಳಿಗೆ ದೆಹಲಿ ಒಕ್ಕಲಿಗ ಗೌಡ ಸಂಘದ ಪದಾಧಿಕಾರಿಗಳಾದ ಶ್ರೀ ಎ.ಟಿ ಶ್ರೀನಿವಾಸ್, ಶ್ರೀ ನಾರಾಯಣ, ಶ್ರೀ ಗಿರೀಶ್, ಶ್ರೀ ಕೆ.ಎಸ್. ಮೂರ್ತಿ, ಶ್ರೀಮತಿ ಪ್ರತಿಭಾ ಗೌಡ, ಶ್ರೀಮತಿ ಕುಮಾರಿ, ಶ್ರೀಮತಿ ಲಕ್ಷ್ಮಿ ಹಾಗೂ ಶ್ರೀ ಗಜಾನನ ಶರ್ಮ, ಶ್ರೀ ಕಿಶೋರ್ ಮತ್ತು ಶ್ರೀ ಮಂಜೇ ಗೌಡ ಅಲ್ಲದೇ ಕರ್ನಾಟಕ ಭವನದ ಸಿಬ್ಬಂದಿಗಳು ಮತ್ತು ದೆಹಲಿ ಕರ್ನಾಟಕ ಸಂಘ ಖಜಾಂಚಿ ಶ್ರೀ ರಾಧಾಕೃಷ್ಣರವರು ಇನ್ನೂ ಹಲವರು ಸಾಕ್ಷಿಯಾದರು.



ಈ ಅಭಿನಂದನಾ ಕಾರ್ಯಕ್ರಮ ರಾಷ್ಟ್ರೀಯ ಸುದ್ದಿವಾಹಿನಿ ಜೀ ನ್ಯೂಸ್ ನಲ್ಲಿ ಪ್ರಸಾರವಾಗಿದ್ದು ತುಂಬಾ ಮೆರುಗನ್ನು ನೀಡಿತ್ತು. ◻

***ಎ.ಟಿ. ಶ್ರೀನಿವಾಸ***

# ಕನ್ನಡ ನಾಡು ನುಡಿಯ ಶ್ರೀಮಂತಿಕೆ ಹಿರಿದಾದದು ಅದನ್ನು ಉಳಿಸಿ ಬೆಳೆಸುವುದಕ್ಕೆ ನಾವು ಕಂಕಣ ಬದ್ಧರಾಗೋಣ-ಡಾ. ಕೆ.ಎಂ. ಮಹೇಶ್




ಸರ್ವಜನಾಂಗದ ಶಾಂತಿಯ ತೋಟ ಮತ್ತು ರಸಿಕರ ಕಂಗಳ ಸೆಳೆಯುವ ನೋಟವೂ ಸಹಾ ಆಗಿರುವ ನಮ್ಮ ಕನ್ನಡ ನಾಡು ರಾಷ್ಟ್ರಮಟ್ಟದಲ್ಲಿ ಉದ್ಯೋಗಾವಕಾಶ, ಕೈಗಾರಿಕಾ ವಲಯ, ಶೈಕ್ಷಣಿಕ ಪ್ರಗತಿ, ವೈದ್ಯಕೀಯ ಕ್ಷೇತ್ರಗಳಲ್ಲಿ ಮುಂಚೂಣಿಯಲ್ಲಿದೆ. ಕವಿ ಮಹಲಿಂಗರಂಗನು ಸಾರಿರುವ 'ಸುಲಿದ ಬಾಳೆಯ ಹಣ್ಣಿನಂದದಿ ಕಳೆದ ಚಿಗುರಿನ ಕಬ್ಬಿನಂದದಿ...' ಎಂಬ ಪದ್ಯ ಉಲ್ಲೇಖಿಸಿ, ಕನ್ನಡ ಭಾಷೆಯ ಹಿರಿಮೆಗೆ ಹನ್ನೆರಡನೇ ಶತಮಾನದ ವಚನ ಕ್ರಾಂತಿ, ದಾಸ ಸಾಹಿತ್ಯ, ದಲಿತ, ಬಂಡಾಯ ಮತ್ತು ನವೋದಯ ಸಾಹಿತ್ಯವು ನೀಡಿದ ಕೊಡುಗೆಯನ್ನು ಕುರಿತು ಪ್ರಶಂಸಿಸಿದ ಅವರು .ಕನ್ನಡ ನಾಡು–ನುಡಿಯನ್ನು ಉಳಿಸುವುದರ ಕಡೆ ನಾವೆಲ್ಲರೂ ಗಮನ ನೀಡಬೇಕಿದೆ ಎಂದು ಆದಾಯ ತೆರಿಗೆ ಇಲಾಖೆಯ ಹೆಚ್ಚುವರಿ ನಿರ್ದೇಶಕ ಹಾಗೂ ಐ.ಆರ್.ಎಸ್ ಅಧಿಕಾರಿಗಳು ಆದ ಡಾ.ಕೆ. ಎಂ.ಮಹೇಶ್ ಅವರು ಹೇಳಿದರು. ಅವರು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ದೆಹಲಿ ಪ್ರದೇಶ ಘಟಕ ಇದೇ ನವೆಂಬರ್–26ರಂದು ಜೂಮ್ ವೇದಿಕೆ ಜಾಲತಾಣದ ಮೂಲಕ 12 ನೇ ಶರಣ ಚಿಂತನ ಮಾಲಿಕೆಯ ಅಂಗವಾಗಿ ಹಮ್ಮಿಕೊಂಡಿದ್ದ ಕರ್ನಾಟಕ ರಾಜ್ಯೋತ್ಸವ ವಿಶೇಷ ಕಾರ್ಯಕ್ರಮ 'ನಮ್ಮ ನಾಡು ನಮ್ಮ ನುಡಿ ಚಿಂತನ ಹಾಗೂ ಕನ್ನಡ ಕವನಗಳ ವಾಚನ'ದ ಮುಖ್ಯ ಅತಿಥಿಯಾಗಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಮತ್ತೊಬ್ಬ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಮಲೆನಾಡಿನಿಂದ ಗಡಿನಾಡಿಗೆ ತೆರಳಿ, ಐಟಿಬಿಪಿ ಪಡೆಯಲ್ಲಿ ವೈದ್ಯ ಯೋಧರಾಗಿ ಸೇವೆ ಸಲ್ಲಿಸಿ ತಾಯ್ನಾಡಿಗೆ ಮರಳಿ ಪ್ರಸ್ತುತ ಬೆಂಗಳೂರಿನಲ್ಲಿರುವ ಡಾ. ದಮಯಂತಿ ಗೌಡ ರಾವ್ ಅವರು ಮಾತನಾಡಿ, ತಾವು ಹೊರನಾಡಿನ ಕನ್ನಡಿಗರಾಗಿ ವಿವಿಧ ರಾಜ್ಯಗಳಲ್ಲಿ ಸೇವೆ ಸಲ್ಲಿಸುವಾಗ ಕನ್ನಡ ನಾಡಿನ ಬಗ್ಗೆ ಹಾಗೂ ಜನ ಜೀವನ ಹಾಗೂ ಅಲ್ಲಿ ಕನ್ನಡ ಭಾಷೆಯ ಬಳಕೆ ಕುರಿತಾಗಿ ಮಾಹಿತಿಯನ್ನು ನೀಡಿದರು. ವಿದ್ಯಾರ್ಥಿ ದೆಸೆಯಲ್ಲಿದ್ದಾಗ ಮತ್ತು ವೈದ್ಯರಾಗಿ ವೃತ್ತಿ ಜೀವನದೊಂದಿಗೆ ಕನ್ನಡ ಪರ ಕೆಲಸಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡ ಬಗೆಯನ್ನು ಮತ್ತು ತಮ್ಮ ತಂದೆಯವರು ಮಾಡುತ್ತಿದ್ದ ಕನ್ನಡಕ್ಕೆ ಸಂಬಂಧಿಸಿದ ಕೆಲಸಗಳನ್ನು ಪೂರ್ಣಗೊಳಿಸುವ ಮೂಲಕ ಕನ್ನಡಕ್ಕಾಗಿ ನನ್ನನ್ನು ಸಮರ್ಪಿಸಿಕೊಳ್ಳಲು ನಿರ್ಧರಿಸಿದ್ದೇನೆ ಎಂದ ಅವರು ತಮ್ಮ ಜೀವನದ ಯಶಸ್ಸಿನ ಹಿಂದೆ ಕನ್ನಡ ಭಾಷೆ ನಾಡು ನುಡಿಯೇ ಪ್ರೇರಣೆ ಎಂದು ತಮ್ಮ ಕನ್ನಡ ಭಾಷಾಭಿಮಾನವನ್ನು ಮೆರೆದರು. ಸಮೂಹವಾಗಿ ಗಾಯನದ ಮೂಲಕ ಕನ್ನಡ ಕವನಗಳ ಕೆಲವು ಸಾಲುಗಳನ್ನು ಹಾಡಿದರು.

ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ, ರಾಷ್ಟ್ರೀಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಸದಸ್ಯರೂ ಆದ ಡಾ. ಸಿದ್ದರಾಮೇಶ್ವರ ಎಂ. ಕಂಠೀಕರ್ ಅವರು ಮಾತನಾಡಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಕನ್ನಡದಲ್ಲಿ ಮಾತನಾಡಿದ ಎಲ್ಲಾ ಮಕ್ಕಳನ್ನು ಪ್ರಶಂಸಿಸಿದರು. ಪರಿಷತ್ತಿನ ಕಾರ್ಯವೈಖರಿಯ ಕುರಿತಾಗಿ ಮೆಚ್ಚುಗೆ ವ್ಯಕ್ತಪಡಿಸಿದರು.

ಘಟಕದ ಪ್ರಧಾನ ಕಾರ್ಯದರ್ಶಿ ವೈದ್ಯ ಡಾ. ಗುರುರಾಜ್ ಸಂಗೊಂದಿಮಠ ಪ್ರಾಸ್ತಾವಿಕ ನುಡಿಗಳನ್ನಾಡಿ ಹೊರನಾಡಿನಲ್ಲಿ ಹುಟ್ಟಿ ಬೆಳೆದಿರುವ ಕನ್ನಡದ ಮಕ್ಕಳಿಗೆ ಇಂತಹ ಕಾರ್ಯಕ್ರಮಗಳ ಮೂಲಕ ಕನ್ನಡ ಭಾಷೆ ಮತ್ತು ಸಾಹಿತ್ಯ ಒಳಗೊಂಡಂತೆ ಹಲವು ವಿಷಯ ತಿಳಿಸಿಕೊಡುವ ಅತ್ಯುತ್ತಮವಾದ ವೇದಿಕೆಯಾಗಿದೆ. ನಾವೆಲ್ಲ ಈ ನಿಟ್ಟಿನಲ್ಲಿ ಇನ್ನೂ ಹೆಚ್ಚು ಶ್ರಮಿಸಬೇಕಿದೆ ಎಂಬ ಹಿತ ನುಡಿಗಳನ್ನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀ ಚಂದ್ರಶೇಖರ ಎನ್.ಪಿ. ಅವರು ಮಾತನಾಡಿ, ಕನ್ನಡ ಭಾಷೆ ಉಳಿಸಿ ಬೆಳೆಸುವ ಪ್ರಜ್ಞೆ ಮತ್ತು ಪರಿಸರವನ್ನು ರೂಪಿಸಬೇಕಿದೆ. ದೆಹಲಿ ಮತ್ತು ಸುತ್ತ ಮುತ್ತಲಿನ ಎಲ್ಲ ಸ್ಥಳೀಯ ಸಂಘ ಸಂಸ್ಥೆಗಳು ಇಂತಹ ಕಾರ್ಯಕ್ರಮಗಳಲ್ಲಿ ಕನ್ನಡ ಮಕ್ಕಳು ಭಾಗವಹಿಸುವಂತೆ ಮಾಡಿ ಕನ್ನಡ ನಾಡಿನ ಬಗ್ಗೆ ತಿಳಿದುಕೊಳ್ಳಲು ಅವಕಾಶ ಮಾಡಿಕೊಟ್ಟಲ್ಲಿ ಕನ್ನಡ ಸಂಸ್ಕೃತಿ ಸಾಹಿತ್ಯ ಇನ್ನೂ ಹೆಚ್ಚು ಹೆಚ್ಚು ವೇಗವಾಗಿ ಪ್ರಸರಿಸಲು ಸಹಕಾರಿಯಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ದೆಹಲಿಯ ಜೆ.ಎನ್. ಯು. ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥರೂ, ಪ್ರಾಧ್ಯಾಪಕರಾದ ಡಾ. ವಿಶ್ವನಾಥ ಹಾಗು ತುಮಕೂರು ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ವಿದ್ವಾನ್ ಎಂ. ಸಿದ್ದರಾಮಯ್ಯನವರು ಮಾತನಾಡಿ ಪರಿಷತ್ತಿನ ಕಾರ್ಯಕ್ರಮಗಳನ್ನು ಮೆಚ್ಚಿ ಶ್ಲಾಘಿಸಿದರು. ದೆಹಲಿ ಕನ್ನಡಿಗರಾದ ಶ್ರೀಮತಿ ರಾಧಾ ಕೌಜಲಗಿಯವರು ತಾವು ಅಮೇರಿಕಾ ಪ್ರವಾಸದಲ್ಲಿದ್ದು ಅಲ್ಲಿಂದಲೇ ಭಾಗವಹಿಸಿ "ನಮ್ಮ ನಾಡು ನಮ್ಮ ನುಡಿ" ಕಾರ್ಯಕ್ರಮದ ಬಗ್ಗೆ ಮೆಚ್ಚುಗೆ ವ್ಯಕ್ತ ಪಡಿಸಿ ತಾವು ಅಲ್ಲಿಯೂ ಕನ್ನಡ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿರುವುದಾಗಿ ಬಹಳ ಸೊಗಸಾಗಿ ಮಾತನಾಡಿದರು.

ಶ್ರೀಮತಿ ಶಕುಂತಲಾ ಚಂದ್ರಶೇಖರ್ ಅವರ ಸುಶ್ರಾವ್ಯವಾದ 'ವಿಶ್ವ ವಿನೂತನ ವಿದ್ಯಾ ಚೇತನ" ಪ್ರಾರ್ಥನಾ ಗಾಯನದೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಅವರು ಗಾಯನ ಪ್ರಸ್ತುತಿಪಡಿಸುವಾಗ ಅವರ ಮಗಳು ಪರಿಣಿತ ರಾಣಿ ಚೆನ್ನಮ್ಮನ ವೇಷ ಭೂಷಣದೊಂದಿಗೆ ಅವರ ಜೊತೆಗಿದ್ದುದು ರಾಜ್ಯೋತ್ಸವ ವಿಶೇಷ ಕಾರ್ಯಕ್ರಮಕ್ಕೆ ಮೆರುಗು ನೀಡಿತ್ತು.

ಕಾರ್ಯಕ್ರಮದಲ್ಲಿ ಶ್ರೀ ಎಂ.ಎಸ್. ಶ್ರೀಧರ, ಶ್ರೀಮತಿ ಮೈಥಿಲಿ ಅಟ್ಟಾವರ್, ಶ್ರೀ ಕೃಷ್ಣಪ್ಪ, ಶ್ರೀಮತಿ ಶ್ರುತಿ ಕೈಕಾಡೆ, ಕುಮಾರಿ ಶ್ರೇಷ್ಠ ತೇಲಿ, ಮಾ. ಅಭಿಷೇಕ್ ಉಬಾಳೆ, ಮಾ. ಓಂಕಾರೇಶ್ವರ ಸಿ. ಮಾ. ಗಗನ್, ಕು.ಅವನಿ ನೆಲ್ಲಿ, ಕು.ಸಹನಾ ತಿಮ್ಮಪ್ಪ, ಕು. ವೈಭವಿ ಬಂಗಾರಿ, ಕು. ಸಂಚಿತ ನೀಲೂರ, ಕು. ಶ್ರೀದಾ ಅಂಬಳೆ, ಕುಮಾರಿ ಜೈನಾಬ್, ಮಾ.ಮಹ್ಮದ್ ಸಾಹಿಲ್ ಹಾಗೂ ಕು. ಸುದೀತಿ ಅಂಬಳೆ ನಮ್ಮ ನಾಡು–ನುಡಿ ಚಿಂತನ ಹಾಗು ಕನ್ನಡ ಕವನಗಳ ಗಾಯನ ವಾಚನದಲ್ಲಿ ಪಾಲ್ಗೊಂಡರು.

ಘಟಕದ ಕಾರ್ಯದರ್ಶಿ ಶ್ರೀ ಕೆ.ಎಸ್. ಮೂರ್ತಿ ಸ್ವಾಗತಿಸಿದರು. ಶ್ರೀ ರಾಜಕುಮಾರ ನೀಲೂರ ಹಾಗು ಶ್ರೀಮತಿ ಆರಾಧನ ಕೆ.ಸಿ. ಅವರು ಅತಿಥಿಗಳ ಪರಿಚಯ ಮಾಡಿಕೊಟ್ಟರು. ಕಾರ್ಯಕ್ರಮದ ನಿರೂಪಣೆಯನ್ನು ಖಜಾಂಚಿಗಳಾದ ಶ್ರೀ ಶಿವಪ್ಪ ಎಂ ಹಾಗು ಯುವ ಘಟಕದ ಸಂಚಾಲಕ ಶ್ರೀ ಯಲ್ಲಾಲಿಂಗ ಕೊಪ್ಪದ ಅವರು ಯಶಸ್ವಿಯಾಗಿ ನಡೆಸಿಕೊಟ್ಟರು. ಕದಳಿ ಮಹಿಳಾ ವೇದಿಕೆ ದೆಹಲಿ ಘಟಕದ ಅಧ್ಯಕ್ಷೆ ಶ್ರೀಮತಿ ಜಯಶ್ರೀ ಬಸವರಾಜ್ ಅವರು ವಂದನಾರ್ಪಣೆ ಸಲ್ಲಿಸಿದರು.

**ತಿಮ್ಮಪ್ಪ ಜಿ.ಆರ್**
**ಗುರುಗ್ರಾಮ ಕನ್ನಡಿಗ**

# ಭಿವಾಡಿ ಕನ್ನಡ ಸಂಘದಿಂದ ಕರ್ನಾಟಕ ರಾಜ್ಯೋತ್ಸವ ಸಂಭ್ರಮ:

ಭಿವಾಡಿ ಕನ್ನಡ ಸಂಘ ಸೊಸೈಟಿ, ಈ ಬಾರಿಯ ಕನ್ನಡ ರಾಜ್ಯೋತ್ಸವ ಸಮಾರಂಭವನ್ನು "ಎಂದೆಂದಿಗೂ ನೀ ಕನ್ನಡವಾಗಿರು" ಎಂಬ ಶೀರ್ಷಿಕೆಯ ಅಡಿಯಲ್ಲಿ ನವೆಂಬರ್ ತಿಂಗಳ ಕೊನೇ ರವಿವಾರ ದಿನಾಂಕ 28ರಂದು ವಿಜ್ರಂಭಣೆಯಿಂದ ಆಚರಿಸಿತು.

ಮುಖ್ಯ ಅತಿಥಿಗಳಾಗಿದ್ದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು ಹಾಗು ಚಲನಚಿತ್ರ ನಿರ್ದೇಶಕರೂ ಆದ ಶ್ರೀ ಟಿ.ಎಸ್. ನಾಗಾಭರಣರವರು ಮಾತನಾಡಿ ಹೊರನಾಡಿನವರ ಕನ್ನಡ ಸೇವೆಯನ್ನು ಕೊಂಡಾಡಿದ್ದಲ್ಲದೆ ಜನಪ್ರಿಯ ಹುಟ್ಟಿದರೇ ಕನ್ನಡ ನಾಡಲಿ ಹುಟ್ಟಬೇಕು ಚಿತ್ರಗೀತೆಯ ಮೂಲಕ ವೀಕ್ಷಿಸುತ್ತಿದ್ದ ಕನ್ನಡಾಭಿಮಾನಿ ಗಳನ್ನೆಲ್ಲಾ ಮಂತ್ರಮುಗ್ಧರಾಗಿಸಿ ಎಂದೆಂದಿಗೂ ನೀ ಕನ್ನಡವಾಗಿರು ಎಂದು ಎಲ್ಲರಿಗೂ ಹಾರೈಸಿ, ಇನ್ನಷ್ಟು ಕನ್ನಡ ಸೇವೆಯ ಭಾಗ್ಯ ಸಿಗಲಿ ಎಂದು ಸಂತಸ ವ್ಯಕ್ತಪಡಿಸಿದರು.


ಪುಣಾಣಿ ವರ್ಣಿಕಾ ದೇವಾಡಿಗ ಪ್ರಸ್ತುತ ಪಡಿಸಿದ ಗಜಮುಖನೇ ಗಣಪತಿಯೇ ಪ್ರಾರ್ಥನೆಯಿಂದ ಪೂರ್ವಾಹ್ನ 11 ಗಂಟೆಗೆ ಕಾರ್ಯಕ್ರಮ ಆರಂಭವಾಯಿತು. ಭಿವಾಡಿ ಕನ್ನಡ ಕಲಿಕಾ ಕೇಂದ್ರದ ಐದು ಮಂದಿ ಮಕ್ಕಳ ನಾಡಗೀತೆಯೊಂದಿಗೆ ಮುಂದುವರೆದ ಕಾರ್ಯಕ್ರಮದಲ್ಲಿ ಭಿವಾಡಿ ಕನ್ನಡ ಸಂಘದ ಉಪ ಖಜಾಂಚಿ ಶ್ರೀ ನವೀನ ಜೆ.ಎಚ್. ಅವರ ಪರಿಕಲ್ಪನೆಯಲ್ಲಿ ವಿನೂತನವಾಗಿ ರೂಪುಗೊಂಡ ಮೂರು ವಿಧದ ಸ್ಪರ್ಧೆಗಳು ಎರಡು ಗಂಟೆಗಳಿಗೂ ಮೀರಿ ಝೂಮ್ ಮೂಲಕ ಯಶಸ್ವಿಯಾಗಿ ನಡೆದು ಈ ಸಮಾರಂಭ ನೂರಾರು ಜನಮನವನ್ನು ತಲುಪಿ ತಣಿಸುವಂತೆ ಮಾಡಿದವು.

ಭಿವಾಡಿ ಮಕ್ಕಳಿಗಾಗಿ ಮೀಸಲಿದ್ದ ಎರಡು ಸ್ಪರ್ಧೆಗಳಲ್ಲಿ ಮೊದಲನೆಯದಾದ ಭಾಷಣ ಸ್ಪರ್ಧೆಯನ್ನು ನಡೆಸಿಕೊಟ್ಟ ಸಂಘದ ಉಪಾಧ್ಯಕ್ಷೆ ಶ್ರೀಮತಿ ವೀಣಾ ದೇಸಾಯಿ ಅವರು ಸ್ಪರ್ಧೆಗೆ ತೀರ್ಪುಗಾರರಾಗಿ ಆಗಮಿಸಿದ್ದ ಗೌರವಾನ್ವಿತರಾದ ಪ್ರೊ. ವಿಶ್ವನಾಥ, ಮುಖ್ಯಸ್ಥರು, ಜೆ.ಎನ್.ಯು. ಕನ್ನಡ ಭಾಷಾ ಪೀಠ ಹಾಗೂ ಪ್ರೊ. ಗುರುಲಿಂಗಪ್ಪ ಎಂ. ಪಾಟೀಲ್, ಪ್ರಾಂಶುಪಾಲರು, ಜೆ.ಎಸ್. ಎಸ್. ಅಕಾಡೆಮಿ ಆಫ್ ಟೆಕ್ನಿಕಲ್ ಎಜುಕೇಶನ್, ನೋಯ್ಡಾ ಅವರನ್ನು ಪರಿಚಯಿಸಿದರು.

ನಂತರ ಭಿವಾಡಿಯ ಒಂಬತ್ತು ಮಂದಿ ಕನ್ನಡ ಮಕ್ಕಳು ಸ್ಪರ್ಧೆಯಲ್ಲಿ ಹುರುಪಿನಿಂದ ಭಾಗವಹಿಸಿ ತಮ್ಮ ತಮ್ಮ ಜಿಲ್ಲೆಯ ಬಗ್ಗೆ ಮೂರು ನಿಮಿಷಗಳಷ್ಟು ಮಾತನಾಡಿದರು. ಸುಲಲಿತವಾಗಿ ಚಿಕ್ಕದಾದರೂ ಚೊಕ್ಕ ಭಾಷಣವನ್ನು ಮಾಡಿದ ಎಲ್ಲಾ ಕಂದಮ್ಮಗಳು ತಮ್ಮ ಅಸಾಧಾರಣ ಪ್ರತಿಭೆಯನ್ನು ಅಭಿವ್ಯಕ್ತ ಪಡಿಸಿದರು. ಅವರನ್ನೆಲ್ಲಾ ಶ್ರೀಮತಿ ವೀಣಾರವರು ತುಂಬು ಕಂಠದಿಂದ ಶ್ಲಾಘಿಸಿದರು.

ನಂತರ, ಎರಡನೇ ಹಂತದಲ್ಲಿ ಕುತೂಹಲಕಾರಿ ಛದ್ಮವೇಷ ಸ್ಪರ್ಧೆಯನ್ನು ಇನ್ನೋರ್ವ ಉತ್ಸಾಹಿ ಪದಾಧಿಕಾರಿ ಶ್ರೀ ಸುಂದರ ಪಾಂಡಿಯನ್ ನಡೆಸಿಕೊಟ್ಟರು.

ಈ ಸ್ಪರ್ಧೆಯ ತೀರ್ಪುಗಾರರಾದ ಶ್ರೀಅರವಿಂದ ಬಿಜೈ, ಅಧ್ಯಾಪಕರು, ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆ ಹಾಗೂ ಶ್ರೀ ಡಿ.ವಿ.ಎಸ್. ಮೂರ್ತಿ, ಸದಸ್ಯರು, ಗುರುಗಾವ್ ಕನ್ನಡ ಸಂಘ ಮತ್ತು ಕಾವಲು ಸಮಿತಿ ದೆಹಲಿ ಕರ್ನಾಟಕ ಸಂಘ, ಅವರನ್ನು ಪರಿಯಚಿಸಿದ ಸುಂದರ ಪಾಂಡಿಯನ್ ಅವರು, ಈ ಸ್ಪರ್ಧೆಯಲ್ಲಿ ಭಾಗವಹಿಸಿದ ಒಂಬತ್ತು ಮಕ್ಕಳನ್ನು ಕರ್ನಾಟಕದ ವಿವಿಧ ಹೆಸರಾಂತ ವ್ಯಕ್ತಿಗಳ ವೇಷಗಳಲ್ಲಿ ಪ್ರಸ್ತುತ ಪಡಿಸಿದರು.



ಕೊನೆಗೆ, ಎಲ್ಲರೂ ಕಾತರರದಿಂದ ಕಾಯುತ್ತಿದ್ದ ತೀರಾ ಜನಪ್ರಿಯವಾದ ರಸಪ್ರಶ್ನೆ ಸ್ಪರ್ಧೆ ಥಟ್ ಅಂತ ಹೇಳಿ ಮಾದರಿಯಲ್ಲಿ ಆರಂಭವಾಯಿತು. ವೀಕ್ಷಿಸುತ್ತಿದ್ದ ಎಲ್ಲರೂ ತಮ್ಮ ಮನೆಯಿಂದಲೇ ಪಾಲ್ಗೊಳ್ಳಲು ಮುಕ್ತ ಅವಕಾಶವಿದ್ದುದರಿಂದ ಕರ್ನಾಟಕದ ಬಗ್ಗೆ ಕೌತುಕ ಪಡುವಂತ 25 ವಿವಿಧ ಪ್ರಶ್ನೆಗಳನ್ನು ಉತ್ತರಿಸುವಲ್ಲಿ ಎಲ್ಲರೂ ನಾ ಮುಂದು ತಾ ಮುಂದು ಎಂಬಂತೆ ಅತಿ ಉತ್ಸಾಹದಿಂದ ಭಾಗವಹಿಸಿದ್ದರು.

ಶ್ರೀ ನವೀನ ಅವರು ಈ ಸ್ಪರ್ಧೆಯನ್ನು ಬಹಳ ಚೆನ್ನಾಗಿ ನಡೆಸಿಕೊಟ್ಟರು. ಕಾರ್ಯಕ್ರಮಕ್ಕೆ ಆಗಮಿಸಿದ್ದ ಮುಖ್ಯ ಅತಿಥಿಗಳಾದ ಜನಪ್ರಿಯ ಶ್ರೀ ಟಿ.ಎಸ್. ನಾಗಾಭರಣ ಅವರನ್ನು ಪರಿಚಯಿಸಿದರು.

ಅಧ್ಯಕ್ಷೆ ವಹಿಸಿದ್ದ ಸಂಘದ ಅಧ್ಯಕ್ಷರಾದ ಶ್ರೀ ಪ್ರಭು ಪಾಟೀಲ್ ಅವರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ ಎಲ್ಲರಿಗೂ ಶುಭ ಹಾರೈಸಿದರು.

ತೀರ್ಪುಗಾರರಿಂದ ಮೂರೂ ಸ್ಪರ್ಧೆಗಳ ವಿಜೇತರ ಘೋಷಣೆ ನಂತರ ಮಾಡಲಾಯಿತು. ಸಿರಿಗನ್ನಡಂ ಗೆಲ್ಗೆ ಭಾಷಣ ಸ್ಪರ್ಧೆಯಲ್ಲಿ ತನ್ನ ದಾವಣಗೆರೆಯನ್ನು ಚೊಕ್ಕವಾಗಿ ಬಣ್ಣಿಸಿದ ಕುಮಾರ ಪ್ರಥಮ ಜೆ.ಎನ್. ಮೊದಲ ಬಹುಮಾನ, ಬೆಂಗಳೂರಿನ ವಿವಿಧ ವಿಶೇಷಗಳನ್ನು ಕಣ್ಣೆದುರಿಗೆ ತರಿಸಿದ ಕುಮಾರಿ ಸುದೀಶಿ ಅಂಬಳೆ ದ್ವಿತೀಯ ಹಾಗೂ ಮಂಗಳೂರಿನ ಸೊಬಗು ಮತ್ತು ಕಂಪನ್ನು ಸೊಗಸಾಗಿ ವಿವರಿಸಿದ ಕುಮಾರಿ ವಿಭಾ ಭಟ್ ತೃತೀಯ ಬಹುಮಾನ ವಿಜೇತರಾಗಿದ್ದರು.

ಇದೇ ರೀತಿ, ಛದ್ಮ ವೇಷ ಸ್ಪರ್ಧೆಯಲ್ಲಿ ಅಕ್ಕಮಹಾದೇವಿಯನ್ನು ಪ್ರತಿರೂಪಿಸಿದ ಕುಮಾರಿ ಶ್ರೀದಾ ಅಂಬಳೆ ಪ್ರಥಮ ಬಹುಮಾನ ಪಡೆದಿದ್ದು, ಸಂಗೊಳ್ಳಿರಾಯಣ್ಣನಾಗಿ ಬಂದಿದ್ದ ಕುಮಾರ ಶ್ರೀಹರ್ಷ ಜೇವೂರ್ ದ್ವಿತೀಯ ಹಾಗೂ ಕಿತ್ತೂರ ರಾಣಿ ಚೆನ್ನಮ್ಮಳಾಗಿ ಮೆರಗಿದ ಕುಮಾರಿ ಶಾರ್ವರಿ ಶೆಟ್ಟಿ ತೃತೀಯ ಬಹುಮಾನ ಪಡೆದುಕೊಂಡರು.

ಆಕರ್ಷಕ ನಗದು ಬಹುಮಾನದ ಕೌತುಕದ ರಸಪ್ರಶ್ನೆ ಸ್ಪರ್ಧೆಯನ್ನು ಮೂಲತಃ ಕೊಡಗಿನವರಾಗಿದ್ದು ಸಧ್ಯ ಬೆಂಗಳೂರಲ್ಲಿರುವ ಶ್ರೀ ಸುರೇಶ ಬಿ.ಎಮ್. ತನ್ನಮಗ ಪ್ರಣವ್‌ನ ಜೊತೆ ಹಂಚಿಕೊಂಡರು. ಭಿವಾಡಿ ಕನ್ನಡ ಕಲಿಕಾ ಕೇಂದ್ರದ ಪ್ರಥಮ ಶಿಕ್ಷಕಿ ಶ್ರೀಮತಿ ಅರುಣ ನಾಗಪ್ಪಾ ಅವರು ದ್ವಿತೀಯ ಹಾಗೂ ಉತ್ತರಪ್ರದೇಶದ ಲಕೀಮ್ ಪುರದಲ್ಲಿರುವ ಕನ್ನಡಿಗ ಶ್ರೀ ಸಂತೋಷ್ ಎಸ್. ಯು. ಅವರು ತೃತೀಯ ಬಹುಮಾನ ಪಡೆದರು.

ಕೊರೊನಾ ಕಾಲದ ಭೀತಿಯಿಂದಾಗಿ ಜಾಲತಾಣದ ಮೂಲಕ ಕಾರ್ಯಕ್ರಮ ಆಯೋಜಿಸುವ ಪ್ರಮೇಯ ಬಂದೊದಗಿದ್ದರೂ ರಾಜ್ಯದ 66ನೇ ರಾಜ್ಯೋತ್ಸವವನ್ನು ಅದ್ದೂರಿಯಿಂದ ಆಚರಿಸಿದ ಸಂತಸವಂತೂ ಭಿವಾಡಿಯ ಎಲ್ಲಾ ಕನ್ನಡಿಗರದ್ದಾಗಿತ್ತು.

ಕಾರ್ಯಕ್ರಮದ ಸ್ವಾಗತ ಭಾಷಣವನ್ನು ಸಂಘದ ಉಪಾಧ್ಯಕ್ಷರಾದ ಶ್ರೀ ಗೋಪಾಲಕೃಷ್ಣ ಭಟ್ ಅವರು ಮಾಡಿದರು. ಕೊನೆಯಲ್ಲಿ ಕಾರ್ಯದರ್ಶಿ ಶ್ರೀ ಸುಧಾಕರ ಶೆಟ್ಟಿಯವರು ಭಾಗವಹಿಸಿದ ಅತಿಥಿ ಗಣ್ಯರು ಹಾಗು ಎಲ್ಲರಿಗೂ ವಂದನಾರ್ಪಣೆ ಅರ್ಪಿಸಿದರು. ಶ್ರೀ ನವೀನ ಅವರು ಲವಲವಿಕೆಯಿಂದ ಕಾರ್ಯಕ್ರಮ ನಿರೂಪಣೆ ಮಾಡಿದರು.

***ಶ್ರೀ ಗೋಪಾಲ ಕೃಷ್ಣ ಭಟ್***

## ಶ್ರದ್ಧಾಂಜಲಿ

### ಬಿ.ಪಿ. ಉತ್ತಪ್ಪ ನಿಧನ



ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯಲ್ಲಿ 1992–94 ಮತ್ತು 1999–2006 ರ ಅವಧಿಯಲ್ಲಿ ಖಜಾಂಚಿಯಾಗಿ ಸೇವೆ ಸಲ್ಲಿಸಿದ ಸಂಘದ ಆಜೀವ ಸದಸ್ಯ ಶ್ರೀ ಬಿ.ಪಿ. ಉತ್ತಪ್ಪ ಅವರು ದಿನಾಂಕ 17.11.2021ರಂದು ಬೆಂಗಳೂರಿನಲ್ಲಿ ನಿಧನರಾಗಿದ್ದಾರೆ ಎಂದು ತಿಳಿಸಲು ವಿಷಾದಿಸುತ್ತೇವೆ.

ಇವರು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿಯೂ ಖಜಾಂಚಿಯಾಗಿ ಮತ್ತು ಕಾರ್ಯದರ್ಶಿಯಾಗಿ ಕನ್ನಡ ಸೇವೆಯನ್ನು ಸಲ್ಲಿಸಿರುತ್ತಾರೆ.

ಶ್ರೀಯುತರ ಆತ್ಮಕ್ಕೆ ಚಿರಶಾಂತಿ ಸಿಗಲಿ ಮತ್ತು ಅವರ ಕುಟುಂಬಕ್ಕೆ ಅವರ ಅಗಲುವಿಕೆಯ ದು:ಖವನ್ನು ಸಹಿಸುವ ಶಕ್ತಿಯನ್ನು ಭಗವಂತನು ನೀಡಲಿ ಎಂದು ದೆಹಲಿ ಕರ್ನಾಟಕ ಸಂಘ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಪ್ರಾರ್ಥಿಸುತ್ತದೆ.

# ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಶನ್‌ನಲ್ಲಿ ಕರ್ನಾಟಕ ರಾಜ್ಯೋತ್ಸವ

ದಿನಾಂಕ 19.11.2021ರಂದು ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಶನ್ ನಿಂದ ಕರ್ನಾಟಕ ರಾಜ್ಯೋತ್ಸವವನ್ನು ಅತ್ಯಂತ ಹುರುಪು, ಉತ್ಸಾಹದಿಂದ ಆಚರಿಸಿದರು. ಸ್ನೇಹಾ ಸದಸ್ಯೆಯರು ನಾಡಗೀತೆಯನ್ನು ಹಾಡುವುದರ ಮೂಲಕ ಕಾರ್ಯಕ್ರಮ ಆರಂಭವಾಯಿತು. ಅಧ್ಯಕ್ಷೆ ಶ್ರೀಮತಿ ಸರೋಜ ಮಾಧವ ಅವರು ತಮ್ಮ ಸ್ವಾಗತ ಮತ್ತು ಪ್ರಾಸ್ತಾವಿಕ ಭಾಷಣ ಮಾಡಿ ಕನ್ನಡ-ನಾಡು, ನುಡಿಯ ಮಹತ್ವದ ಬಗ್ಗೆ ಅತ್ಯಂತ ಅರ್ಥಪೂರ್ಣವಾಗಿ ಮಾತನಾಡಿದರು.

ಕಾರ್ಯಕ್ರಮದ ವಿಶೇಷ ಆಹ್ವಾನಿತರಾಗಿ ಆಗಮಿಸಿದ ಗುರುಗಾಂವ್‌ನ ಪ್ರತಿಷ್ಠಿತ ದಂತ ವೈದ್ಯೆ ಹಾಗೂ ಅಕ್ಯೆರಾ ಡೆಂಟಲ್ ಕ್ಲಿನಿಕ್‌ನ ಒಡತಿ, ಕನ್ನಡಿಗರೇ ಆದ ಡಾ. ಕೃತಿ ಮರೋಳಿಯವರು ಈ ಸಮಾರಂಭಕ್ಕೆ ಕಳೆ ನೀಡಿದರು.

ಈ ವರ್ಷದ ಕರ್ನಾಟಕ ರಾಜ್ಯೋತ್ಸವವನ್ನು ವಿಶೇಷ ರೀತಿಯಲ್ಲಿ ಆಚರಿಸಿದ ಸ್ನೇಹಾ ಸದಸ್ಯೆಯರು 1960-70 ದಶಕದ ಕನ್ನಡ ಚಲನಚಿತ್ರದ ನಾಯಕಿಯರಂತೆ ಅಲಂಕಾರ, ಕೇಶವಿನ್ಯಾಸವನ್ನು ಮಾಡಿಕೊಂಡು, ಅವರಂತೆ ನಟನೆಯನ್ನು ಅನುಕರಿಸಿ ಅವರ ಸಿನೆಮಾದ ಜನಪ್ರಿಯ ಚಿತ್ರಗೀತೆಗಳನ್ನು ಹಾಡುವ ಮೂಲಕ ಕಾರ್ಯಕ್ರಮಕ್ಕೆ ಮೆರುಗು ತಂದರು.

ಈ ಸ್ಪರ್ಧೆಯಲ್ಲಿ ಡಾ. ಅಹಲ್ಯಾಚಿಂತಾಮಣಿ, ಆಶಾ ಶ್ಯಾಮಸುಂದರ್, ಶೋಭಾ ಗೌಡ, ಪ್ರತಿಭಾ ಗೌಡ, ಕುಮಾರಿ, ಉಷಾ ಕುಮಾರ್, ಲಕ್ಷ್ಮೀ ಕಿಣಿ ಇವರೆಲ್ಲರ ಅಭಿನಯ ಸಭಿಕರೆಲ್ಲರೂ ಮೂಗಿನ ಮೇಲೆ ಬೆರಳೇರಿಸುವಷ್ಟು ಚೆನ್ನಾಗಿ ಮೂಡಿಬಂತು.



ಶ್ರೀಮತಿ ಲತಾ ನರೇಂದ್ರ ಹಾಗೂ ಸುಷ್ಮಾ ರಾವ್ ಅವರು ಕನ್ನಡ ಚಲನಚಿತ್ರ ಗೀತೆಗಳನ್ನು ಸುಶ್ರಾವ್ಯವಾಗಿ ಹಾಡಿ ಎಲ್ಲರನ್ನೂ ರಂಜಿಸಿದರು.

ಮಿನುಗುತಾರೆ ಕಲ್ಪನಾ ಪಾತ್ರವನ್ನು ಅನುಕರಿಸಿ ನಟಿಸಿದ ಶ್ರೀಮತಿ ಪ್ರತಿಭಾಗೌಡ ಮೊದಲ ಬಹುಮಾನ ಪಡೆದರೆ, ಒನಕೆ ಓಬವ್ವನ ಪಾತ್ರ ಮಾಡಿದ ಶ್ರೀಮತಿ ಆಶಾ ಶ್ಯಾಮಸುಂದರ್ ಅವರು ದ್ವಿತೀಯ ಬಹುಮಾನ ತಮ್ಮದಾಗಿಸಿಕೊಂಡರು. ಅತಿಥಿಯಾಗಿ ಆಗಮಿಸಿದ ಡಾ. ಕೃತಿ ಮರೋಳಿಯವರು ಈ ಸ್ಪರ್ಧೆಯ ನಿರ್ಣಾಯಕರಾಗಿಯೂ ಕಾರ್ಯ ನಿರ್ವಹಿಸಿದರು.

ಡಾ. ಕೃತಿ ಮರೋಳಿಯವರು ದಂತ ಆರೋಗ್ಯದ ಮಹತ್ವದ ಬಗ್ಗೆ ಮಾತನಾಡಿ. ದೇಹದ ಇತರ ಅಂಗಗಳ ಆರೋಗ್ಯದ ಬಗ್ಗೆ ಗಮನ ನೀಡುವಂತೆ ಹಲ್ಲಿನ ಆರೋಗ್ಯಕ್ಕೂ ಗಮನ ನೀಡುವುದು ಎಷ್ಟು ಅವಶ್ಯಕ ಎಂಬುದನ್ನು ಮನಮುಟ್ಟುವಂತೆ ವಿವರಿಸಿದರು. ಹಲ್ಲಿನ ಆರೋಗ್ಯವನ್ನು ಸುಸ್ಥಿತಿಯಲ್ಲಿ ಇಟ್ಟುಕೊಳ್ಳಲು ಕೆಲವೊಂದು ಮನೆ ಮದ್ದನ್ನು ಮಾಡಿಕೊಳ್ಳುವಂತೆ ಸಲಹೆ ನೀಡಿದರು.

ಕಾರ್ಯಕ್ರಮದ ಕೊನೆಯಲ್ಲಿ ರೀನಾ, ಪಾರ್ವತಿ, ರತ್ನ, ಪ್ರತಿಭಾ, ಸರೋಜ ಮಾಧವ ಇವರೆಲ್ಲರೂ ಕರ್ನಾಟಕ ರಾಜ್ಯೋತ್ಸವ ಸಂಬಂಧಿತ ಗೀತೆಗಳನ್ನು ಗಳನ್ನು ಹಾಡಿದರು. ಈ ದಿನದ ಭೋಜನ ವ್ಯವಸ್ಥೆಯನ್ನು ಸ್ನೇಹಾದಿಂದ ಆಯೋಜಿಸಲಾಗಿತ್ತು. ಶ್ರೀಮತಿ ಲಕ್ಷ್ಮೀ ಕಿಣಿ ಕಾರ್ಯಕ್ರಮವನ್ನು ನಿರ್ವಹಿಸಿದರೆ, ಶ್ರೀಮತಿ ರತ್ನ ಅವರು ಧನ್ಯವಾದ ಹೇಳುವುದರೊಂದಿಗೆ ಸಮಾರಂಭವನ್ನು ಮುಕ್ತಾಯಗೊಳಿಸಲಾಯಿತು. ◘

***ಲಕ್ಷ್ಮೀ ಕಿಣಿ***

## ಅಭಿಮತ ಓದುಗರ ಅನಿಸಿಕೆ




ಅಭಿಮತ ತಲುಪಿದೆ. ಹೊಸ ಕಾರ್ಯಕಾರಿ ಸಮಿತಿಯ ಎಲ್ಲ ಸದಸ್ಯರಿಗೂ ಅಭಿನಂದನೆಗಳು. ಹಾಗೆಯೇ ಸಂಘದ ರಥವನ್ನು ಇಲ್ಲಿವರೆಗೆ ಎಳೆದು ತಂದ ಹಿಂದಿನ ಸಮಿತಿಯವರಿಗೂ ಕೃತಜ್ಞತೆಗಳು. ಅಭಿಮತಕ್ಕೆ ಹೊಸ ಸಮಿತಿ ಬಂದಿದೆ. ಅದರ ಸಂಪಾದಕರಾದ ಶ್ರೀ ಚಂದ್ರಶೇಖರ ಎನ್.ಪಿ. ಅವರ ನೇತೃತ್ವದಲ್ಲಿ ಅಭಿಮತ ಇನ್ನಷ್ಟು ಎತ್ತರಕ್ಕೆ ಏರಲಿ. ಹಿಂದಿನ ಸಂಪಾದಕರಾದ ಡಾ. ಅವನೀಂದ್ರನಾಥ ರಾವ್ ಅವರ ಸೇವೆ ಸ್ಮರಣಾರ್ಹ. ಸಂಘದ 75ನೇ ವರ್ಷದ ಅಚರಣೆ ಅರ್ಥಪೂರ್ಣವಾಗಿ ನಡೆಯಲಿ ಎಂದು ಆಶಿಸುತ್ತೇನೆ. ಶುಭಾಶಯಗಳೊಂದಿಗೆ

***ಡಾ. ಪುರುಷೋತ್ತಮ ಬಿಳಿಮಲೆ***

ಲೇಖಕಿ ಶ್ರೀಮತಿ. ಪ್ರೇಮಲತಾ ಅವರ ಕಾರಂತರಿಗೆ ನಮನ ಅದ್ಭುತವಾದ ನುಡಿಗತ್ತು (ನುಡಿಗಟ್ಟು), ಓದಿ ಅತೀವ ಸಂತೋಷವಾಯಿತು. ಶ್ರೀಮತಿ. ಪ್ರೇಮಲತಾ ಮೇಡಮ್ ಅವರಿಗೆ ನಮ್ಮ ಮೆಚ್ಚುಗೆ ಹಾಗೂ ಹೃದಯ ಪೂರ್ವಕ ಶುಭಾಶಯಗಳನ್ನು ತಿಳಿಸುವಿರಾಗಿ ಆಶಿಸುತ್ತೇನೆ.

***ಪ್ರಮೇಶ್ವರಗೌಡ. ಶಿ. ಎರೇಸೀಮಿ***
ಪ್ರಧಾನ ಕಾರ್ಯದರ್ಶಿ, ವಿಶ್ವವೀರಶೈವ ಲಿಂಗಾಯತ ಮಹಾಸಭಾ, ಬೆಂಗಳೂರು

ತುಂಬಾ ಚೆನ್ನಾಗಿ ಮೂಡಿ ಬಂದಿದೆ, ಓದಿ ಮನಸ್ಸಿಗೆ ಮುದ ತಂದಿದೆ. ಇದೇ ರೀತಿ ಪ್ರತಿ ಸಂಚಿಕೆಯಲ್ಲಿ ವಿಭಿನ್ನತೆ ಅಳವಡಿಸಿದರೆ ಇನ್ನೂ ಹೆಚ್ಚಿನ ಆಕರ್ಷಿತವಾಗುತ್ತವೆ ಎಂದು ನನ್ನ ಅನಿಸಿಕೆ. ಕನ್ನಡ ರಾಜ್ಯೋತ್ಸವದ ಸಂಚಿಕೆ ಪ್ರತಿರೂಪವಾಗಿ ಪ್ರತಿ ಪುಟದಲ್ಲಿ ಹಳದಿ-ಕೆಂಪು ಪಟ್ಟಿ ಒಂದು ರೀತಿಯ ಆಕರ್ಷಣೆ !!!!

***ವಿಶುಕುಮಾರ್***
*ಆಜೀವ ಸದಸ್ಯರು, ದೆ.ಕ.ಸಂಘ*

ಭಾಷೆ ಹಾಗೂ ದೇಶಾಭಿಮಾನವನ್ನು ಉತ್ತೇಜಿಸುವ ಈ ಬಾರಿಯ ಅಭಿಮತದಲ್ಲಿನ ನಿಮ್ಮ ಸಂಪಾದಕೀಯ ಮಾತು ಸಕಾಲಿಕ ಹಾಗೂ ಅರ್ಥಪೂರ್ಣವಾಗಿದೆ ಸರ್.

***ಅರವಿಂದ ಬಿಜ್ಜೈ***
ಕನ್ನಡ ಶಿಕ್ಷಕರು, ದೆಹಲಿ ಕನ್ನಡ ಶಾಲೆ

ಮಾನ್ಯ ಸಂಪಾದಕರೆ,

"ಸಂವಾದ ರಹಿತ ಶಿಕ್ಷಣ ಆತಂಕಕಾರಿ" ಎಂಬ ಶಿರೋನಾಮೆಯಡಿಯ ಸಂಪಾದಕೀಯದಲ್ಲಿ ಕರೋನೋತ್ತರದ ಶಿಕ್ಷಣದ ಬಗೆಗಿನ ತಮ್ಮ ಕಾಳಜಿ, ಕಳ-ಕಳಿ ಹಾಗೂ ಚಿಂತನೆಗಳನ್ನು ಬಹು ಆಯಾಮಗಳಿಂದ ಕಟ್ಟಿಕೊಟ್ಟಿದ್ದೀರಿ. ಸೆಪ್ಟೆಂಬರ್-2021ರ ಅಭಿಮತ ಸುಂದರವಾಗಿ ಮೂಡಿ ಬಂದಿದ್ದು, ಬಹು ವಿಷಯಗಳ ಸಂಗ್ರಹ ಯೋಗ್ಯ ಲೇಖನಗಳನ್ನು ಒಳಗೊಂಡಿದೆ. ತಮಗೂ ಸೇರಿದಂತೆ, ತಮ್ಮ ನೇತೃತ್ವದ ಸಂಪಾದಕೀಯ ಮಂಡಳಿಗೆ ಧನ್ಯವಾದಗಳು.

***ಪರಸುರಾಮ ಅಸ್ಕಿ,*** *ತುಂಬಗಿ*

# ಸಂವಿಧಾನದ ಆಶಯಗಳ ಅನುಷ್ಠಾನಕ್ಕೆ ಶ್ರೀ ಗೋ. ಮಧುಸೂಧನ್ ಕರೆ



ಸಂವಿಧಾನದ ಆಶಯಗಳಿಗೆ ತಕ್ಕಂತೆ ನಡೆಯಬೇಕು. ಸಂವಿಧಾನ ರಚನಾಕರ್ತರ ಆಶಯಗಳ ಕುರಿತು ಚಿಂತನೆ ಮಾಡುವ ದಿನವೇ ಭಾರತ ಸಂವಿಧಾನ ದಿನಾಚರಣೆಯಾಗಿದೆ ಎಂದು ಹಿರಿಯ ರಾಜಕೀಯ ದುರೀಣ ಹಾಗೂ ತಜ್ಞ ರಾದ ಶ್ರೀ ಗೋ. ಮಧುಸೂದನ್ ಅವರು ಪ್ರತಿಪಾದಿಸಿದರು.

ನವದೆಹಲಿ ಕರ್ನಾಟಕ ಭವನದ ವತಿಯಿಂದ ಏರ್ಪಡಿಸಿದ್ದ ಭಾರತದ ಸಂವಿಧಾನ ದಿನಾಚರಣೆ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದ ಅವರು, ಈ ದಿನ ಬಹಳ ಪವಿತ್ರವಾದ ದಿನ. ಕೇವಲ ಸಂವಿಧಾನದ ಪೀಠಿಕೆ ಓದುವುದಕ್ಕೆ ಸೀಮಿತವಾಗಬಾರದು. ಸಂವಿಧಾನ ರಚನೆಯಾಗಿ 71ವರ್ಷ ಪೂರ್ಣಗೊಂಡರೂ ಆಶಯವನ್ನು ಅರ್ಥಮಾಡಿಕೊಂಡು ಯಶಸ್ವಿಯಾಗಿ ಅನುಷ್ಠಾನವಾಗದಿರುವುದು ವಿಷಾದನೀಯ. ಸಂವಿಧಾನದ ಆಶಯಗಳು ಗಟ್ಟಿಯಾಗಿ ನಿಂತು ಪ್ರಜಾಸತ್ತಾತ್ಮಕ ವಾತಾವರಣ ಬೆಳಗಬೇಕು ಎಂಬುದು ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಆಶಯವಾಗಿದೆ. ಇದನ್ನು ಈಡೇರಿಸಲು ಕಂಕಣಬದ್ದರಾಗಬೇಕು ಎಂದು ಅವರು ಕರೆ ನೀಡಿದರು.

ಕರ್ನಾಟಕ ಭವನ–1ರ 'ಕಾವೇರಿ', ಕರ್ನಾಟಕ ಭವನ–2ರ 'ಶರಾವತಿ' ಹಾಗೂ ಕರ್ನಾಟಕ ಭವನ–3 'ಭೀಮಾ' ಕಟ್ಟಡದ ಅವರಣದಲ್ಲಿ ಸಂವಿಧಾನ ದಿನಾಚರಣೆಯ ಅಂಗವಾಗಿ ಭಾಗವಹಿಸಿದ ಎಲ್ಲರಿಗೂ ಸಂವಿಧಾನದ ಪೀಠಿಕೆಯಲ್ಲಿ ಉಲ್ಲೇಖಿತವಾಗಿರುವ ನುಡಿಗಳನ್ನು ಬೋಧಿಸಿ ಪ್ರತಿಜ್ಞೆಯನ್ನು ಮಾಡಿಸಲಾಯಿತು.

ಕರ್ನಾಟಕ ಭವನ–1ರಲ್ಲಿ ವಿಶೇಷ ನಿವಾಸಿ ಆಯುಕ್ತರು, ಶ್ರೀ ವಿಜಯ ರಂಜನ್ ಸಿಂಗ್, ಅವರು, ಕರ್ನಾಟಕ ಭವನ 2ರಲ್ಲಿ ಶ್ರೀ ಎಸ್ ಕುಮಾರ ಮತ್ತು ಭವನ 3ರಲ್ಲಿ ಹಿರಿಯ ವ್ಯವಸ್ಥಾಪಕರಾದ ಶ್ರೀ ಶೇಖರ್ ಅವರು ಪ್ರತಿಜ್ಞೆಯನ್ನು ಭೋದಿಸಿದರು. ಈ ಸಂದರ್ಭದಲ್ಲಿ ನಿವಾಸಿ ಆಯುಕ್ತರವರ ಕಛೇರಿಯ ಹಾಗೂ ಕರ್ನಾಟಕ ಭವನದ ಹಿರಿಯ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು. ಈ ಕಾರ್ಯಕ್ರಮವನ್ನು ಶ್ರೀಮತಿ ಅಮೀತ ಪ್ರಸಾದ್, ಐಎಎಸ್, ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ನಿವಾಸಿ ಆಯುಕ್ತರವರ ನಿರ್ದೇಶನದಂತೆ ನೆರವೇರಿಸಲಾಯಿತು. ◻


**ಕುಮಾರ್ ಎಸ್**

## ನವದೆಹಲಿಯ ಕರ್ನಾಟಕ ಭವನದಲ್ಲಿ ಕನಕದಾಸರ ಜಯಂತಿ ಆಚರಣೆ



ಕೌಟಿಲ್ಯ ಮಾರ್ಗದಲ್ಲಿರುವ ಕರ್ನಾಟಕ ಭವನ–1ರ 'ಕಾವೇರಿ' ಅನೆಕ್ಸ್ ಕಟ್ಟಡದಲ್ಲಿ ದಿನಾಂಕ : 22.11.2021ರ ಸೋಮವಾರ ಸಂತ ಶ್ರೇಷ್ಠ ಭಕ್ತ ಕನಕದಾಸ ಜಯಂತಿಯನ್ನು ಆಚರಿಸಲಾಯಿತು.

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ನವದೆಹಲಿಯ ಕರ್ನಾಟಕ ಭವನದ ನಿವಾಸಿ ಆಯುಕ್ತರೂ ಆದ ಡಾ. ಅಮಿತಾ ಪ್ರಸಾದ ಅವರು ಕನಕದಾಸರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಪುಷ್ಪಾರ್ಚನೆ ಮಾಡಿದರು. ನವದೆಹಲಿಯ ಕರ್ನಾಟಕ ಭವನದ ವಿಶೇಷ ನಿವಾಸಿ ಆಯುಕ್ತ ವಿಜಯ ರಂಜನ್ ಸಿಂಗ್, ಉಪ ನಿವಾಸಿ ಆಯುಕ್ತ ಎಚ್. ಪ್ರಸನ್ನ ಹಾಗೂ ಕರ್ನಾಟಕ ಭವನದ ಅಧಿಕಾರಿ, ಸಿಬ್ಬಂದಿ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ◻







ತಾಯ್ನಾಡಿಗೆ ಮರಳುತ್ತಿರುವ ಕನ್ನಡಿಗರಿಗೆ ದೆಹಲಿ ಕನ್ನಡ ಸಂಘ ಸಂಸ್ಥೆಗಳಿಂದ ಬೀಳ್ಕೊಡುಗೆ ಮತ್ತು ಸನ್ಮಾನ



ಸ್ಥಳೀಯ ಮಹಿಳಾ ಕಲಾವಿದರಿಂದ ನಾಡಗೀತೆ

Delhi Karnataka Sangha Abhimata
Dec-2021, Vol. No.32, Issue No. 3, Price Rs.1/-
RNI Regn. No. 53405/91, DL-SW-1/4016/19-21
Date of Publication : Dec 8th / 9th, Posting Date : 10th / 11th, Total Pages-28, Monthly-Language Kannada
Printed & Published by R. Renukumar, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Chandrashekara N.P

ಕೃಷಿ-ಆಹಾರ ಮೇಳದಲ್ಲಿ ದೆಹಲಿ ಕನ್ನಡಿಗರ ಆಹಾರ ಮಳಿಗೆಗಳು







